Swabhimani Sahakari
Pages : 36 / 12₹

# ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

Volume - 19
Issue - 06
June - 2022

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

ಜೂನ್ 5

## ವಿಶ್ವ ಪರಿಸರ 2022ರ ಧ್ಯೇಯವಾಕ್ಯ.
## ಒಂದೇ ಭೂಮಿ: ರಕ್ಷಿಸೋಣ ಸಂರಕ್ಷಿಸೋಣ



ಈ ಲೋಕವೆಲ್ಲ ನೀನೆ ಇರುವ ಪೂಜಾ ಮಂದಿರ
ನಾ ಕಾಣುತಿರುವ ನೋಟವೆಲ್ಲ ಸತ್ಯ ಸುಂದರ
ಮುಳ್ಳಿನ ಗಿಡದಲಿ ಅಂದದ ಹೂವು
ಕೆಸರಲಿ ನಗುವ ತಾವರೆ ಚೆಲುವು
ಸೊಬಗಿನ ಸಿರಿಯನು ಚೆಲ್ಲಿರುವೆ
ಮಮತೆಯ ಮಳೆಯ ಸುರಿದಿರುವೇ..

–ಕು. ರಾ. ಸೀತಾರಾಮ ಶಾಸ್ತ್ರಿ



ಜೂನ್21 ರಂದು ಮೈಸೂರಿನಲ್ಲಿ
ಪ್ರಧಾನಿ ನರೇಂದ್ರ ಮೋದಿ ಅವರಿಂದ

## ವಿಶ್ವಯೋಗ ದಿನಾಚರಣೆ



ಸೌಹಾರ್ದ ಸಹಕಾರಿಗಳ
ಸಂಖ್ಯೆ : 5580

ಇ-ಸ್ಟಾಂಪಿಂಗ್
ಕೇಂದ್ರಗಳ ಸಂಖ್ಯೆ : 1510

# ಸಹಕಾರಿ ಕಾರ್ಯಕರ್ತರ ಗುಣಲಕ್ಷಣಗಳ ಹಾಗೂ ಕ್ರೀಯಾಶೀಲತೆ ಬಗ್ಗೆ ವಿಸ್ತೃತ ತಿಳುವಳಿಕೆ : ಅನುಷ್ಠಾನಕ್ಕೆ ಆದ್ಯತೆ : ಸಹಕಾರಿ ಕ್ಷೇತ್ರದ ಗುಣಮಟ್ಟ ಸುಧಾರಣೆ ಸಹಾಯಕಾರಿ.



ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ

> ರಾಜ್ಯದಲ್ಲಿ ಪ್ರಸ್ತುತ 5580 ಸೌಹಾರ್ದ ಸಹಕಾರಿಗಳಲ್ಲಿ ನೊಂದಣೆಯಾಗಿ ಅದರಲ್ಲಿ 916 ಸೌಹಾರ್ದ ಸಹಕಾರಿಗಳು ಕಾರ್ಯನಿರತರಾಗಿದ್ದು ಉಳಿದವುಗಳು ಕಾರ್ಯನಿರತರಾಗದೆ ಸಮಾಪನೆಗೆ ಶಿಫಾರಸಾಗಿರುವುದು ವಿಷಾದಕರ. ಅತ್ಯಂತ ಉತ್ಸಾಹದಿಂದ ಸೌಹಾರ್ದ ಸಹಕಾರಿಗಳ ನೊಂದಣೆ ಮಾಡಿ ನಡೆಸಲು ಸಾಧ್ಯವಾಗದೆ ನಿಷ್ಕ್ರೀಯವಾಗಿ ಕಡೆಗೆ ಸಮಾಪನೆಗೆ ಶಿಫಾರಸ್ಸಾಗಿರುವ ಹಂತಕ್ಕೆ ತಲುಪಿರುವುದು ಮತ್ತು ಕೆಲವು ಸಹಕಾರಿಗಳು ಇನ್ನೂ ಪ್ರಾರಂಭದ ಹಂತದಲ್ಲಿಯೇ ಉಳಿದುಕೊಂಡು ಯಾವುದೇ ಬೆಳವಣಿಗೆ ಕಾಣದಿರುವುದು ಇನ್ನು ಕೆಲವು ಸೌಹಾರ್ದ ಸಹಕಾರಿಗಳು ಹಲವು ವರ್ಷಗಳು ಕಳೆದರೂ ನಿರೀಕ್ಷೆಯ ಬೆಳವಣಿಗೆ ಕಾಣದಿರುವುದು ಸಹಕಾರಿ ಕಾರ್ಯಕರ್ತರುಗಳ ಕ್ರೀಯಾಶೀಲತೆಯಲ್ಲಿ ಕೊರತೆ ಎದ್ದು ಕಾಣುತ್ತಿದೆ ಎಂದು ಭಾವಿಸಲಾಗಿದೆ.

**ಆತ್ಮೀಯ ಸಹಕಾರಿ ಬಂಧುಗಳಿಗೆ ನಮಸ್ಕಾರಗಳು.**

ರಾಜ್ಯದ ಸಮಗ್ರ ಸಹಕಾರಿ ಕ್ಷೇತ್ರದ ಹಾಗೂ ವಿಶೇಷವಾಗಿ ಸೌಹಾರ್ದ ಸಹಕಾರಿ ಕ್ಷೇತ್ರದ ಗುಣಮಟ್ಟ ಅಭಿವೃದ್ಧಿಗಾಗಿ ಸಹಕಾರಿ ಕಾರ್ಯಕರ್ತರುಗಳಲ್ಲಿ ಕ್ರೀಯಾಶೀಲತೆಯನ್ನು ಹೆಚ್ಚಿಸುವಂತಹ ಕ್ರೀಯಾಶೀಲತೆಯ ಅವಶ್ಯಕತೆಯ ಬಗ್ಗೆ ತಿಳುವಳಿಕೆ ನೀಡುವಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರಿಂದ ಸೌಹಾರ್ದ ಸಹಕಾರಿಗಳ ಗುಣಮಟ್ಟ ಸುಧಾರಣೆಗೆ ಆದ್ಯತೆ ನೀಡುವಂತಾಗುತ್ತದೆ. ಸಹಕಾರಿ ಕಾರ್ಯಕರ್ತರ ಬಗ್ಗೆ ದಿನಾಂಕ 24 ಮೇ 2022 ರಂದು ಶಿವಮೊಗ್ಗದ ನಿಟ್ಟೂರು ಹತ್ತಿರ ಕಲ್ಯಾಣಿ ಚೌಕದ ಹತ್ತಿರ ನಡೆದ ವಿಷಯಾಧಾರಿತ ತರಬೇತಿ ಕಾರ್ಯಕ್ರಮದಲ್ಲಿ ಹಿರಿಯ ಸಾಮಾಜಿಕ ಕಾರ್ಯಕರ್ತ ಶ್ರೀ ಪಟ್ಟಾಭಿರಾಮರವರು ಪ್ರಸ್ತುತ ಪಡಿಸಿದ ವಿಷಯ ಅತ್ಯಂತ ಪರಿಣಾಮಕಾರಿಯಾಗಿತ್ತು. ಅನುಕರಣೀಯವಾಗಿದೆ ಎಂದು ನನ್ನ ಅಭಿಪ್ರಾಯವಾಗಿದೆ.

ರಾಜ್ಯದಲ್ಲಿ ಪ್ರಸ್ತುತ 5580 ಸೌಹಾರ್ದ ಸಹಕಾರಿಗಳಲ್ಲಿ ನೊಂದಣೆಯಾಗಿ ಅದರಲ್ಲಿ 916 ಸೌಹಾರ್ದ ಸಹಕಾರಿಗಳು ಕಾರ್ಯನಿರತರಾಗಿದ್ದು ಉಳಿದವುಗಳು ಕಾರ್ಯನಿರತರಾಗದೆ ಸಮಾಪನೆಗೆ ಶಿಫಾರಸಾಗಿರುವುದು ವಿಷಾದಕರ. ಅತ್ಯಂತ ಉತ್ಸಾಹದಿಂದ ಸೌಹಾರ್ದ ಸಹಕಾರಿಗಳ ನೊಂದಣೆ ಮಾಡಿ ನಡೆಸಲು ಸಾಧ್ಯವಾಗದೆ ನಿಷ್ಕ್ರೀಯವಾಗಿ ಕಡೆಗೆ ಸಮಾಪನೆಗೆ ಶಿಫಾರಸ್ಸಾಗಿರುವ ಹಂತಕ್ಕೆ ತಲುಪಿರುವುದು ಮತ್ತು ಕೆಲವು ಸಹಕಾರಿಗಳು ಇನ್ನೂ ಪ್ರಾರಂಭದ ಹಂತದಲ್ಲಿಯೇ ಉಳಿದುಕೊಂಡು ಯಾವುದೇ ಬೆಳವಣಿಗೆ ಕಾಣದಿರುವುದು ಇನ್ನು ಕೆಲವು ಸೌಹಾರ್ದ ಸಹಕಾರಿಗಳು ಹಲವು ವರ್ಷಗಳು ಕಳೆದರೂ ನಿರೀಕ್ಷೆಯ ಬೆಳವಣಿಗೆ ಕಾಣದಿರುವುದು ಸಹಕಾರಿ ಕಾರ್ಯಕರ್ತರುಗಳ ಕ್ರೀಯಾಶೀಲತೆಯಲ್ಲಿ ಕೊರತೆ ಎದ್ದು ಕಾಣುತ್ತಿದೆ ಎಂದು ಭಾವಿಸಲಾಗಿದೆ.

ಈ ನಿಟ್ಟಿನಲ್ಲಿ ರಾಜ್ಯದ ಸೌಹಾರ್ದ ಸಹಕಾರಿಗಳು ತಮ್ಮ ಬೆಳವಣಿಗೆಯ ತಮ್ಮ ಕಾರ್ಯಚಟುವಟಿ–ಕೆಗಳ ಪುನಾರವಲೋಕದ ಸಮಯ ಇದಾಗಬೇಕು. ಸಹಕಾರಿಯ ಪ್ರತಿಯೊಂದು ಕಾರ್ಯಕ್ರಮಗಳಲ್ಲಿ ಸಹಕಾರಿಯ ಎಲ್ಲ ನಿರ್ದೇಶಕರುಗಳು ಸಕ್ರೀಯವಾಗಿ ಭಾಗವಹಿಸುವಂತೆ ನಿರಂತರವಾಗಿ ಸದಸ್ಯರೂಡನೆ ಸಂಪರ್ಕ ಹೊಂದಿರುವಂತೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಅವಶ್ಯಕ. ಸಹಕಾರಿಯ ಪ್ರತಿಯೊಬ್ಬ ಸದಸ್ಯರು ತಮ್ಮ ಸಹಕಾರಿಯ ಉಪವಿಧಿಗಳನ್ನು ತಿಳಿದುಕೊಳ್ಳುವುದರ ಜೊತೆಗೆ ಸಹಕಾರಿಯ ಆಡಳಿತದ ವಿಧಿವಿಧಾನಗಳನ್ನು ತಮ್ಮ ಸಹಕಾರಿಯ ಆಶಯ ಹಾಗೂ ಉದ್ದೇಶಗಳ ಅನುಷ್ಠಾನಕ್ಕೆ ನಿರಂತರ ಚಿಂತನೆಯನ್ನು ಮಾಡುವ ನಿಟ್ಟಿನಲ್ಲಿ ಅವರಿಗೆ ತಿಳುವಳಿಕೆ ನೀಡುವ ಕಾರ್ಯವನ್ನು ಸಂಯುಕ್ತ ಸಹಕಾರಿಯ ವತಿಯಿಂದ ಹಾಗೂ ಎಲ್ಲ ಜಿಲ್ಲೆಗಳ ಸೌಹಾರ್ದ ಸಹಕಾರಿಗಳ ಒಕ್ಕೂಟಗಳ ಜೊತೆಗೂಡಿ ಸೌಹಾರ್ದ ಸಹಕಾರಿಗಳು ನಿರಂತರವಾಗಿ ಮಾಡಬೇಕಾಗುತ್ತದೆ. ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು ಈ ಪ್ರಯತ್ನಕ್ಕೆ ಕೈ ಜೊಡಿಸಿ ಸೌಹಾರ್ದ ಸಹಕಾರಿ ಕ್ಷೇತ್ರದ ಗುಣಮಟ್ಟ ಅಭಿವೃದ್ಧಿಗೆ ಹಾಗೂ ಈ ಕ್ಷೇತ್ರದ ಬಲ ಸಂವರ್ಧನೆಗೆ ಪ್ರಯತ್ನಿಸುವಿರಾಗಿ ಆಶಿಸುತ್ತೇನೆ.

ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ
ಗೌರವ ಅಧ್ಯಕ್ಷರು

ಶ್ರೀ ಜಗದೀಶ ಕವಟಗಿಮಠ
ಗೌರವ ಸದಸ್ಯರು

ಶ್ರೀ ಶರಣಗೌಡ ಜಿ ಪಾಟೀಲ
ಸಂಪಾದಕರು

ಶ್ರೀ ವಿ.ಜೆ. ಕಾರಕೂನ
ಸಂಚಾಲಕರು

ಶ್ರೀ ರಘುನಂದನ ಕೆ.
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ಸೌಹಾರ್ದ ಸಹಕಾರಿ ಸೌಧ" ನಂ.68, ಒಂದನೇ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055
ದೂರವಾಣಿ/ ಫ್ಯಾಕ್ಸ್ :
080–23378375–80, 23474408,23573291
ಇ–ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop

ಒಳಪುಟಗಳಲ್ಲಿ. . .

ಅಧ್ಯಕ್ಷರ ನುಡಿ........................................ 2
ಸಂಪಾದಕೀಯ........................................ 3
ಜ್ಞಾನ ಜ್ಯೋತಿ........................................ 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು .... ........................................ 05–14
ಸರ್ಕಾರದ ಸುತ್ತೋಲೆ........................ 15–22
ಸೌಹಾರ್ದ ಸಹಕಾರಿಗಳ ಸಮಾಚಾರಗಳು .... ........................................ 23–26
ಲೇಖನಗಳು :
ಸಹಕಾರಿ ಶಿಕ್ಷಣ ಮತ್ತು ತರಬೇತಿಗೆ ಕೆಲವು ಪರಿಣಾಮಕಾರಿ ಸೂತ್ರಗಳು .............. 27–29
ವಿಶ್ವ ಪರಿಸರ ಆಚರಣೆ ವೈಶಿಷ್ಟ ಪೂರ್ಣವಾಗಿರಲಿ ಸಮಾಜಕ್ಕೆ ಸಂದೇಶ ನೀಡಲಿ ...................... 32
ಸಹಕಾರಿಗಳಲ್ಲಿ ಸ್ವೇಚ್ಛತೆ ಸಲ್ಲದು......... 35–36

# ಸಂಪಾದಕೀಯ

## ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯ ಚುನಾವಣೆ ಸೌಹಾರ್ದ ಸಹಕಾರಿಗಳ ಕರ್ತವ್ಯ ಹಾಗೂ ಜವಾಬ್ದಾರಿಗಳು

ಸಂಯುಕ್ತ ಸಹಕಾರಿಯ ಪ್ರಸ್ತುತ ಆಡಳಿತ ಮಂಡಳಿಯ ಅಧಿಕಾರದ ಅವಧಿಯು ಮುಂದಿನ ತಿಂಗಳು ದಿನಾಂಕ 27 ಜುಲೈ 2022 ರಂದು ಮುಕ್ತಾಯಗೊಳ್ಳುತ್ತಿದ್ದು ಚುನಾವಣಾಧಿಕಾರಿಗಳ ನೇಮಕವಾಗಿದ್ದು ಚುನಾವಣಾಧಿಕಾರಿಗಳು ಸಂಯುಕ್ತ ಸಹಕಾರಿಯ ಚುನಾವಣೆಯ ಸಿದ್ಧತೆಯನ್ನು ನಡೆಸುತ್ತಿರುವುದು ಮತ್ತು ಈಗಾಗಲೇ ಸೌಹಾರ್ದ ಸಹಕಾರಿಗಳು ಈ ಚುನಾವಣೆಯಲ್ಲಿ ಭಾಗವಹಿಸಲು ತಮ್ಮ ಸಹಕಾರಿಯ ಪ್ರತಿನಿಧಿಯನ್ನು ಆಯ್ಕೆ ಧೃಡಿಕರಿಸಿ ಕಳುಹಿಸುವ ಪ್ರಕ್ರೀಯೆಯನ್ನು ಪೂರ್ಣಗೊಳಿಸುವ ನಿಟ್ಟಿನಲ್ಲಿ ಕ್ರಮವಿಡುತ್ತಿರುವುದು ತಮಗೆಲ್ಲ ತಿಳಿದ ವಿಷಯ. ಈ ಕ್ರಮದಲ್ಲಿ ಸಂಯುಕ್ತ ಸಹಕಾರಿಯ ಆಡಳಿತ ವ್ಯವಸ್ಥೆಗೆ ಅಗತ್ಯ ನೆರವನ್ನು ನೀಡಿ ಚುನಾವಣಾ ಕಾರ್ಯ ಸರಾಗವಾಗಿ ನಡೆಯಲು ಸಹಕರಿಸುತ್ತಿರುವುದು ಸ್ವಾಗತಾರ್ಹ.

ಎರಡನೇಯ ಹಂತದಲ್ಲಿ ಸಂಯುಕ್ತ ಸಹಕಾರಿಯ ಚುನಾವಣಾಧಿಕಾರಿಗಳು ಅರ್ಹ ಮತದಾರರ ಪಟ್ಟಿಯನ್ನು ಮತ್ತು ಅನರ್ಹ ಮತದಾರರ ಪಟ್ಟಿಯನ್ನು ಪ್ರಕಟಿಸಲು ಕ್ರಮವಿಡುತ್ತಾರೆ. ನಂತರ ಸದರಿ ಮತದಾರರ ಪಟ್ಟಿಯಲ್ಲಿರುವ ಸಹಕಾರಿಗಳಿಗೆ ತಾವು ಸಂಯುಕ್ತ ಸಹಕಾರಿಗೆ ಪಾವತಿಸಲು ಬಾಕಿ ಇರುವ ವಾರ್ಷಿಕ ವಂತಿಗೆ ಹಾಗೂ ಸಹಕಾರ ಶಿಕ್ಷಣ ನಿಧಿಗಳ ಪಾವತಿಸುವುದಕ್ಕಾಗಿ ಮತ್ತು ಅನರ್ಹ ಮತದಾರರ ಪಟ್ಟಿಯಲ್ಲಿ ತಿಳಿಸಿರುವ ನ್ಯೂನ್ಯತೆಗಳನ್ನು ಸರಿಪಡಿಸಿ ಸಲ್ಲಿಸುವುದಕ್ಕಾಗಿ ಒಂದು ತಿಂಗಳ ಕಾಲಾವಕಾಶವನ್ನು ನೀಡಿ ನೋಟೀಸು ಕಳುಹಿಸಲಾಗುತ್ತದೆ. ನಂತರ ಅಂತಿಮ ಅರ್ಹ ಮತದಾರರ ಪಟ್ಟಿ ಮತ್ತು ಅನರ್ಹ ಮತದಾರರ ಪಟ್ಟಿಯನ್ನು ಚುನಾವಣಾಧಿಕಾರಿಗಳು ಸಿದ್ಧಪಡಿಸಿ ಪ್ರಕಟಿಸುತ್ತಾರೆ.

ಮೇಲಿನ ಈ ಎಲ್ಲಾ ವಿಷಯಗಳು ಅತ್ಯಂತ ಮಹತ್ವದ್ದಾಗಿದೆ ಎಂಬುದನ್ನು ಸಹಕಾರಿಗಳು ಗಮನಿಸುವುದು ಮತ್ತು ಸಂಬಂಧಿಸಿದ ಸಹಕಾರಿಗಳು ಅವುಗಳ ಮೇಲೆ ಸೂಕ್ತ ಕ್ರಮಗಳನ್ನು ಆದ್ಯತೆ ಮೇರೆಗೆ ಜರುಗಿಸಬೇಕಾಗುತ್ತದೆ. ಪ್ರಜಾ ಪ್ರಭುತ್ವದ ಪದ್ಧತಿಯಲ್ಲಿ ಚುನಾವಣೆ ಹಾಗೂ ಮತದಾನ ವ್ಯವಸ್ಥೆ ಅತ್ಯಂತ ಸೂಕ್ಷ್ಮದ ಹಾಗೂ ಮಹತ್ವದ ವಿಷಯ. ಪ್ರಜಾಪ್ರಭುತ್ವದ ಪದ್ಧತಿ ಭದ್ರವಾಗಿ ನಡೆಯಲು ಸಹಕಾರಿ ಕ್ಷೇತ್ರ ಪ್ರಥಮ ಮೆಟ್ಟಿಲು ಇದರಲ್ಲಿ ನಾವುಗಳು ಸಕ್ರೀಯವಾಗಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು. ಈ ವ್ಯವಸ್ಥೆಯನ್ನು ಭದ್ರವಾಗಿಸಬೇಕು ಎಂಬುದರ ಬಗ್ಗೆ ರಾಜ್ಯದ ಎಲ್ಲ ಸಹಕಾರಿಗಳು ಸ್ವಾಯತ್ತತೆ, ಸ್ವಯಂ ಆಡಳಿತ, ಸ್ವಯಂ ನಿಯಂತ್ರಣ ವೆಂಬ ಧ್ಯೇಯ ವಾಕ್ಯದಂತೆ ತಮ್ಮ ಕರ್ತವ್ಯ ಹಾಗೂ ಜವಾಬ್ದಾರಿಗಳನ್ನು ತಪ್ಪದೇ ನಿರ್ವಹಿಸುವುದು ಅವಶ್ಯಕ.

## ಜ್ಞಾನ ಜ್ಯೋತಿ



– ಶ್ರೀ ಸಿದ್ಧೇಶ್ವರ ಸ್ವಾಮೀಜಿ. ವಿಜಯಪುರ
ಪ್ರವಚನ ಸಂಗ್ರಹ : ಶ್ರೀಮತಿ ಸವಿತ ಎನ್. ಇ.

# ಸೋಲೇ ಗೆಲುವಿನ ಸೋಪಾನ

ಸೋಲು' ಎಂಬ ಎರಡಕ್ಷರವು ಎಷ್ಟೊಂದು "ನೋವು' ಕೊಡುತ್ತದೆಯೆಂದು ಅದನ್ನು ಅನುಭವಿಸಿದವರಿಗೆ ಮಾತ್ರ ಗೊತ್ತಿರುತ್ತದೆ. ಅದರ ಆಳವನ್ನು ತಿಳಿದುಕೊಂಡವರಿಗೂ ಅದು ಗೊತ್ತಿರುತ್ತದೆ. ಸೋತರೆ ಸಾವು ಮಾತ್ರ ಪರಿಹಾರವೆ? ಖಂಡಿತ ಸಾವು ಪರಿಹಾರವಲ್ಲ, ಸೋಲೆಂಬ ನೋವಿನಿಂದ ಹೊರಬರಲು ಸಾಧ್ಯವಿದೆ. ಸೋತವರು ಅನುಭವಿಸುವ ನೋವಿದೆಯಲ್ಲ ಅದನ್ನ ಹೇಗೆ ಎಂದು ವಿಶ್ಲೇಷಿಸಲು ಸಾಧ್ಯವಿಲ್ಲ. ಹತ್ತು ಜನರು ಆಡಿಕೊಳ್ಳುವ ಪರಿಹಾಸ್ಯವಿದೆಯಲ್ಲ ಅದು ಕಠೋರವಾದದ್ದು. ಸೋತವರಿಗೆ ಅದನ್ನು ಎದುರಿಸುವ ಶಕ್ತಿ ಬೇಕು ಅಷ್ಟೆ. ಅಂತಹವರು ಎಷ್ಟೇ ಕಷ್ಟ ಬಂದರೂ ಎದುರಿಸಬಲ್ಲರು. ಡಾ॥ ಎ.ಪಿ.ಜೆ. ಅಬ್ದುಲ್ ಕಲಾಂ ಅವರು ಒಂದು ಮಾತು ಹೇಳಿದ್ದಾರೆ. "ಸೋಲುವುದು ತಪ್ಪಲ್ಲ ಅವು ಭವಿಷ್ಯದ ಹೆದ್ದಾರಿಗಳು. ಭಯ ಪಟ್ಟವನು ಇದ್ದಲ್ಲಿಯೇ ಇರುತ್ತಾನೆ" ಎಂದು. ಆದ್ದರಿಂದ ಸೋತವರು ಭಯ ಪಡಬಾರದು ಎಂಬುವುದು ಸ್ಪಷ್ಟವಾಗಿ ತಿಳಿದುಬರುತ್ತದೆ.

ಮಾನವನಾಗಿ ಹುಟ್ಟಿದ ಮೇಲೆ ಜೀವನದ ಕೆಲವೊಂದು ದಾರಿಗಳಲ್ಲಿ ಸೋಲುಂಟಾಗುವುದು ಸಹಜ. ಸೋಲುಗಳನ್ನು ಧನಾತ್ಮಕವಾಗಿ ಯಾಕೆ ಸ್ವೀಕರಿಸಬಾರದು! ಸೋಲುಗಳನ್ನು ಕೈಚಾಚಿ ಸ್ವೀಕರಿಸಿದರೆ ಮಾತ್ರ ಗೆಲುವೆಂಬ ಪದದ ಅರ್ಥ ಹಾಗೂ ಆ ಪದದ ಬೆಲೆ ತಿಳಿದುಬರುತ್ತದೆ. ಸೋತವನಿಗೆ ಅವಕಾಶಗಳಿರುವುದಿಲ್ಲ. ಅವಕಾಶಗಳನ್ನು ನಾವು ಸೃಷ್ಟಿಸಬೇಕು ಅಷ್ಟೆ. ಪರೀಕ್ಷೆಯಲ್ಲಿ ಸೋತರೆಂದರೆ ಅವರು ಅವರ ಜೀವನದಲ್ಲಿ ಸೋತರೆಂದು ಅರ್ಥವಲ್ಲ. ಅದನ್ನು ಅವರು ಸಮರ್ಪಕವಾಗಿ ಬಳಸಬೇಕು ಅಷ್ಟೆ. ಸೋತವರಿಗೆ ಕೈಹಿಡಿಯುವ ಸಂಸ್ಥೆಗಳು ಇರುತ್ತವೆ. ಪರೀಕ್ಷೆಯಲ್ಲಿ ಸೋತರೆಂದರೆ ಅವರಿಗೆ ಮರು ಅವಕಾಶಗಳನ್ನು ಸೃಷ್ಟಿಸಿ ಕೊಡುತ್ತದೆ. ಅವರು ಆ ಅವಕಾಶಗಳನ್ನು ಸರಿಯಾಗಿ ಬಳಸಿಕೊಳ್ಳಬೇಕು. ಸೋತವನಿಗೆ ಗೆಲ್ಲಬೇಕೆನ್ನುವ ಹಂಬಲ ಅಧಿಕವಿರುತ್ತದೆ. ಆದ್ದರಿಂದ, ಅದಕ್ಕೆ ಪೂರಕವಾಗಿರುವ ವಾತಾವರಣವನ್ನು ಸೃಷ್ಟಿಸಿಕೊಳ್ಳಬೇಕು. ಪ್ರತಿ ಬಾರಿಯೂ ಗೆಲ್ಲುವವನಿಗೆ ಆತ್ಮವಿಶ್ವಾಸ ಅಧಿಕವಿರುತ್ತದೆ. ಆದರೆ, ಪರಿಶ್ರಮ ತಕ್ಕಮಟ್ಟಿಗೆಯಷ್ಟೇ ಇರುತ್ತದೆ. ಸೋತವರಲ್ಲಿ ಆತ್ಮವಿಶ್ವಾಸ ಹಾಗೂ ಪರಿಶ್ರಮ ಇವೆರಡೂ ಅಧಿಕವಾಗಿರಬೇಕು.

ಎಂತಹದೇ ಕಷ್ಟಗಳಾದರೂ ಅವುಗಳನ್ನು ಧನಾತ್ಮಕವಾಗಿ ಸ್ವೀಕರಿಸಿ. ಸೋಲನ್ನು ಧನಾತ್ಮಕವಾಗಿ ಸ್ವೀಕರಿಸಿದವರಿಗೆ ಒಂದಲ್ಲ ಒಂದು ಹಾದಿಯಲ್ಲಿ ಗೆಲುವಿದ್ದೇ ಇರುತ್ತದೆ, ಆದರೆ ಪರಿಶ್ರಮ ಹಾಗೂ ಆತ್ಮವಿಶ್ವಾಸಗಳೆರಡೂ ಇರಬೇಕು. ಸೋತವರಿಗೆ ಬೇರೆ ಯಾವ ಕ್ಷೇತ್ರದಲ್ಲಾದರೂ ಆಸಕ್ತಿಯಿದ್ದರೆ ಆ ಕ್ಷೇತ್ರದಲ್ಲಿ ದುಡಿಯುವ ಮನಸ್ಸಿದ್ದರೆ ಹಾಗೆ ಮಾಡುವುದು ಒಳ್ಳೆಯದು. ಆದರೆ ಅವರು ಅವರ ಆಸಕ್ತಿಯ ಕ್ಷೇತ್ರವನ್ನರಿತು ಆರಿಸಿಕೊಳ್ಳಬೇಕು. ಮೊದಲ ಪ್ರಯತ್ನದಲ್ಲೇ ಗೆಲ್ಲುವವನು ಬದುಕಲ್ಲಿ ಗೆಲ್ಲುತ್ತಾನೆ. ಆದರೆ ಸೋತವನು ಜಗತ್ತನ್ನೇ ಗೆಲ್ಲುತ್ತಾನೆ. ಯಾಕೆಂದರೆ ಸೋತವನಿಗೆ ಸಂಕಟವಿರುತ್ತೆ, ಸಂಕಟದೊಂದಿಗೆ ಸೆಣಸಾಡುವ ಪರಿಶ್ರಮ ಆತ್ಮವಿಶ್ವಾಸ ಹಾಗೂ ಮನಸ್ಸಿಗೆ ಛಲ ಹೆಚ್ಚಿರುತ್ತೆ. ಸೋತವರಿಗೆ ಅದರ ಬಗ್ಗೆ ದುಃಖವಿದ್ದರೆ ಮಾತ್ರ ಗೆಲುವಿನ ಹಾದಿಯನ್ನು ಹುಡುಕಲು ಸಾಧ್ಯ. ಸೋಲನ್ನು ಅನುಭವಿಸಿದ್ದೇನೆ. ಅದರ ನೋವನ್ನು ಅನುಭವಿಸಿದವನು ಕೊನೆಯಲ್ಲಿ ಮನಸ್ಸಿಗೆ ಅಲ್ಪವೇ ನೆಮ್ಮದಿ ದೊರಕುವಂತಹ ಗೆಲುವು ಲಭಿಸಿದೆ.

ಗೆಲುವು ನನ್ನ ಪಾಲಾಗಿದೆಯೆಂಬ ಅಹಂಕಾರ ಪಡಬಾರದು. ಯಾಕೆಂದರೆ ಗೆಲುವು ಆಗಲಿ ಸೋಲೇ ಆಗಲಿ ಶಾಶ್ವತವಲ್ಲ. ಅದು ಇಂದು ನನ್ನದಾಗುತ್ತದೆ. ನಾಳೆ ಬೇರೆ ಯಾರದೋ ಆಗುತ್ತದೆ. ಹಾಗೆಯೇ ಪ್ರಯತ್ನ ಅನ್ನುವುದು ಜೀವನದಲ್ಲಿ ಬಹುದೊಡ್ಡ ಪಾತ್ರ ವಹಿಸುತ್ತದೆ. ಮನುಷ್ಯರಾಗಿ ಹುಟ್ಟಿದ ಮೇಲೆ ಜೀವನದಲ್ಲಿ ಏನಾದರೊಂದು ಸಾಧಿಸಲೇಬೇಕು. ಸಾಧನೆಯೆಂದು ಬಂದಕೂಡಲೇ ಪ್ರಯತ್ನ ಇರಲೇಬೇಕು. ನಮ್ಮ ಜೀವನದ ಗುರಿ ತಲುಪಲು ಪ್ರಯತ್ನ ಆವಶ್ಯವಾಗಿರುತ್ತದೆ. ಕೆಲವೊಂದು ಗುರಿಯನ್ನು ತಲುಪಲು ಹಾಗೂ ಕೆಲವೊಂದು ಸಾಧನೆಗಳನ್ನು ಮಾಡಲು ಕಠಿಣವಾದ ಪ್ರಯತ್ನವನ್ನು ಪಡಬೇಕು. ಪ್ರಯತ್ನಪಟ್ಟವನಿಗೆ ಮಾತ್ರ ಅದೃಷ್ಟ ಲಭಿಸುತ್ತದೆ. ಹಾಗೆಂದು ಮಾತ್ರಕ್ಕೆ ಪ್ರಯತ್ನಪಡದವನ ಅದೃಷ್ಟ ಸ್ಥಿರವಲ್ಲ. ಕೆಲವೊಂದು ಕೆಲಸಗಳಲ್ಲಿ ಪ್ರಯತ್ನವಿಲ್ಲದೆ ಅದೃಷ್ಟದಿಂದಷ್ಟೇ ಗೆದ್ದಿದ್ದರೆ ಆ ಅದೃಷ್ಟವು ಮುಂದೆ ಸಿಗದೆಯೂ ಇರಬಹುದು. ಅವರಿಗೆ ಕೆಲಸಗಳಲ್ಲಿನ ಕಷ್ಟ ಹಾಗೂ ಆ ಕೆಲಸವನ್ನು ಪೂರ್ಣಗೊಳಿಸಲು ಪಟ್ಟ ಪ್ರಯತ್ನ ತಿಳಿದಿರುವುದಿಲ್ಲ ಆದರೆ ಪ್ರಯತ್ನಪಟ್ಟವರ ಅದೃಷ್ಟ ಸ್ಥಿರವಾಗಿರುತ್ತದೆ. ನಮಗೆ ಬೇರೆಯವರನ್ನು ಸೋಲಿಸಿ ಗೊತ್ತಿರಬಹುದು ಅಥವಾ ಬೇರೆಯವರ ಮುಂದೆ ಸೋತ ಅನುಭವವೂ ಇರಬಹುದು. ಆದರೆ ಸೋಲು–ಗೆಲುವು ಎನ್ನುವುದು ಕ್ರೀಡೆಯಲ್ಲಷ್ಟೆಯಾಗಿ ಉಳಿದಲ್ಲ ಅದು ಬದುಕಿಗೂ ಅನ್ವಯಿಸುತ್ತದೆ.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

**ದಾವಾ ದಾಖಲಾತಿಗಳು :** ಒಟ್ಟು ದಾಖಲಾದ ದಾವಾ ಪ್ರಕರಣಗಳ ಒಟ್ಟು 21582 ಆಗಿರುತ್ತದೆ. ಇವುಗಳ ಪೈಕಿ 12161 ಪ್ರಕರಣಗಳು ಇತ್ಯರ್ಥಗೊಂಡಿವೆ. ವಿಚಾರಣಾ ಹಂತದಲ್ಲಿರುವ ಪ್ರಕರಣಗಳು ಒಟ್ಟು 9,421

**ಮೇ ತಿಂಗಳ ಪ್ರಕರಣಗಳು :** ದಾವಾಪ್ರಕರಣ 284 ಒಟ್ಟು ಇತ್ಯರ್ಥಗೊಂಡ ಪ್ರಕರಣಗಳು 617.

**ಅಮಲ್ಜಾರಿ ಪ್ರಕರಣಗಳು :** ಒಟ್ಟು 4310 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 713 ಪ್ರಕರಣಗಳು ಇತ್ಯರ್ಥಗೊಂಡಿದ್ದು. 3581 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಸಹಕಾರಿಗಳ ನಿಬಂಧಕರುಗಳ ಕಛೇರಿಗಳಲ್ಲಿ ದಾಖಲಾಗಿದ್ದ 1023 ಅಮಲ್ಜಾರಿ ಪ್ರಕರಣಗಳು ಸೌಹಾರ್ದ ಸಹಕಾರಿಗಳ ನ್ಯಾಯಾಲಯಕ್ಕೆ ವರ್ಗಾವಣೆಯಾಗಿದ್ದು ಇವುಗಳ ಪೈಕಿ 581 ಪ್ರಕರಣಗಳು ಇತ್ಯರ್ಥಗೊಂಡಿದ್ದು 442 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಮೇ ತಿಂಗಳಿನಲ್ಲಿ 49 ಅಮಲ್ಜಾರಿ ಪ್ರಕರಣ ದಾಖಲಾಗಿರುತ್ತವೆ.

## ಚುನಾವಣಾ ಮಾಹಿತಿ

## ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಆಡಳಿತ ಮಂಡಳಿ ಮತ್ತು ಪದಾಧಿಕಾರಿಗಳ ಚುನಾವಣೆ-2022

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಆಡಳಿತ ಮಂಡಳಿಯ ಚುನಾವಣೆಯು ದಿನಾಂಕ 24.07.2022 ರಂದು ನಡೆಯಲಿದೆ. ಈ ಸಂಬಂಧ ಕರಡು ಮತದಾರರ ಪಟ್ಟಿಗಳನ್ನು ಮಾನ್ಯ ಚುನಾವಣಾಧಿಕಾರಿಗಳು ಪ್ರಕಟಿಸಿದ್ದಾರೆ. ಸದರಿ ಕರಡು ಪಟ್ಟಿಗೆ ಸಂಬಂಧಿಸಿದಂತೆ ಯಾವುದೇ ಆಕ್ಷೇಪಣೆ ಇದ್ದಲ್ಲಿ, ಅವುಗಳನ್ನು ಪ್ರಕಟಣೆಯ ದಿನಾಂಕದಿಂದ 30 ದಿನಗಳೊಳಗೆ ಲಿಖಿತದಲ್ಲಿ ಸಲ್ಲಿಸಲು ಅವಕಾಶ ಇರುತ್ತದೆ.

ಮಾನ್ಯ ಚುನಾವಣಾಧಿಕಾರಿಗಳು ಪ್ರಕಟಿಸುವ ಕರಡು ಪಟ್ಟಿಗಳನ್ನು ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಯಲ್ಲಿ, ಎಲ್ಲಾ ಪ್ರಾಂತೀಯ ಕಛೇರಿಗಳಲ್ಲಿ, ಮಾನ್ಯ ಚುನಾವಣಾಧಿಕಾರಿಗಳ ಕಛೇರಿಯಲ್ಲಿ, ಮಾನ್ಯ ನಿಬಂಧಕರ ಕೇಂದ್ರ ಕಛೇರಿಯಲ್ಲಿ, ಸಂಯುಕ್ತ ಸಹಕಾರಿಯ ವೆಬ್ ತಾಣ (www.souharda.coop) ದಲ್ಲಿ ಪ್ರಕಟಿಸಲಾಗಿದೆ ಹಾಗೂ ಈ ಕುರಿತು ಪತ್ರಿಕಾ ಪ್ರಕಟಣೆ ಸಹ ನೀಡಲಾಗಿದೆ.

ಕರಡು ಪಟ್ಟಿಯಂತೆ ಸುಸ್ತಿದಾರರಾಗಿರುವ ಸಹಕಾರಿಗಳು ಬಾಕಿ ಇರುವ ಮೊತ್ತವನ್ನು ಪಾವತಿ ಮಾಡುವ ಮೂಲಕ, ಹಾಗೂ ಅನರ್ಹರಾಗಿರುವ ಸಹಕಾರಿಗಳು ಪಟ್ಟಿಯಂತೆ ಇರುವ ನ್ಯೂನತೆಗಳನ್ನು ಸರಿಪಡಿಸಿಕೊಳ್ಳುವ ಮೂಲಕ ಅರ್ಹ ಮತದಾರರ ಪಟ್ಟಿಗೆ ಸೇರ್ಪಡೆಯಾಗಲು ಅವಕಾಶ ಇರುತ್ತದೆ.

## ಶಿವಮೊಗ್ಗದ ನಿಟ್ಟೂರಿನಲ್ಲಿ ವಿಷಯಾಧಾರಿತ ತರಬೇತಿ

## ಸಹಕಾರಿಗಳ ಸಕ್ರೀಯ ಪಾಲುಗಾರಿಕೆ ಅಗತ್ಯ - ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ



**ಶಿವಮೊಗ್ಗ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಹಾಗೂ ಸಹ್ಯಾದ್ರಿ ಸೌಹಾರ್ದ ಸಹಕಾರಿಗಳ ಒಕ್ಕೂಟ ಇವರುಗಳ ಸಂಯುಕ್ತ ಆಶ್ರಯದಲ್ಲಿ ದಿನಾಂಕ 24.05.2022 ರಂದು ಶಿವಮೊಗ್ಗದ ಬಿಟ್ಟೂರಿನ ಕಲ್ಯಾಣಿ ಚೌಕದಲ್ಲಿನ ಶ್ರೀ ರಾಮೇಶ್ವರ ಸಭಾಭವನದಲ್ಲಿ ಶಿವಮೊಗ್ಗ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ನಿರ್ದೇಶಕರುಗಳು ಹಾಗು ಮುಖ್ಯ ಕಾರ್ಯನಿರ್ವಾಹಕರುಗಳಿಗಾಗಿ ಒಂದು ದಿನದ ವಿಶೇಷ ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಸದರಿ



ಕಾರ್ಯಕ್ರಮವನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು ಉದ್ಘಾಟಿಸಿದರು ನಂತರ ಸಭೆಯನ್ನುದ್ದೇಶಿಸಿ ಮಾತನಾಡಿದ ಶ್ರೀಯುತರು ರಾಜ್ಯದ ಸೌಹಾರ್ದ ಸಹಕಾರಿ ಚಳುವಳಿಯ ಗುಣಮಟ್ಟವನ್ನು ಕಾಯ್ದುಕೊಳ್ಳುವ ದೃಷ್ಟಿಯಿಂದ ರಾಜ್ಯದಾದ್ಯಂತ ಅನೇಕ ರೀತಿಯ ಶಿಕ್ಷಣ ತರಬೇತಿ ಹಾಗೂ ಪ್ರಚಾರ ಕಾರ್ಯಗಳನ್ನು ಸಂಯುಕ್ತ ಸಹಕಾರಿ ಮಾಡುತ್ತಲಿದೆ. ತಾವೆಲ್ಲ ಸಕ್ರೀಯವಾಗಿ ಭಾಗವಹಿಸಿ ಪ್ರಯೋಜನ ಪಡೆಯುತ್ತಿರುದನ್ನು ಸಂಯುಕ್ತ ಸಹಕಾರಿಯು ಗಮನಿಸಿದೆ. ಈ ಕಾರ್ಯಕ್ರಮಗಳ ಗುಣಮಟ್ಟವನ್ನು ಇನ್ನೂ ಹೆಚ್ಚಿಸುವ ಆಲೋಚನೆ ಇದೆ. ನಿಮ್ಮ ಸಲಹೆ ಸಹಕಾರ ಹಾಗೂ ಮಾರ್ಗದರ್ಶನ ಅಗತ್ಯ ಎಂದು ತಿಳಿಸಿದರು. ಮುಂದುವರೆದು ಮಾತನಾಡಿದ ಶ್ರೀಯುತರು ಶಾಸನಬದ್ಧ ಕಾರ್ಯಗಳನ್ನು ಅತ್ಯಂತ ಪರಿಣಾಮಕಾರಿಯಾಗಿ ಮಾಡುವ ದೃಷ್ಟಿಯಿಂದ ಪರಿವೀಕ್ಷಣೆ ಕಾರ್ಯಗಳನ್ನು ಮಾಡಲಾಗುತ್ತಿದೆ. ಸಂಯುಕ್ತ ಸಹಕಾರಿಯು ಪ್ರಸಕ್ತ ಒಕ್ಕೂಟಗಳ ಕ್ರೀಯಾಶೀಲತೆಯನ್ನು ಹೆಚ್ಚಿಸುವ ಶಿವಮೊಗ್ಗ ಒಕ್ಕೂಟವು ನಿರ್ಮಾಣ ಮಾಡಲಿರುವ ಈ ರೆಸಾರ್ಟ ಹಾಗೂ ಅಂತರರಾಷ್ಟ್ರೀಯ ಸಹಕಾರ ಅಧ್ಯಯನ ಸಂಶೋಧನೆ ಹಾಗೂ ತರಬೇತಿ ಕೇಂದ್ರ ಇವುಗಳಿಗೆ ಹೆಚ್ಚಿನ ಆದ್ಯತೆಯನ್ನು ನೀಡುತ್ತದೆ. ಸಂಯುಕ್ತ ಸಹಕಾರಿಯ ಚುನಾವಣೆ ಹಾಗೂ ವಾರ್ಷಿಕ ಸಾಮಾನ್ಯ ಸಭೆ ಸದ್ಯದಲ್ಲಿಯೆ ನಡೆಯಲಿದ್ದು ಎಲ್ಲ ಸಹಕಾರಿಗಳ ಸಕ್ರೀಯವಾಗಿ ಭಾಗವಹಿಸಬೇಕು ಎಂದು ಕರೆನೀಡಿದರು. ಪ್ರಾರಂಭದಲ್ಲಿ ಶ್ರೀಮತಿ ರತ್ನಮ್ಮನವರು ಪ್ರಾರ್ಥನೆ ಮಾಡಿದರು. ಒಕ್ಕೂಟದ ಉಪಾಧ್ಯಕ್ಷ ಶ್ರೀ ಸುರೇಶ ಹೆಚ್.ಎಸ್. ಸ್ವಾಗತ ಮಾಡಿದರು. ನಿರ್ದೇಶಕ ಶ್ರೀ ರಾಘವೇಂದ್ರರವರು ಪ್ರಾಸ್ತಾವಿಕವಾಗಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಬಿ.ಎಸ್. ಗುಂಡೂರಾವರವರು ಅನೇಕ ಹಿರಿಯ ಸಹಕಾರಿಗಳು ಸೇರಿದಂತೆ 165 ಪ್ರತಿನಿಧಿಗಳು ಭಾಗವಹಿಸಿದ್ದರು.



### ರೆಸಾರ್ಟ ಮಾದರಿಯಲ್ಲಿ ಸಹಕಾರ ಅಧ್ಯಯನ ಸಂಶೋಧನೆ ಹಾಗೂ ತರಬೇತಿ ಕೇಂದ್ರ – ಶ್ರೀ ಎ.ಆರ್.ಪ್ರಸನ್ನಕುಮಾರ

ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಎ. ಆರ್.ಪ್ರಸನ್ನಕುಮಾರರವರು ಅಧ್ಯಕ್ಷತೆ ವಹಿಸಿ

ಮಾತನಾಡಿ ಶಿವಮೊಗ್ಗ ಸೌಹಾರ್ದ ಸಹಕಾರಿಗಳ ಒಕ್ಕೂಟವು ಒಂದು ಅತ್ಯಂತ ಮಹತ್ವ ಕೆಲಸಕ್ಕೆ ಮುಂದಾಗಿದೆ. ಇಲ್ಲಿಯವರೆಗೆ ಇದು ಒಕ್ಕೂಟದ ಮಹತ್ವಾಂಕಾಕ್ಷೆಯಾಗಿತ್ತು. ಇವತ್ತಿನಿಂದ ಶಿವಮೊಗ್ಗ ಜಿಲ್ಲೆಯ ಎಲ್ಲ ಸಹಕಾರಿಗಳ ಕನಸು ಹಾಗೂ ಜವಾಬ್ದಾರಿಯಾಗಿದೆ. ಸಂಯುಕ್ತ ಸಹಕಾರಿಯು ಸಹ ಈ ಯೋಜನೆಗೆ ನೆರವಾಗಲು ಕೋರಿದೆ. ತಾತ್ವಿಕವಾಗಿ ಒಪ್ಪಿಗೆ ಇದೆ ಎಂದು ತಿಳಿಸಲಾಗಿದೆ. ಇದೊಂದು ಅಂತರರಾಷ್ಟ್ರೀಯ ಮಟ್ಟದ ಸಹಕಾರ ಅಧ್ಯಯನ ಹಾಗೂ ಸಂಶೋಧನಾ ಕೇಂದ್ರವಾಗಿ ರೆಸಾರ್ಟ್ ಸಂಸ್ಕೃತಿಯನ್ನು ಅಳವಡಿಸಿಕೊಂಡು ಕಾರ್ಯನಿರ್ವಹಿಸುವ ವಿಭಿನ್ನವಾದ ಸಹಕಾರಿ ಕ್ಷೇತ್ರದ ವಿನೂತನ ಯೋಜನೆ ಇದಾಗಿದೆ ಎಂದು ತಿಳಿಸಿದರು.



**ಪದಾಧಿಕಾರಿಗಳು ಸಹಕಾರಿ ವ್ಯವಸ್ಥೆಯನ್ನು ಅಧ್ಯಯನ ಮಾಡುವುದರಿಂದ ಪ್ರಗತಿ ಸಾಧಿಸಲು ಸಾಧ್ಯ. – ಶ್ರೀ ಶರಣಗೌಡ ಜಿ. ಪಾಟೀಲ**

ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್ ರವರು ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಉಪನ್ಯಾಸಕರಾಗಿ ಭಾಗವಹಿಸಿ ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರ ಕರ್ತವ್ಯ ಹಾಗೂ ಜವಾಬ್ದಾರಿಗಳು ಆಡಳಿತ ಮಂಡಳಿಯವರ ಕರ್ತವ್ಯ ಹಾಗೂ ಜವಾಬ್ದಾರಿಗಳು ಸೌಹಾರ್ದ ಸಹಕಾರಿ ಕಾಯ್ದೆಯ ಇತ್ತೀಚಿನ ತಿದ್ದುಪಡಿಗಳು ಸಂಯುಕ್ತ ಸಹಕಾರಿಯ ಶಾಸನಾತ್ಮಕ ಕಾರ್ಯಗಳಡಿಯಲ್ಲಿ ಮಾಡುತ್ತಿರುವ ಪರಿವೀಕ್ಷಣೆಗಳು ಇವೆಲ್ಲ ಸೌಹಾರ್ದ ಸಹಕಾರಿಯ ಕ್ಷೇತ್ರದ ಗುಣಮಟ್ಟ ನಿರ್ವಹಣೆಗಾಗಿ ಎಂದು ತಿಳಿಸಿದರು. ಕಳೆದ ವರ್ಷ ಸಂಯುಕ್ತ ಸಹಕಾರಿ ಘೋಶವಾಕ್ಯ "ಸೌಹಾರ್ದ ಸಹಕಾರಿಗಳ ನಡೆ ಗುಣಕಟ್ಟದ ಕಡೆಗೆ" ಎಂಬುದಾಗಿತ್ತು. ಈಗ ಸಂಯುಕ್ತ ಸಹಕಾರಿಯ ನಡೆ ಗುಣಮಟ್ಟದ ಕಡೆಗೆ ಎಂಬುದಾಗಿದೆ. ಮುಂಬರುವ ದಿನಗಳಲ್ಲಿ ಸಂಯುಕ್ತ ಸಹಕಾರಿಯ ನಡೆ ಇನ್ನು ವಿಭಿನ್ನವಾಗಿದ್ದು ಒಟ್ಟಾರೆ ಸೌಹಾರ್ದ ಸಹಕಾರಿಗಳ ಹಿತ ಕ್ಷೇತ್ರದ ಗುಣಮಟ್ಟದ ನಿರ್ವಹಣೆಗೆ ಆದ್ಯತೆ ನೀಡಲಾಗುತ್ತದೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಸಹಕಾರ ಅಧ್ಯಯನ, ಸಂಶೋಧನೆ ಹಾಗೂ ತರಬೇತಿ ಕೇಂದ್ರಕ್ಕೆ ಸ್ಥಳ ನೀಡಿದ ಶ್ರೀ ರಾಜುರವರನ್ನು ಸನ್ಮಾನಿಸಲಾಯಿತು.

## ಸಹಕಾರಿ ಕಾರ್ಯಕರ್ತ : ಹಿರಿಯ ಸಹಕಾರಿ ಸಾಮಾಜಿಕ ಕಾರ್ಯಕರ್ತ - ಶ್ರೀ ಪಟ್ಟಭಿರಾಮರವರ ವ್ಯಾಖ್ಯಾನ.



ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಹಾಗೂ ಸಹ್ಯಾದ್ರಿ ಸೌಹಾರ್ದ ಸಹಕಾರಿಗಳ ಒಕ್ಕೂಟ ಶಿವಮೊಗ್ಗ ಇವರುಗಳ ಸಹಯೋಗದಲ್ಲಿ ದಿನಾಂಕ 24–5–2022 ರಂದು ಕಲ್ಯಾಣಿ ಚೌಕ ನಿಟ್ಟೂರನ ಶ್ರೀ ರಾಮೇಶ್ವರ ಸಭಾಂಗಣದಲ್ಲಿ ನಡೆದ ವಿಷಯಾಧಾರಿತ ತರಬೇತಿ ಕಾರ್ಯಕ್ರಮದಲ್ಲಿ ಹಿರಿಯ ಸಮಾಜ ಕಾರ್ಯಕರ್ತ ಶ್ರೀ ಪಟ್ಟಾಭಿರಾಮರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಉಪನ್ಯಾಸ ನೀಡಿ ಸಹಕಾರಿ ಕಾರ್ಯಕರ್ತ ಸಹಕಾರಿ ಕ್ಷೇತ್ರದ ಬೆನ್ನೆಲಬು. ಸಹಕಾರಿ ಕ್ಷೇತ್ರದ ಅಭಿವೃದ್ಧಿಗಾಗಿ ಅವರು ನಿರಂತರ ಕ್ರೀಯಾಶೀಲರಾಗಿರಬೇಕಾಗುತ್ತದೆ. ಎಂದು ತಿಳಿಸುತ್ತ ಸಹಕಾರಿ ಕಾರ್ಯಕರ್ತ ಹೇಗಿರಬೇಕು ಸಹಕಾರಿ ಕಾರ್ಯಕರ್ತರುಗಳ ಗುಣಲಕ್ಷಣಗಳು ಯಾವುವು ಎಂಬ ಬಗ್ಗೆ ಉಪನ್ಯಾಸ ನೀಡುತ್ತ ಈ ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಸಹಕಾರ ಕ್ಷೇತ್ರ ಮಹತ್ವದ ಪಾತ್ರವನ್ನು ನಿರ್ವಹಿಸುತ್ತ ಬಂದಿದೆ. ಈ ಕ್ಷೇತ್ರದಿಂದ ಸಾಕಷ್ಟು ನಿರೀಕ್ಷೆಗಳು ಇವೆ. ಸಾಗಬೇಕಾದ ದಾರಿ ಇನ್ನೂ ಇದೆ. ಈ ಕ್ಷೇತ್ರ ಸಧೃಡವಾಗಿ ಬೆಳೆಯಬೇಕು. ಅದಕ್ಕಾಗಿ ಸಹಕಾರಿ ಕಾರ್ಯಕರ್ತರು ಉತ್ತಮವಾಗಿ ಕಾರ್ಯನಿರ್ವಹಿಸಬೇಕು ಸಮಾಜಮುಖಿಯಾಗಿ ಸಹಕಾರಿಗಳು ಕಾರ್ಯನಿರ್ವಹಿಸಬೇಕು. ಅವರುಗಳು ನಿರಂತರ ಕ್ರೀಯಾಶೀಲರಾಗಿಬೇಕು ಎಂದು ತಿಳಿಸಿ ಕೆಲವು ಗುಣಲಕ್ಷಣಗಳನ್ನು ಹೇಳಿ ವಿವರಿಸಿದರು.

- ಕಾರ್ಯಕರ್ತ ಎಂದರೆ ಕಾರ್ಯವನ್ನು ಮಾಡುವವನು. ಉದ್ದೇಶಗಳ ಅನುಷ್ಠಾನವೇ ಕಾರ್ಯ
- ತಾನು ಕಾರ್ಯನಿರ್ವಹಿಸುವ ವ್ಯವಸ್ಥೆಯನ್ನು ತಿಳಿದಿರಬೇಕು.
- ವ್ಯವಸ್ಥೆಯನ್ನು ಸಧೃಡಗೊಳಿಸಬೇಕು.ವ್ಯವಸ್ಥೆಯನ್ನು ಪ್ರೀತಿಸಬೇಕು.
- ಸಹಕಾರಿ ಕಾರ್ಯಕರ್ತ ಮೊದಲು ತನ್ನ ಕಾರ್ಯದ ಬಗ್ಗೆ ತಿಳಿದಿರಬೇಕು.
- ಕೆಲಸವನ್ನು ವ್ಯವಸ್ಥಿತವಾಗಿ ನಿರ್ವಹಿಸಬೇಕು.
- ಸಹಕಾರಿ ಕಾರ್ಯಕರ್ತ ತನಗೆ ವಹಿಸಿದ ಕಾರ್ಯಗಳ ಕಾರ್ಯವಿಧಾನವನ್ನು ತಿಳಿದಿರಬೇಕು.
- ದುಡ್ಡಿನ ವಿಷಯದಲ್ಲಿ ಶುದ್ಧತೆ ಇರಬೇಕು
- ಮಿತಭಾಷಿ, ಹಿತಭಾಷಿ ಮೃದುಭಾಷಿಯಾಗಿರಬೇಕು
- ನಡುವಳಿಕೆ ಪಾರದರ್ಶಕವಾಗಿರಬೇಕು
- ಸಮಯ ಪಾಲನೆ ಇರಬೇಕು.
- ಸದಾ ಹಸನ್ಮುಖಿಗಳಾಗಿರಬೇಕು.
- ಮಿತವ್ಯಯಿಗಳಾಗಿರಬೇಕು.
- ತನ್ನ ಬಗ್ಗೆ ಕಠೋರವಾಗಿ ಇತರರ ಬಗ್ಗೆ ಮೃದುವಾಗಿರಬೇಕು.
- ಸಂವೇದನಾ ಶೀಲನಾಗಿರಬೇಕು.
- ಸಮರಸ ಸ್ವಭಾವ ಸ್ನೇಹಮಯಿಯಾಗಿರಬೇಕು.
- ಸಾತಿಕ ಸ್ವಭಾವ ಬೆಳೆಸಿಕೊಳ್ಳಬೇಕು
- ಹೆಚ್ಚು ಸಮಯವನ್ನು ಸಹಕಾರಿಯ ಕೆಲಸ ಕಾರ್ಯಗಳಿಗೆ ಕೊಡುವಂತಿರಬೇಕು.

ಯಾರು ತಮಗೋಸ್ಕರವಾಗಿ ಕಾರ್ಯನಿರ್ವಹಿಸುತ್ತಾರೂ ಅವರನ್ನು ಯಾರೂ ನೆನಪಿಸಿಕೊಳ್ಳುವುದಿಲ್ಲ. ಅವರನ್ನು ಮರೆತುಬಿಡುತ್ತಾರೆ. ಆದರೆ ಯಾರು ಸಮಾಜಕೊಸ್ಕರವಾಗಿ ಸಮಾಜಮುಖಿಯಾಗಿ ಕಾರ್ಯನಿರ್ವಹಿಸುತ್ತಾರೂ ಅಂಥವರನ್ನು ಸಮಾಜ ಯಾವತ್ತು ಮರೆಯುವುದಿಲ್ಲ ಎಂದು ತಿಳಿಸಿ ಶ್ರೀ ಮಹಾತ್ಮಗಾಂಧಿಜಿ ಶ್ರೀ ಸ್ವಾಮಿ ವಿವೇಕಾನಂದ ಡಾ. ಅಬುಲ ಕಲಾಂ ಮುಂತಾದವರ ಉದಾಹರಣೆಗಳನ್ನು ನೀಡಿದರು.

## ಎಂ.ಜಿ ಪಾಟೀಲ, ಸಹಕಾರ ಸಂಘಗಳ ನಿವೃತ್ತ ಅಪರ ನಿಬಂಧಕರು ಇವರ ಸಹಕಾರ ಕಾಯ್ದೆ ಪುಸ್ತಕ ಬಿಡುಗಡೆ

**ಬೆಂಗಳೂರು** : ಸಹಕಾರ ಸಂಘಗಳ ಅಪರ ನಿಬಂಧಕರು ಹಾಗೂ ಸಂಯುಕ್ತ ಸಹಕಾರಿಯ ಮಾಜಿ ವೃತ್ತಿಪರ ನಿರ್ದೇಶಕರಾದ ಶ್ರೀ ಎಂ.ಜಿ ಪಾಟೀಲ ಇವರು ಬರೆದಿರುವ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ವಿವರಣಾತ್ಮಕ ಕಾಯ್ದೆ ಪುಸ್ತಕವನ್ನು ಸಹಕಾರ ಸಂಘಗಳ ನಿಬಂಧಕರಾದ ಶ್ರೀ ಜಿಯಾಉಲ್ಲಾ ಇವರು ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಸಹಕಾರ ಸಂಘಗಳ ಅಪರ ನಿಬಂಧಕರಾದ ಶ್ರೀ ಎ.ಸಿ ದಿವಾಕರ ಹಾಗೂ ಕೆ.ಎಸ್ ನವೀನ ಮತ್ತು ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಹಾಗೂ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

## ರಾಜ್ಯದ ಜಿಲ್ಲಾ ಒಕ್ಕೂಟಗಳ ಪ್ರವರ್ತಕರ ಸಭೆ

**ಬೆಳಗಾವಿ** : ದಿನಾಂಕ 10.05.2022 ರಂದು ಬೆಳಗಾವಿ ಪ್ರಾಂತೀಯ ಕಛೇರಿಯಲ್ಲಿ "ಜಿಲ್ಲಾ ಒಕ್ಕೂಟದ ಪ್ರವರ್ತಕರ ಸಭೆ" ಯನ್ನು ಹಮ್ಮಿಕೊಳಲಾಗಿತ್ತು. ಸದರಿ ಸಭೆಯಲ್ಲಿ ಸೌಹಾರ್ದ ಸಹಕಾರಿಗಳು ಎದುರಿಸುತ್ತಿರುವ ಸಮಸ್ಯೆಗಳು ಮತ್ತು ನಿಯೋಜಿತ ಬೆಳಗಾವಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಒಕ್ಕೂಟ ರಚನೆಯ ಕುರಿತು ಚರ್ಚಿಸಲಾಯಿತು. ಸಭೆಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್ ಕೃಷ್ಣಾರೆಡಿರವರು ಉಪಸ್ಥಿತರಿದ್ದು ಒಕ್ಕೂಟ ರಚನೆಯ ಪ್ರಾಮುಖ್ಯತೆ, ಕಾರ್ಯಚಟುವಟಿಕೆಗಳ ಕುರಿತು ಮಾಹಿತಿ ನೀಡಿದರು. ಉಪ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ ಬರುವೆ, ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ ಹಾಗೂ ಜಿಲ್ಲಾ ಸಂಯೋಜಕರಾದ ಶ್ರೀ ಗಂಗಾರಾಮ ಕೋಳಾಪ್ಪೆ ಹಾಗೂ ಶ್ರೀ ಸುಜಯ ಬೆಳವಿ ಇವರುಗಳು ಉಪಸ್ಥಿತರಿದ್ದರು. ವಿವಧ ಸೌಹಾರ್ದ ಸಹಕಾರಿಗಳಿಂದ 21 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

**ಧಾರವಾಡ** : ದಿನಾಂಕ 10.05.2022 ರಂದು ಮಲ್ಲಿಕಾರ್ಜುನ ಸೌಹಾರ್ದ ಸಹಕಾರಿ ನಿ., ಹುಬ್ಬಳ್ಳಿ ಇಲ್ಲಿ ಧಾರವಾಡ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಒಕ್ಕೂಟ ಸಭೆಯನ್ನು ಹಮ್ಮಿಕೊಳ್ಳಲಾಗಿತ್ತು. ಸದರಿ ಸಭೆಯಲ್ಲಿ ಸೌಹಾರ್ದ ಸಹಕಾರಿಗಳು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಚರ್ಚಿಸಲಾಯಿತು. ಸಭೆಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿರವರು ಉಪಸ್ಥಿತರಿದ್ದು ಬಡ್ಡಿಯೇತರ ಆದಾಯ ಹಾಗೂ ಒಕ್ಕೂಟದ ಕಾರ್ಯಚಟುವಟಿಕೆ ಕುರಿತು ಮಾಹಿತಿ ನೀಡಿದರು. ಧಾರವಾಡ ಜಿಲ್ಲಾ ಸಂಯೋಜಕರಾದ ಶ್ರೀ ಬಸವರಾಜ ಎಸ್ ಉಪಸ್ಥಿತ–ರಿದ್ದರು. ಈ ಸಂದರ್ಭದಲ್ಲಿ ಒಕ್ಕೂಟದ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ನಿರ್ದೇಶಕರು ಸೇರಿದಂತೆ ಒಟ್ಟು 12 ಜನ ಭಾಗವಹಿಸಿದ್ದರು.

**ವಿಜಯಪುರ** : ದಿನಾಂಕ 17.05.2022 ರಂದು ಅಖಿಲ ಭಾರತ ವೀರಶೈವ ಕಲ್ಯಾಣ ಮಂಟಪ, ಬಂಜಾರ ಕ್ರಾಸ್ ಹತ್ತಿರ, ವಿಜಯಪುರ ಇಲ್ಲಿ ವಿಜಯಪುರ ಜಿಲ್ಲೆಯ ಹಿರಿಯ ಸಹಕಾರಿಗಳ ಹಾಗೂ ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟ ರಚನೆಯ ಸಭೆಯನ್ನು ಹಮ್ಮಿಕೊಳ್ಳಲಾಗಿತ್ತು. ಸದರಿ ಸಭೆಯಲ್ಲಿ ಸೌಹಾರ್ದ ಸಹಕಾರಿಗಳು ಎದುರಿಸುತ್ತಿರುವ ಸಮಸ್ಯೆಗಳು ಮತ್ತು ನಿಯೋಜಿತ ವಿಜಯಪುರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಒಕ್ಕೂಟ ರಚನೆಯ ಕುರಿತು ಚರ್ಚಿಸಲಾಯಿತು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿರವರು ವಹಿಸಿದ್ದರು. ಮಾನ್ಯ ನಿರ್ದೇಶಕರಾದ ಶ್ರೀ ಸಿದ್ರಾಮಪ್ಪಾ ಉಪ್ಪಿನರವರು ವೇದಿಕೆ ಮೇಲಿದ್ದರು. ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ ಹಾಗೂ ವಿಜಯಪುರ ಜಿಲ್ಲಾ ಸಂಯೋಜಕರಾದ ಶ್ರೀ ಶಿವಕಾಂತ ಎಸ್ ಹಾಗೂ ಶ್ರೀ ಪ್ರಭಯ್ಯಾ ಹಿರೇಮಠ ಇವರುಗಳು ಉಪಸ್ಥಿತರಿದ್ದರು. ವಿವಿಧ ಸೌಹಾರ್ದ ಸಹಕಾರಿಗಳಿಂದ 55 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

**ಹಾವೇರಿ** : ದಿನಾಂಕ 18.05.2022 ರಂದು ನವಚೇತನ ಸೌಹಾರ್ದ ಸಹಕಾರಿ ನಿ., ಹಾವೇರಿ ಇದರ ಸಭಾಂಗಣದಲ್ಲಿ ಹಾವೇರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಒಕ್ಕೂಟ ಸಭೆ ಹಮ್ಮಿಕೊಳ್ಳಲಾಗಿತ್ತು. ಸದರಿ ಸಭೆಯಲ್ಲಿ ಸೌಹಾರ್ದ ಸಹಕಾರಿಗಳು ಎದುರಿಸುತ್ತಿರುವ ಸಮಸ್ಯೆಗಳು ಮತ್ತು ನಿಯೋಜಿತ ಹಾವೇರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಒಕ್ಕೂಟ ರಚನೆಯ ಕುರಿತು ಚರ್ಚಿಸಲಾಯಿತು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿರವರು ವಹಿಸಿದ್ದರು, ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ ಹಾಗೂ ಹಾವೇರಿ ಜಿಲ್ಲಾ ಸಂಯೋಜಕರಾದ ಶ್ರೀ ಕಲ್ಮೇಶ ಎಸ್ ಎಮ್ ಇವರುಗಳು ಉಪಸ್ಥಿತರಿದ್ದರು. ವಿವಧ ಸೌಹಾರ್ದ ಸಹಕಾರಿಗಳಿಂದ 30 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

**ಹಾಸನ** : ದಿನಾಂಕ 25.05.2022ರಂದು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿ ರವರು ಹಾಸನ ಜಿಲ್ಲಾ ಸೌಹಾರ್ದ ಸಹಕಾರಿಗಳ ಅಧ್ಯಕ್ಷರೊಂದಿಗೆ "ಉದ್ದೇಶಿತ ಹಾಸನ ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟ ನಿ., ಹಾಸನ" ಇದರ ನೋಂದಣಿ ಕುರಿತು ಸಮಾಲೋಚನೆ ಸಭೆ ನಡೆಸಿದರು.

ಉದ್ದೇಶಿತ ಹಾಸನ ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟ

ನಿ., ಹಾಸನ ಇದರ ಸಮಾಲೋಚನೆ ಸಭೆಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿ ರವರು ನೆರವೇರಿಸಿದರು. ಈ ಸಂದರ್ಭದಲ್ಲಿ ವೇದಿಕೆಯ ಮೇಲೆ ಪ್ರಾಂತೀಯ ನಿರ್ದೇಶಕರಾದ ಶ್ರೀ ಎಸ್.ಕೆ ಮಂಜುನಾಥ ರವರು, ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ ಬಿರಾದರ ರವರು ಹಾಗೂ ಸ್ಥಳೀಯ ಸಹಕಾರಿಗಳ ಅಧ್ಯಕ್ಷರುಗಳು ಉಪಸ್ಥಿತರಿದ್ದರು. ಪ್ರಾಸ್ತಾವಿಕ ನುಡಿಗಳಲ್ಲಿ ಪ್ರಾಂತೀಯ ನಿರ್ದೇಶಕರಾದ ಶ್ರೀ ಎಸ್.ಕೆ ಮಂಜುನಾಥ ರವರು ಒಕ್ಕೂಟ ರಚನೆಯ ಅವಕಾಶ, ಸಾಧಕ-ಬಾಧಕಗಳು ಹಾಗೂ ಅನುಕೂಲಗಳ ಕುರಿತು ತಿಳಿಸಿಕೊಟ್ಟರು. ಉದ್ಘಾಟನೆ ಭಾಷಣ ಮಾಡಿದ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರು ಒಕ್ಕೂಟ ರಚನೆ, ಪ್ರಕ್ರಿಯೆಗಳು, ಇದರ ಉದ್ದೇಶಗಳ ಮಹತ್ವವನ್ನು ತಿಳಿಸಿಕೊಟ್ಟರು. ನಂತರದಲ್ಲಿ ಸಭೆಯಲ್ಲಿ ಉದ್ದೇಶಿತ ಒಕ್ಕೂಟದ ಮುಖ್ಯ ಪ್ರವರ್ತಕರಾಗಿ ಶ್ರೀ ಎಂ. ಮಾಧವ ಶೆಣೈ ರವರು, ಅಧ್ಯಕ್ಷರು, ಹಾಸನ ವರ್ತಕರ ಸೌಹಾರ್ದ ಪತ್ತಿನ ಸಹಕಾರಿ ನಿ., ಹಾಸನ ಇವರನ್ನು ಆಯ್ಕೆ ಮಾಡಲಾಯಿತು. ಉಳಿದಂತೆ ಹಾಜರಿದ್ದ ಹಾಸನ ತಾಲ್ಲೂಕಿನ ಸಹಕಾರಿಗಳಲ್ಲಿ 11 ಪ್ರವರ್ತಕರು, ಚನ್ನರಾಯಪಟ್ಟಣ ತಾಲ್ಲೂಕಿನ 2 ಪ್ರವರ್ತಕರು, ಅರಸೀಕೆರೆ ತಾಲ್ಲೂಕಿನ 1 ಪ್ರವರ್ತಕರು ಹಾಗೂ ಅರಕಲಗೂಡು ತಾಲ್ಲೂಕಿನ 1 ಪ್ರವರ್ತಕರನ್ನು ಸೇರಿ ಒಟ್ಟು 16 ಪ್ರವರ್ತಕರನ್ನು ಆಯ್ಕೆ ಮಾಡಲಾಯಿತು. ಸಭೆಯನ್ನು ಸಹನಾ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಹಾಸನ ಇದರ ಕಛೇರಿಯ ಆವರಣದಲ್ಲಿ ನಡೆಸಲಾಯಿತು. ಸದರಿ ಸಭೆಯಲ್ಲಿ ಜಿಲ್ಲೆಯ 21 ಸಹಕಾರಿಗಳಿಂದ 26 ಪ್ರತಿನಿಧಿಗಳು ಭಾಗವಹಿಸಿದ್ದರು.

ಸಮಾಲೋಚನೆ ಸಭೆಯ ನಿರೂಪಣೆಯನ್ನು ಶ್ರೀಮತಿ ಪುಷ್ಪಾವತಿ, ಮುಖ್ಯ ಕಾರ್ಯನಿರ್ವಾಹಕರು, ಹಾಸನ ವರ್ತಕರ ಸೌಹಾರ್ದ ಪತ್ತಿನ ಸಹಕಾರಿ ನಿ., ಹಾಸನ ಇವರು, ಪ್ರಾರ್ಥನೆ ಶ್ರೀಮತಿ ಸುಮಿತ್ರಾ, ಮುಖ್ಯ ಕಾರ್ಯನಿರ್ವಾಹಕರು, ಶ್ರೀ ಜ್ಯೋತಿ ಸೌಹಾರ್ದ ಸಹಕಾರಿ ನಿ., ಹಿರೀಸಾವೆ ಇವರು, ಸ್ವಾಗತ ಮತ್ತು ಪರಿಚಯವನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ ಬಿರಾದಾರರವರು ನೆರವೇರಿಸಿದರು. ಪ್ರಾಸ್ತವಿಕ ನುಡಿಯನ್ನು ಪ್ರಾಂತೀಯ ನಿರ್ದೇಶಕರಾದ ಶ್ರೀ ಎಸ್.ಕೆ ಮಂಜುನಾಥ ರವರು, ಹಾಗೂ ವಂದಾನಾರ್ಪಣೆಯನ್ನು ಜಿಲ್ಲಾ ಸಂಯೋಜಕರಾದ ಶ್ರೀ ಚಂದ್ರಶೇಖರಯ್ಯ .ಎಂ ರವರು ಮಾಡಿದರು.

---

**ಹಾಸನ :** ಹಾಸನ ಜಿಲ್ಲಾ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರಿಗೆ "ಲೆಕ್ಕಪರಿಶೋಧನೆ ವರದಿ ಸಿದ್ಧತೆ ಮತ್ತು ದಾಖಲೆಗಳ ಸಂಗ್ರಹ" ದ ಕುರಿತು ತರಬೇತಿಯನ್ನು ದಿನಾಂಕ: 25.05.2022 ಬುಧವಾರ ಮಧ್ಯಾಹ್ನ 03:00 ಗಂಟೆಗೆ ಸಹನಾ ವಿವಿದೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿ., ಹಾಸನ ಇಲ್ಲಿ ಆಯೋಜಿಸಲಾಗಿತ್ತು.

ತರಬೇತಿ ಕಾರ್ಯಕ್ರಮದ ಪ್ರಾಸ್ತವಿಕ ನುಡಿಯನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ ಬಿರಾದಾರರವರು ನೆರವೇರಿಸಿದರು. ಶ್ರೀಮತಿ ಕುಸುಮಾ, ಕಾರ್ಪೋರೇಟ್ ಟ್ರೈನರ್, ಹಾಸನ ಇವರು ಲೆಕ್ಕಪ-ರಿಶೋಧನೆ ವರದಿ ಸಿದ್ಧತೆ ಮತ್ತು ದಾಖಲೆಗಳ ಸಂಗ್ರಹದ ಕುರಿತು ಉಪನ್ಯಾಸ ನೀಡಿದರು. ಉಪನ್ಯಾಸದ ನಂತರ ಪ್ರಶ್ನೋತ್ತರ ಅವಧಿಯನ್ನು ನಡೆಸಲಾಯಿತು. ಕಾರ್ಯಕ್ರಮದ ನಿರೂಪಣೆಯನ್ನು ಶ್ರೀಮತಿ ಪುಷ್ಪಾವತಿ, ಮುಖ್ಯ ಕಾರ್ಯನಿರ್ವಾಹಕರು, ಹಾಸನ ವರ್ತಕರ ಸೌಹಾರ್ದ ಪತ್ತಿನ ಸಹಕಾರಿ ನಿ., ಹಾಸನ ಇವರು, ಪ್ರಾರ್ಥನೆ ಶ್ರೀಮತಿ ಸುಮಿತ್ರಾ, ಮುಖ್ಯ ಕಾರ್ಯನಿರ್ವಾಹಕರು, ಶ್ರೀ ಜ್ಯೋತಿ ಸೌಹಾರ್ದ ಸಹಕಾರಿ ನಿ., ಹಿರೀಸಾವೆ ಇವರು, ಸ್ವಾಗತ ಮತ್ತು ಪರಿಚಯವನ್ನು ಶ್ರೀಮತಿ ಶೋಭ ಮುಖ್ಯ ಕಾರ್ಯನಿರ್ವಾಹಕರು, ಶ್ರೀ ಚೌಡೇಶ್ವರಿ ಸೌಹಾರ್ದ ಸಹಕಾರಿ ನಿ., ಹಿರೀಸಾವೆ ಇವರು, ಹಾಗೂ ವಂದಾನಾರ್ಪಣೆಯನ್ನು ಜಿಲ್ಲಾ ಸಂಯೋಜಕರಾದ ಶ್ರೀ ಚಂದ್ರಶೇಖರಯ್ಯ .ಎಂ ರವರು ನೆರವೇರಿಸಿದರು. ಸದರಿ ತರಬೇತಿ ಕಾರ್ಯಕ್ರಮದಲ್ಲಿ 28 ಸೌಹಾರ್ದ ಸಹಕಾರಿಗಳಿಂದ 35 ಪ್ರತಿನಿಧಿಗಳು ಹಾಗೂ ಇತರೇ 5 ಮಂದಿ ಭಾಗವಹಿಸಿದ್ದರು.

---

**ಚಿಕ್ಕಮಗಳೂರು :** ಚಿಕ್ಕಮಗಳೂರು ಜಿಲ್ಲಾ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರಿಗೆ ಚಿಕ್ಕಮಗಳೂರು ಜಿಲ್ಲಾ ಸೌಹಾರ್ದ ಒಕ್ಕೂಟ ರಚನೆ ಪೂರ್ವ ಭಾವಿ ಸಭೆಯನ್ನು ದಿನಾಂಕ: 25.05.2022 ಬುಧವಾರ ಬೆಳಿಗ್ಗೆ 10:30 ಗಂಟೆಗೆ ರೋಟರಿ ಸಭಾಭವನ, ಬಸ್ಸು ನಿಲ್ದಾಣದ ಹಿಂಭಾಗ, ಬಾಳೆಹೊನ್ನೂರು, ಎನ್.ಆರ್ ಪುರ ತಾಲ್ಲೂಕು, ಚಿಕ್ಕಮಗಳೂರು ಇಲ್ಲಿ ಆಯೋಜಿಸಲಾಗಿತ್ತು.

ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿ ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಮಂಜುನಾಥ್ ಎಸ್.ಕೆ ಹಾಗೂ ಶ್ರೀ ವಿಶ್ವನಾಥ್, ಮಾಜಿ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಹಾಗೂ ಅಧ್ಯಕ್ಷರು, ಹಿಮಗಿರಿ ಸೌಹಾರ್ದ ಸಹಕಾರಿ ನಿ., ಚಿಕ್ಕಮಗಳೂರು ಇವರು ಭಾಗವಹಿಸಿದ್ದರು. ಜಿಲ್ಲಾ ಸಂಯೋಜಕರಾದ ಶ್ರೀ ವಿಜಯ್ ಬಿ.ಎಸ್ ರವರು ಉಪಸ್ಥಿತರಿದ್ದರು. ಸಭೆಯಲ್ಲಿ ಒಕ್ಕೂಟ ರಚನೆಗೆ ನಿರ್ಣಯವನ್ನು ಕೈಗೊಳ್ಳಲಾಯಿತು ಹಾಗೂ ಪ್ರವರ್ತಕರನ್ನು ಆಯ್ಕೆ ಮಾಡಲಾಯಿತು. ಸದರಿ ಸಭೆಯಲ್ಲಿ ಒಟ್ಟು 34 ಪ್ರತಿನಿಧಿಗಳು ಭಾಗವಹಿಸಿದ್ದರು.

## ರಾಷ್ಟ್ರೀಯ ಸಹಕಾರ ಯೂನಿಯನ್ ನವದೆಹಲಿ ಇವರ ನೇತೃತ್ವದಲ್ಲಿ ರಾಷ್ಟ್ರೀಯ ಸಹಕಾರ ವಿಶ್ವವಿದ್ಯಾಲಯ ಸ್ಥಾಪನೆ ಕುರಿತು ಕಾರ್ಯಾಗಾರ

ದಿನಾಂಕ 03.06.2022 ರಂದು ರಾಷ್ಟ್ರೀಯ ಸಹಕಾರ ಯೂನಿಯನ್, ನಿ ನವದೆಹಲಿ ಇವರ ನೇತೃತ್ವದಲ್ಲಿ ಆನ್‌ಲೈನ್ ಮೂಲಕ ರಾಷ್ಟ್ರದಲ್ಲಿ ಸಹಕಾರ ಕ್ಷೇತ್ರಕ್ಕೆ ಪ್ರತ್ಯೇಕವಾಗಿ ಒಂದು ವಿಶ್ವವಿದ್ಯಾಲಯವನ್ನು ಸ್ಥಾಪಿಸುವ ಕುರಿತು ಕಾರ್ಯಾಗಾರ ನಡೆಸಲಾಯಿತು. ಈ ಕಾರ್ಯಾಗಾರದ ಪ್ರಮುಖ ವಿಷಯವನ್ನು (ಕೀ ನೋಟ) ಪ್ರೊ.ಯಶವಂತ ಡೋಂಗ್ರೆಯವರು ನಡೆಸಿಕೊಟ್ಟರು. ಸಹಕಾರ ಕ್ಷೇತ್ರದಲ್ಲಿ ಸಹಕಾರ ಶಿಕ್ಷಣದಲ್ಲಿ ವೃತ್ತಿಪರತೆಯನ್ನು ಸಾಧಿಸಲು ವಿಶ್ವವಿದ್ಯಾಲಯ ಸ್ಥಾಪನೆಯಿಂದ ಸಾಧ್ಯವಾಗುತ್ತದೆಎಂದು ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ಎನ್.ಸಿ.ಯು.ಐ ನ ಅಧ್ಯಕ್ಷ ಶ್ರೀ ದಿಲೀಪ ಸಾಂಘ್ವಿ ಯವರು ಅಧ್ಯಕ್ಷೀಯ ಭಾಷಣ ಮಾಡಿದರು. ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ಸುಧೀರ ಮಹಾಜನರವರು ಸ್ವಾಗತಿಸಿದರು. ವಿವಿಧ ವಿಶ್ವವಿದ್ಯಾಲಯಗಳ ತಜ್ಞರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಸಂಯುಕ್ತ ಸಹಕಾರಿಯ ತರಬೇತಿ ಕಾರ್ಯಕ್ರಮಗಳು

**"ಆಡಳಿತ ಪರಿಣಿತಿ ಅಭಿವೃದ್ಧಿ ತರಬೇತಿ" ಕಾರ್ಯಕ್ರಮ :** ರಾಜ್ಯದ ಸೌಹಾರ್ದ ಸಹಕಾರಿಗಳ ನಿರ್ದೇಶಕರುಗಳಿಗಾಗಿ ದಿನಾಂಕ 07 ಹಾಗೂ 08ನೇ ಜೂನ್ 2022ರಂದು "ಆಡಳಿತ ಪರಿಣಿತಿ ಅಭಿವೃದ್ಧಿ ತರಬೇತಿ" ಕಾರ್ಯಕ್ರಮವನ್ನು ಆಯೋಜಿಸಿರುವುದು ತಮಗೆ ತಿಳಿದಿದೆ. ಪ್ರತಿನಿಧಿಗಳ ಸಂಖ್ಯೆ ಹೆಚ್ಚು ನೋಂದಣಿಯಾದ ಪ್ರಯುಕ್ತ 3 ತಂಡದಲ್ಲಿ ಕಾರ್ಯಕ್ರಮವನ್ನು ವಿಂಗಡಿಸಿ ನಡೆಸಲಾಗುತ್ತಿದೆ.

ಈ ಕಾರ್ಯಕ್ರಮದ 1ನೇ ತಂಡವನ್ನು ದಿನಾಂಕ 07 & 08ನೇ ಜೂನ್ 2ನೇ ತಂಡವನ್ನು ದಿನಾಂಕ 15 & 16ನೇ ಜೂನ್ ಹಾಗೂ 3ನೇ ತಂಡವನ್ನು ದಿನಾಂಕ 22 & 23ನೇ ಜೂನ್ 2022ರಂದು "ಸೌಹಾರ್ದ ಸಹಕಾರಿ ಸೌಧ", ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು ಇಲ್ಲಿ ಆಯೋಜಿಸಲಾಗಿದೆ.

## ವಿಷಯಾಧಾರಿತ ಸಭೆ

**ಚಿತ್ರದುರ್ಗ :** ದಿನಾಂಕ 23.05.2022 ರಂದು ಚಿತ್ರದುರ್ಗ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು / ನಿರ್ದೇಶಕರು / ಮುಖ್ಯಾಕಾರ್ಯನಿರ್ವಾಹಕರು ಗಳಿಗಾಗಿ ದಿ ಮರ್ಚೆಂಟ್ಸ್ ಸೌಹಾರ್ದ ಸಹಕಾರ ಬ್ಯಾಂಕ್ ಲಿ., ಚಿತ್ರದುರ್ಗ ಇಲ್ಲಿ ವಿಷಯಾಧಾರಿತ ಸಭೆಯನ್ನು ಆಯೋಜಿಸಲಾಗಿತ್ತು. ಸದರಿ ಸಭೆಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ಇವರು ನೆರವೇರಿಸಿದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಲಕ್ಷ್ಮೀಕಾಂತರೆಡ್ಡಿ ರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಚಿತ್ರದುರ್ಗ ಜಿಲ್ಲಾ ಸೌಹಾರ್ದ ಒಕ್ಕೂಟದ ಉಪಾಧ್ಯಕ್ಷರಾದ ಶ್ರೀ ಸಿ. ವೀರಭದ್ರಬಾಬು ರವರು, ಜಿಲ್ಲಾ ಸಂಯೋಜಕರಾದ ಶ್ರೀ ನಟರಾಜ ರವರು ಉಪಸ್ಥಿತರಿದ್ದರು. ಒಕ್ಕೂಟದ ನಿರ್ದೇಶಕರು ಹಾಗೂ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು/ನಿರ್ದೇಶಕರು ಹಾಗೂ ಮುಖ್ಯಕಾರ್ಯನಿರ್ವಾಹಕರು ಸೇರಿದಂತೆ 50 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

**ದಾವಣಗೆರೆ :** ದಿನಾಂಕ 23.05.2022 ರಂದು ದಾವಣಗೆರೆ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು / ನಿರ್ದೇಶಕರು / ಮುಖ್ಯಾಕಾರ್ಯನಿರ್ವಾಹಕರುಗಳಿಗಾಗಿ ಹೋಟೆಲ್ ಅಶೋಕ ಇನ್, ದಾವಣಗೆರೆ ಇಲ್ಲಿ ವಿಷಯಾಧಾರಿತ ಸಭೆಯನ್ನು ಆಯೋಜಿಸಲಾಗಿತ್ತು. ಸದರಿ ಸಭೆಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ಇವರು ನೆರವೇರಿಸಿದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ. ನಂಜನಗೌಡ ರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ದಾವಣಗೆರೆ ಜಿಲ್ಲಾ ಸೌಹಾರ್ದ ಒಕ್ಕೂಟದ ಅಧ್ಯಕ್ಷರಾದ ಶ್ರೀ ಹೆಚ್.ಎಮ್. ನಾಗರಾಜ್ ರವರು, ಉಪಾಧ್ಯಕ್ಷರಾದ ಶ್ರೀ ಉಮೇಶ್ ಶೆಟ್ಟಿ ರವರು, Tumkos ನ ಮಾಜಿ ಅಧ್ಯಕ್ಷರಾದ ಶ್ರೀ ಶಿವಕುಮಾರ್ ರವರು, SDLB ಬ್ಯಾಂಕ್‌ನ ಮಾಜಿ ಉಪಾಧ್ಯಕ್ಷರಾದ ಶ್ರೀ ಬೆಳ್ಳೂಡಿ ರಾಮಚಂದ್ರಪ್ಪ ರವರು, ದಾವಣಗೆರೆ ಮಹಾನಗರ ಪಾಲಿಕೆಯ ಮಾಜಿ ಮೇಯರ್ ಆದ ಶ್ರೀ ಎಸ್.ಟಿ. ವೀರೇಶ್ ರವರು, ಜಿಲ್ಲಾ ಸಂಯೋಜಕರಾದ ಶ್ರೀ ನಟರಾಜ ರವರು ಉಪಸ್ಥಿತರಿದ್ದರು. ದಾವಣಗೆರೆ ಜಿಲ್ಲಾ ಒಕ್ಕೂಟದ ನಿರ್ದೇಶಕರು ಹಾಗೂ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು/ನಿರ್ದೇಶಕರು/ಮುಖ್ಯ ಕಾರ್ಯನಿರ್ವಾಹಕರು ಸೇರಿದಂತೆ ಒಟ್ಟು 80 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

**ತುಮಕೂರು, ಕೋಲಾರ ಹಾಗೂ ಚಿಕ್ಕಬಳ್ಳಾಪುರ :** ದಿನಾಂಕ 02.05.2022 ರಂದು ತುಮಕೂರು, ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ಆನ್‌ಲೈನ್ ಮೂಲಕ ಸಂಯುಕ್ತ ಸಹಕಾರಿಯ ಚುನಾವಣಾ ಪೂರ್ವ ಸಿದ್ಧತಾ ಸಭೆಯನ್ನು ಆಯೋಜಿಸಲಾಗಿತ್ತು. ಸದರಿ ಸಭೆಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ನಾರಾಯಣ ಹೆಗಡೆ ರವರು, ಬೆಂಗಳೂರು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸಂಜಯ ಕೋರಟಕರ ರವರು ಭಾಗವಹಿಸಿ ಸಹಕಾರಿಗಳಿಗೆ ಅಗತ್ಯ ಮಾಹಿತಿ ನೀಡಿದರು. ಜಿಲ್ಲಾ ಸಂಯೋಜಕರಾದ ಶ್ರೀ ಉಮೇಶ್ ಎ.ಎಸ್ ಹಾಗೂ ಶ್ರೀ ಕುಶಾಲ್ ಹೆಚ್.ಎಮ್ ರವರು ಭಾಗವಹಿಸಿದ್ದರು. ಸಭೆಯಲ್ಲಿ 71 ಪ್ರತಿನಿಧಿಗಳು ಭಾಗವಹಿಸಿದ್ದರು.

**ಬೆಂಗಳೂರು ನಗರ, ಗ್ರಾಮಾಂತರ ಹಾಗೂ ರಾಮನಗರ :** ದಿನಾಂಕ 03.05.2022 ರಂದು ಬೆಂಗಳೂರು ನಗರ, ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ಆನ್‌ಲೈನ್ ಮೂಲಕ ಸಂಯುಕ್ತ ಸಹಕಾರಿಯ ಚುನಾವಣಾ ಪೂರ್ವ ಸಿದ್ಧತಾ ಸಭೆಯನ್ನು ಆಯೋಜಿಸಲಾಗಿತ್ತು. ಸದರಿ ಸಭೆಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ನಾರಾಯಣ ಹೆಗಡೆ ರವರು, ಶ್ರೀ ರಘುನಂದನ್ ರವರು, ಬೆಂಗಳೂರು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸಂಜಯ ಕೋರಟಕರ ರವರು ಭಾಗವಹಿಸಿ ಸಹಕಾರಿಗಳಿಗೆ ಅಗತ್ಯ ಮಾಹಿತಿ ನೀಡಿದರು. ಜಿಲ್ಲಾ ಸಂಯೋಜಕರಾದ ಶ್ರೀ ಅನಿಲ್ ಕುಮಾರ್ ಎಮ್. ಹಾಗೂ ಶ್ರೀ ರಾಜೇಶ್ ಕೆ.ಎಮ್ ರವರು ಭಾಗವಹಿಸಿದ್ದರು. ಸಭೆಯಲ್ಲಿ 74 ಪ್ರತಿನಿಧಿಗಳು ಭಾಗವಹಿಸಿದ್ದರು.

**ತುಮಕೂರು :** ದಿನಾಂಕ 27.05.2022ರಂದು ಶುಕ್ರವಾರ ಬೆಳಗ್ಗೆ 11.30 ಗಂಟೆಗೆ ಶ್ರೀ ಶಿವಾಜಿ ಸೌಹಾರ್ದ ಪತ್ತಿನ ಸಹಕಾರಿ ನಿ., ತುಮಕೂರು. ಇಲ್ಲಿ ತುಮಕೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ "ವಿಷಯಾಧಾರಿತ ತರಬೇತಿ" ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಭೆಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ. ಹೆಚ್. ಕೃಷ್ಣಾರೆಡ್ಡಿರವರು ಹಾಗೂ ವೇದಿಕೆ ಮೇಲಿದ್ದ ಗಣ್ಯರು ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ತುಮಕೂರು ಜಿಲ್ಲಾ ನಿರ್ದೇಶಕರಾದ ಶ್ರೀ ಬಿ.ಗಂಗಾಧರಯ್ಯ ರವರು ವಹಿಸಿದ್ದರು, ಮುಖ್ಯಅತಿಥಿಗಳಾಗಿ ತುಮಕೂರು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಎಸ್. ಲಕ್ಷ್ಮೀನಾರಾಯಣ ರವರು, ಉಪಾಧ್ಯಕ್ಷರಾದ ಶ್ರೀ ಲ್ಯಾನ್ಸಿ ಹೆಚ್ ಪಾಯಸ್ ರವರು, ಶ್ರೀ ಶಿವಾಜಿ ಸೌಹಾರ್ದ ಪತ್ತಿನ ಸಹಕಾರಿಯ ಅಧ್ಯಕ್ಷರಾದ ಶ್ರೀ ಸುರೇಶ್ ರಾವ್ ರವರು, ಶ್ರೀ ಗುರುಕುಲ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಮಲ್ಲಿಕಾರ್ಜುನಯ್ಯ ರವರು ಉಪಸ್ಥಿತರಿದ್ದರು. ಈ ಸಭೆಯಲ್ಲಿ ತುಮಕೂರು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ನಿರ್ದೇಶಕರು, ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು/ನಿರ್ದೇಶಕರು ಭಾಗವಹಿಸಿದ್ದರು.

**ಚಿಕ್ಕಬಳ್ಳಾಪುರ :** ದಿನಾಂಕ 28.05.2022ರಂದು ಶನಿವಾರ ಬೆಳಗ್ಗೆ 11.00 ಗಂಟೆಗೆ ಗೋಪಿನಾಥ ಬೆಟ್ಟ, ಚಿಕ್ಕಬಳ್ಳಾಪುರ. ಇಲ್ಲಿ ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ "ವಿಷಯಾಧಾರಿತ ತರಬೇತಿ" ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಭೆಯ ಉದ್ಘಾಟನೆ ಮತ್ತು ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿರವರು ನೆರವೇರಿಸಿದರು. ಈ ಸಭೆಯಲ್ಲಿ ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರಾದ ಶ್ರೀ ನಾಗೇಂದ್ರ ಗುಪ್ತ ರವರು, ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ಅಧ್ಯಕ್ಷರಾದ ಶ್ರೀ ಅಮರ್. ಆರ್ ರವರು, ಉಪಾಧ್ಯಕ್ಷರಾದ ಶ್ರೀ ಹರ್ಷಜಿತ್ ರವರು ಹಾಗೂ ಜಿಲ್ಲಾ ಒಕ್ಕೂಟದ ನಿರ್ದೇಶಕರು ಉಪಸ್ಥಿತರಿದ್ದರು. ಸಭೆಯಲ್ಲಿ ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು/ನಿರ್ದೇಶಕರು ಭಾಗವಹಿಸಿದ್ದರು.

## ಬೆಳಗಾವಿ ಸಹಕಾರ ಸಂಘಗಳ ಉಪ ನಿಬಂಧಕರಾಗಿ ಶ್ರೀ ಎನ್ ಎಮ್ ಮಣಿ ಅಧಿಕಾರ ಸ್ವೀಕಾರ

**ಬೆಳಗಾವಿ :** ನೂತನವಾಗಿ ಬೆಳಗಾವಿ ಜಿಲ್ಲೆ ಸಹಕಾರ ಸಂಘಗಳ ಉಪ ನಿಬಂಧಕರಾಗಿ ಅಧಿಕಾರ ವಹಿಸಿಕೊಂಡ ಶ್ರೀ ಎನ್ ಎಮ್ ಮಣಿ ಇವರಿಗೆ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ ಹಾಗೂ ಸಿಬ್ಬಂದಿಯವರಿಂದ ಶುಭಕೋರಲಾಯಿತು.

## ಬಾಗಲಕೋಟ ಸಹಕಾರ ಸಂಘಗಳ ಉಪ ನಿಬಂಧಕರಾಗಿ ಶ್ರೀ ದಾನಯ್ಯ ಹಿರೇಮಠ ಅಧಿಕಾರ ಸ್ವೀಕಾರ

ದಿನಾಂಕ 24.04.2022 ರಂದು ನೂತನವಾಗಿ ಅಧಿಕಾರ ಸ್ವೀಕರಿಸಿದ ಬಾಗಲಕೋಟೆ ಜಿಲ್ಲೆಯ ಉಪನಿಬಂಧಕರು (ಪ್ರಭಾರ) ಹಾಗೂ ಸಹಾಯಕ ನಿಬಂಧಕರು ಆದ ಶ್ರೀ ದಾನಯ್ಯ ಹಿರೇಮಠ ಇವರನ್ನು ಬಾಗಲಕೋಟೆ ಜಿಲ್ಲಾ ಸಂಯೋಜಕರಾದ ಶ್ರೀ ನಾಗರಾಜ ಜಿ ಹೆಚ್ ಇವರು ಭೇಟಿ ಮಾಡಿ ಶುಭಕೋರಲಾಯಿತು.

## ಶ್ರೀ ಎಸ್. ಶಂಕರ, ಹಾಸನ ಉಪ ನಿಬಂಧಕರಾಗಿ ಅಧಿಕಾರ ಸ್ವೀಕಾರ

**ಹಾಸನ :** ದಿನಾಂಕ 31.05.2022 ರಂದು ಹಾಸನ ಜಿಲ್ಲೆ ಉಪ ನಿಬಂಧಕರಾದ ಶ್ರೀ ದಯಾನಂದ ಹೆಚ್.ಕೆ ರವರು ನಿವೃತ್ತಿಯಾಗುತ್ತಿರುವ ಹಿನ್ನೆಲೆಯಲ್ಲಿ ಹಾಗೂ ನೂತನ ಉಪ ನಿಬಂಧಕರಾಗಿ ಅಧಿಕಾರ ಸ್ವೀಕರಿಸಿದ ಶ್ರೀ ಎಸ್. ಶಂಕರ್ ಇವರನ್ನು ಸ್ವಾಗತ ಕೋರಿ ಸಂಯುಕ್ತ ಸಹಕಾರಿಯ ಪರವಾಗಿ ಸನ್ಮಾನಿಸಲಾಯಿತು.

## ಮಾನ್ಯ ಗೃಹ ಮಂತ್ರಿಗಳಿಗೆ ಸನ್ಮಾನ

**ಕಲಬುರಗಿ :** ಕಲಬುರಗಿ ನಗರಕ್ಕೆ ಆಗಮಿಸಿದ ಹಿರಿಯ ಸಹಕಾರಿಗಳು ಹಾಗೂ ಮಾನ್ಯ ಗೃಹಮಂತ್ರಿಗಳಾದ ಶ್ರೀ ಆರಗ ಜ್ಞಾನೇಂದ್ರರವರನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ ಹಾಗೂ ಶ್ರೀ ಸಂಜೀವ ಮಹಾಜನರವರು ಭೇಟಿ ಮಾಡಿ ಸಹಕಾರ ಕ್ಷೇತ್ರದ ಕುರಿತು ಚರ್ಚಿಸಿ, ಮಾನ್ಯ ಮಂತ್ರಿಯವರನ್ನು ಸನ್ಮಾನಿಸಿದರು. ಈ ಸಂದರ್ಭದಲ್ಲಿ ಕಲಬುರಗಿ ಜಿಲ್ಲಾ ಒಕ್ಕೂಟದ ಅಧ್ಯಕ್ಷರು ಹಾಗೂ ಇತರೇ ಸಹಕಾರಿಗಳ ಪ್ರತಿನಿಧಿಗಳು ಉಪಸ್ಥಿತರಿದ್ದರು.

## ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರ ಹಾಗೂ ನಿರ್ದೇಶಕರುಗಳು ವಿವಿಧ ಸೌಹಾರ್ದ ಸಹಕಾರಿಗಳಿಗೆ ಭೇಟಿ

**ಕೊಪ್ಪಳ :** ದಿನಾಂಕ 04.05.2022 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ ,ಮಾನ್ಯ ನಿರ್ದೇಶಕರಾದ ಶ್ರೀ ಜಿ.ಶ್ರೀಧರ, ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ.ಪಾಟೀಲ ರವರು ಗಂಗಾವತಿಯ ಶ್ರೀ ಭುವನೇಶ್ವರಿ ವಿವಿದೋದ್ಧೇಶ ಸೌಹಾರ್ದ ಸಹಕಾರಿಗೆ ಭೇಟಿ ನೀಡಿ ಸಹಕಾರಿಯ ಅಭಿವೃದ್ಧಿಯ ಕುರಿತು ಚರ್ಚಿಸಿ ಸೂಕ್ತ ಸಲಹೆ-ಸೂಚನೆಗಳನ್ನು ನೀಡಿದರು ಮತ್ತು ನಂತರ ಸಹಕಾರಿಯ ವತಿಯಿಂದ ಮಾನ್ಯರನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ವಿರುಪಾಕ್ಷಪ್ಪ ಮುಷ್ಠಿ, ಉಪಾಧ್ಯಕ್ಷರಾದ ಶ್ರೀ ಸುಭಾಷ ಚಂದ ಜೈನ, ಆಡಳಿತ ಮಂಡಳಿಯ ನಿರ್ದೇಶಕರು, ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಶಶಿಧರ ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

**ಕೊಪ್ಪಳ :** ದಿನಾಂಕ 04.05.2022 ರಂದು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ ರವರು ಕೊಪ್ಪಳ ಜಿಲ್ಲೆಯ ಪೂರ್ವಾಲೋಚನೆ ಸಭೆಯನ್ನು ಗಂಗಾವತಿಯ ಋಷಿ ಪತ್ತಿನ ಸೌಹಾರ್ದ ಸಹಕಾರಿಯಲ್ಲಿ ನಡೆಸೋಣವೆಂದು ಆಯ್ಕೆ ಮಾಡಿ ಸಭೆ ನಡೆಸಿ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು ಹಾಗೂ ಸಹಕಾರಿಯ ಅಧ್ಯಕ್ಷರಾದ ಶ್ರೀ ಆನಂದಕುಮಾರ ಅಕ್ಕಿ, ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಸೋಮಶೇಖರ ಸಿಂಗನಾಳ ಹಾಗೂ ಆಡಳಿತ ಮಂಡಳಿಯ ನಿರ್ದೇಶಕರ ಉಪಸ್ಥಿತಿಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಬಿ.ಹೆಚ್.ಕೃಷ್ಣಾರೆಡ್ಡಿ, ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ.ಶ್ರೀಧರ, ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಮಾನ್ಯ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ.ಬಿ.ಪತ್ತಾರ, ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ.ಜಿ.ಪಾಟೀಲ ಮತ್ತು ನೂತನವಾಗಿ ಆರ್.ಡಿ.ಸಿ.ಸಿ ಬ್ಯಾಂಕಿಗೆ ನಿರ್ದೇಶಕರಾಗಿ ಆಯ್ಕೆಯಾಗಿರುವ ಶ್ರೀ ಶರಣಪ್ಪ ಹ್ಯಾಟಿ ರವರುಗಳಿಗೆ ಗೌರವಯುತವಾಗಿ ಸಹಕಾರಿಯ ವತಿಯಂದ ಸನ್ಮಾನಿಸಲಾಯಿತು.

**ಕೊಪ್ಪಳ :** ದಿನಾಂಕ 04.05.2022 ರಂದು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ, ಮಾನ್ಯ ನಿರ್ದೇಶಕರಾದ ಶ್ರೀ ಜಿ.ಶ್ರೀಧರ, ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ.ಜಿ.ಪಾಟೀಲ, ಆರ್.ಡಿ.ಸಿ.ಸಿ ಬ್ಯಾಂಕಿನ ಮಾನ್ಯ ನಿರ್ದೇಶಕರಾದ ಶ್ರೀ ಶರಣಪ್ಪ ಹ್ಯಾಟಿ, ಸಿ.ಬಿ.ಎಸ್ ಸೌಹಾರ್ದ ಸಹಕಾರಿ ಬ್ಯಾಂಕಿನ ಮಾನ್ಯ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಸಿ.ಜಿ.ಜವಳಿ ರವರು ಗಂಗಾವತಿಯ ಕಿಷ್ಕಿಂದ ಸಿರಿ ಪತ್ತಿನ ಸೌಹಾರ್ದ ಸಹಕಾರಿಗೆ ಭೇಟಿ ನೀಡಿದರು. ಸಹಕಾರಿಯ ವತಿಯಿಂದ ಮಾನ್ಯರನ್ನು ಸನ್ಮಾನಿಸಲಾಯಿತು.

**ಶಿವಮೊಗ್ಗ :** ದಿನಾಂಕ 23.05.2022 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ ರವರು ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲೂಕಿನ ಅಮೃತ ಸೌಹಾರ್ದ ಸಹಕಾರಿ ನಿ,. ಗರ್ತಿಕೆರೆ, ಶ್ರೀ ನಾರಾಯಣಗುರು ಗುರು ಅಕ್ಷರಧಾಮ ಸೌಹಾರ್ದ ಸಹಕಾರಿ ನಿ,. ಅಮೃತ ದಿನಸಿ ಸೌಹಾರ್ದ ಸಹಕಾರಿ ನಿ,. ಸದರಿ ಸಹಕಾರಿಗಳಿಗೆ ಭೇಟಿ ನೀಡಿ ಸದರಿ ಸಹಕಾರಿಗಳ ಅಧ್ಯಕ್ಷರು/ನಿದೇಶಕರು ಹಾಗೂ ಸಿಬ್ಬಂದಿಗಳೊಂದಿಗೆ ಸಮಾಲೋಚನೆ ನಡೆಸಿದರು. ಇದೇ ಸಂದರ್ಭದಲ್ಲಿ ಮಾನ್ಯ ನಿರ್ದೇಶಕರಾದ ಶ್ರೀ ಎ.ಆರ್. ಪ್ರಸನ್ನ ಕುಮಾರ್ ರವರು ಉಪಸ್ಥಿತರಿದ್ದರು.

**ಕಲಬುರಗಿ :** ಕಲಬುರಗಿ ಪ್ರಾಂತೀಯ ಕಛೇರಿಗೆ ಆಗಮಿಸಿದ ಶ್ರೀ ಸಾಬಣ್ಣ ತಳವಾರ ಮಾನ್ಯ ವಿಧಾನ ಪರಿಷತ್ ಸದಸ್ಯರು ಇವರಿಗೆ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರು ಸನ್ಮಾನಿಸಿದರು. ಈ ಸಂದರ್ಭದಲ್ಲಿ ಪ್ರಾಂತದ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಸೌಹಾರ್ದ ಸಹಕಾರಿಗಳು ನಿರ್ವಹಿಸುವ ಇ-ಸ್ಟಾಂಪಿಂಗ್ ಕೇಂದ್ರಗಳ ನಿರ್ವಹಣಾ ವ್ಯವಸ್ಥೆ ಹೊಂದಿರಬೇಕಾದ ಕನಿಷ್ಠ ತಾಂತ್ರಿಕತೆಯ ಅಗತ್ಯತೆಗಳನ್ನು ಅಳವಡಿಸುವ ಬಗ್ಗೆ ಮಾಹಿತಿ

**E-Stamp System Updations**

**Google Chrome version 53 or later in both systems,**

**Compatible Operating Systems: Windows 10, with 2020 release and higher,**

**Supporting printer Canon LBP226DW, Connect to supervisor system through USB cable,**

Upgraded version of e-stamping print control proxy(PCP) will be available for download from 25 May 2022. This is mandatory update and hence users are requested to install this new program by 27 May 2022 post which current version will not work for e-stamp printing and ACC/vendors will not be able to print any certificate without this upgrade. Version update can be downloaded from download link in e-stamping printing page. Before installing new PCP version, please uninstall the existing PCP and proceed.”

**For PCP installation procedure from kssfcl please use the link below**

**https://youtu.be/yhSHZFlzYL4**

## ಸಂಯುಕ್ತ ಸಹಕಾರಿಯ ಶಾಸನಬದ್ಧ ಕಾರ್ಯಗಳು

**1. ತೀರ್ಥಹಳ್ಳಿ ತಾಲ್ಲೂಕು ಶ್ರೀ ವಿಶ್ವಕರ್ಮ ಸೌಹಾರ್ದ ಸಹಕಾರಿಯ ನಿರ್ದೇಶಕರ ಅನರ್ಹತೆ (ಎಸ್‌ಎಮ್‌ಜಿ–0136)**

ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಲಕ್ಷ್ಮೀನಾರಾಯಣ ಬಿ.ಎಸ್. ತಂದೆ ಶ್ರೀನಿವಾಸಚಾರ್ ಇವರಿಗೆ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ ಕಲಂ 25(1)(ಇ)ರನ್ವಯ ಸಹಕಾರಿಯಿಂದ ಸಾಲ ಪಡೆದು ಸಾಲದ ಕಂತನ್ನು ಮರು ಸಂದಾಯ ಮಾಡಲು ತಪ್ಪಿರುವ ಹಿನ್ನಲಿಯಲ್ಲಿ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ ಕಲಂ 25(4) ರಡಿ ಕಾರಣ ಕೇಳಿ ನೋಟಿಸ್‌ನ್ನು ನೀಡಲಾಗಿತ್ತು. ಸದರಿ ಕಾರಣ ಕೇಳಿ ನೋಟಿಸಿಗೆ ನಿರ್ದೇಶಕರು ಸ್ಪಷ್ಟನೆಯನ್ನು ನೀಡಿದ್ದು ಸದರಿ ಸ್ಪಷ್ಟನೆಯು ಸಮಂಜಾಸವಾಗಿರದ ಹಿನ್ನಲೆಯಲ್ಲಿ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ ಕಲಂ 25(1)(ಇ) ಪ್ರಾವದಾನದಂತೆ ಹಾಗೂ ಸದರಿ ಅಧಿನಿಯಮದ ಕಲಂ 25(1)(ಎಫ್)ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಶ್ರೀ ಲಕ್ಷ್ಮೀನಾರಾಯಣ ಬಿ. ಎಸ್. ತಂದೆ ಶ್ರೀನಿವಾಸಚಾರ್ ಇವರನ್ನು ತೀರ್ಥಹಳ್ಳಿ ತಾಲ್ಲೂಕು ಶ್ರೀ ವಿಶ್ವಕರ್ಮ ಸೌಹಾರ್ದ ಸಹಕಾರಿ ನಿ., ತೀರ್ಥಹಳ್ಳಿ ಇದರ ಆಡಳಿತ ಮಂಡಲಿಯ ಸದಸ್ಯತ್ವದಿಂದ ದಿನಾಂಕ 20.05.2022 ರಂದು ಅನರ್ಹಗೊಳಿಸಲಾಗಿದೆ. ಸದರಿಯವರು ಈ ದಿನಾಂಕದಿಂದ ಮುಂದಿನ ಎರಡು ವರ್ಷದ ಅವಧಿಯವರೆಗೆ ಸದರಿ ಸಹಕಾರಿಯ ನಿರ್ದೇಶಕರಾಗಿ ಚುನಾಯಿತರಾಗಲು ಅಥವಾ ಮುಂದುವರೆಯಲು ಅನರ್ಹರಾಗಿರುತ್ತಾರೆ.

**2. ಸಹಕಾರಿಗಳ ಪರಿವೀಕ್ಷಣಾ ವರದಿಯನುಸಾರ 43 ಸೌಹಾರ್ದ ಸಹಕಾರಿಗಳಿಗೆ ನಿರ್ದೇಶನ ಹೊರಡಿಸಿದೆ :**

ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ಅಧಿನಿಯಮ–1997ರ ಕಲಂ 53(7)(ಯು)ರಡಿ ಸಹಕಾರಿಯ ಕಾರ್ಯಚಟುವಟಿಕೆ ಕುರಿತು ಪರಿವೀಕ್ಷಣೆ ನಡೆಸಿ ಪರಿವೀಕ್ಷಣಾಧಿಕಾರಿಯು ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ಪರಿವೀಕ್ಷಣಾ ವರದಿಯಲ್ಲಿನ ನ್ಯೂನ್ಯತೆಗಳಿಗೆ ಸಂಬಂಧಿಸಿದಂತೆ ಅನುಪಾಲನಾ ವರದಿ ಸಲ್ಲಿಸಲು ಸಹಕಾರಿಗಳಿಗೆ ಸೂಚಿಸಲಾಗಿರುತ್ತದೆ. ಅವುಗಳ ಪೈಕಿ 43 ಸೌಹಾರ್ದ ಸಹಕಾರಿಗಳ ಪರಿವೀಕ್ಷಣಾ ವರದಿಯ ಕುರಿತಂತೆ ದಿನಾಂಕ 21.02.2022 ರಂದು ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಸಭೆಯಲ್ಲಿ ಚರ್ಚಿಸಿ ನ್ಯೂನತೆಗಳನ್ನು ಸರಿಪಡಿಸಿಕೊಂಡು ಸಂಪೂರ್ಣವಾದ ಅನುಪಾಲನಾ ವರದಿ ಸಲ್ಲಿಸುವಂತೆ ಸಹಕಾರಿಗೆ ನಿರ್ದೇಶನ ನೀಡಲು ನಿರ್ಣಯಿಸಿದ ಹಿನ್ನಲೆಯಲ್ಲಿ 43 ಸೌಹಾರ್ದ ಸಹಕಾರಿಗೆ ಪರಿವೀಕ್ಷಣಾ ವರದಿಯ ನ್ಯೂನತೆಯ ಕುರಿತು ಕ್ರಮವಿಟ್ಟು, ಕ್ರಮವಿಟ್ಟ ಅನುಪಾಲನಾ ವರದಿಯನ್ನು ಸಲ್ಲಿಸುವಂತೆ ಕಾಯ್ದೆ ಕಲಂ 25(2)(ಡಿ)ರಡಿ ನಿರ್ದೇಶನ ಪತ್ರವನ್ನು ನೀಡಲಾಗಿರುತ್ತದೆ. ಒಂದು ವೇಳೆ ಈ ನಿರ್ದೇಶನವನ್ನು ಉಲ್ಲಂಘಿಸಿದ್ದಲ್ಲಿ ಕಾಯ್ದೆ ಕಲಂ 25(2)(ಡಿ)ರಡಿ ಕ್ರಮವಿಡಲಾಗುವುದು ಎಂದು ನಿರ್ದೇಶನ ಪತ್ರದಲ್ಲಿ ತಿಳಿಸಲಾಗಿರುತ್ತದೆ.

**3. ಪೋಲೀಸ್ ಠಾಣೆಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲು :**

ಶ್ರೀ ಶ್ರೀಶೈಲಗಿರಿ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಬಸವನಗುಡಿ ಬೆಂಗಳೂರು ಸಹಕಾರಿಯ ಆಡಳಿತ ಮಂಡಲಿ ಹಾಗೂ ಮುಖ್ಯಕಾರ್ಯನಿರ್ವಾಹಕರು ಪರಿವೀಕ್ಷಣೆಗೆ ಸಹಕರಿಸದ ಮತ್ತು ಠೇವಣಿದಾರರಿಗೆ ನಂಬಿಕೆ ದ್ರೋಹ, ವಂಚನೆ, ಮೋಸ ಎಸಗಿರುವುದು ಕಂಡುಬಂದಿರುತ್ತದೆ ಹಾಗೂ ಸಹಕಾರಿಯಲ್ಲಿ ಠೇವಣಿ ಹೂಡಿರುವ ಠೇವಣಿದಾರರು ಠೇವಣಿ ಮೊತ್ತವನ್ನು ಹಿಂತಿರುಗಿಸುತ್ತಿಲ್ಲವೆಂದು ಸಂಯುಕ್ತ ಸಹಕಾರಿಗೆ ದೂರನ್ನು ಸಲ್ಲಿಸಿರುತ್ತಾರೆ. ಈ ಹಿನ್ನಲೆಯಲ್ಲಿ ಸಹಕಾರಿಯ ಆಡಳಿತ ಮಂಡಲಿ ಸದಸ್ಯರು ಮತ್ತು ಮುಖ್ಯ ಕಾರ್ಯನಿರ್ವಾಹಕರ ವಿರುದ್ಧ ಬೆಂಗಳೂರು ನಗರದ ಬಸವನಗುಡಿ ಪೋಲೀಸ್ ಠಾಣೆಯಲ್ಲಿ ಸಂಯುಕ್ತ ಸಹಕಾರಿಯಿಂದ ಸಹಕಾರಿಯ ಆಡಳಿತ ಮಂಡಲಿ ಹಾಗೂ ಮುಖ್ಯ ಕಾರ್ಯನಿರ್ವಾಹಕರ ಮೇಲೆ ಕ್ರಿಮಿನಲ್ ಪ್ರಕರಣ (ಸಂಖ್ಯೆ:0049/2022) ದಾಖಲಿಸಲಾಗಿರುತ್ತದೆ.

## ಇ-ಮಾರ್ಕೆಟ್‌ನಲ್ಲಿ ಸಹಕಾರಿಗಳಿಗೆ ಅವಕಾಶ



**ನವದೆಹಲಿ :** ಗವರ್ನಮೆಂಟ್ ಇ-ಮಾರ್ಕೆಟ್ ಪ್ಲೇಸ್ (GeM) ಗೆ ಸಹಕಾರಿ ಸಂಸ್ಥೆಗಳಿಗೆ ಅವಕಾಶ ನೀಡುವ ಪ್ರಸ್ತಾವನೆಯನ್ನು ಕೇಂದ್ರ ಸಚಿವ ಸಂಪುಟ ಬುಧವಾರ ಅಂಗೀಕರಿಸಿದೆ. ಇದರೊಂದಿಗೆ ಸಹಕಾರಿಗಳು ಕೂಡ ಖರೀದಿದಾರರಾಗಿ ಇ-ಮಾರ್ಕೆಟ್ ಪ್ಲೇಸ್‌ನಲ್ಲಿ ನೋಂದಣಿ ಮಾಡಿಸಿಕೊಳ್ಳಬಹುದು ಎಂದು ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವ ಅನುರಾಗ್ ಠಾಕೂರ್ ಹೇಳಿದರು. ಪ್ರಸ್ತುತ ಸಹಕಾರಿ ಸಂಸ್ಥೆಗಳು ಈ ಪೋರ್ಟಲ್‌ನಲ್ಲಿ ಖರೀದಿದಾರರಾಗಿ ನೋಂದಣಿ ಮಾಡಲು ಅವಕಾಶವಿಲ್ಲ. ಸರ್ಕಾರದ ಈ ಹೊಸ ತೀರ್ಮಾನದಿಂದಾಗಿ 8.54 ಲಕ್ಷಕ್ಕೂ ಹೆಚ್ಚಿನ ಸಹಕಾರಿ ಸಂಸ್ಥೆಗಳಿಗೆ ಮತ್ತು ಅವುಗಳ 27 ಕೋಟಿ ಸದಸ್ಯರಿಗೆ ಪ್ರಯೋಜನವಾಗಲಿದೆ. ಅವರು ಇ-ಮಾರ್ಕೆಟ್ ಪ್ಲೇಸ್‌ನಲ್ಲಿ ಸ್ಪರ್ಧಾತ್ಮಕ ದರದಲ್ಲಿ ಉತ್ಪನ್ನಗಳಿಗೆ ಖರೀದಿಸಬಹುದಾಗಿದೆ. ಪ್ರಸ್ತುತ (GeM) ಪೋರ್ಟಲ್‌ನಲ್ಲಿ ಸರಕು ಮತ್ತು ಸೇವೆಗಳಿಗೆ ಖಾಸಗಿ ಕ್ಷೇತ್ರದ ಖರೀದಿದಾರರು ನೋಂದಣಿ ಮಾಡುವಂತಿಲ್ಲ. ಆದರೆ ಖಾಸಗಿ ಮತ್ತು ಸರ್ಕಾರದ ಎಲ್ಲ ಕ್ಷೇತ್ರಗಳ ಪೂರೈಕೆದಾರರು (ಮಾರಾಟಗಾರರು) ನೋಂದಣಿ ಮಾಡಬಹುದು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಎಲ್ಲ ಇಲಾಖೆ, ಸ್ವಾಯತ್ತ ಸಂಸ್ಥೆಗಳು, ಇಲಾಖೆಗಳು ಇದರ ಮೂಲಕ ಮುಕ್ತವಾಗಿ ಖರೀದಿಸಬಹುದಾಗಿದೆ. 2016ರ ಆಗಸ್ಟ್ 9ಕ್ಕೆ ಈ ಪೋರ್ಟಲ್ ಅನ್ನು ಲೋಕಾರ್ಪಣೆ ಮಾಡಲಾಗಿದೆ.

---

**ಶಿವಮೊಗ್ಗ :** ದಿನಾಂಕ 23.05.2022 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ ರವರು ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲೂಕಿನ ಅಮೃತ ಸೌಹಾರ್ದ ಸಹಕಾರಿ ನಿ,. ಗರ್ತಿಕೆರೆ, ಅಭಯ್ ವಿವಿದೋದ್ಧೇಶ ಸೌಹಾರ್ದ ಸಹಕಾರಿ ನಿ,. ಹಾದಿಗಲ್ಲು, ಸಹಕಾರಿಗೆ ಭೇಟಿ ನೀಡಿ ಸದರಿ ಸಹಕಾರಿಗಳ ಅಧ್ಯಕ್ಷರು/ನಿದೇಶಕರು ಹಾಗೂ ಸಿಬ್ಬಂದಿಗಳೊಂದಿಗೆ ಸಮಾಲೋಚನೆ ನಡೆಸಿದರು. ಇದೇ ಸಂದರ್ಭದಲ್ಲಿ ಮಾನ್ಯ ನಿರ್ದೇಶಕರಾದ ಶ್ರೀ ಎ.ಆರ್. ಪ್ರಸನ್ನ ಕುಮಾರ್ ರವರು ಉಪಸ್ಥಿತರಿದ್ದರು. ಜಿಲ್ಲಾ ಸಂಯೋಜಕರಾದ ಶ್ರೀ ಶಶಿಕುಮಾರ್ ಎಸ್. ಇವರು ಭಾಗವಹಿಸಿದ್ದರು.

---

**ಶಿವಮೊಗ್ಗ :** ದಿನಾಂಕ 23.05.2022 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ ರವರು ಶಿವಮೊಗ್ಗ ಜಿಲ್ಲೆಯ ಸಮ್ಮಿಲನ ಕೃಷಿ ಸಂಸ್ಕರಣಾ ಸೌಹಾರ್ದ ಸಹಕಾರಿ ನಿ,. ಕೋಟಿಗದ್ದೆ, ಸದರಿ ಸಹಕಾರಿಯವರು ನಿರ್ಮಿಸಿರುವ ಅಡಿಕೆ ಸಂಸ್ಕರಣಾ ಘಟಕ, ಹರಿಶಿಣ, ಕುಂಕುಮ ತಯಾರಿಸುವ ಘಟಕ ಹಾಗೂ ಹಲಸಿ ಹಪ್ಪಳ ತಯಾರಿಸುವ ಘಟಕಗಳಿಗೆ ಭೇಟಿ ನೀಡಿ ವೀಕ್ಷಣೆ ನಡೆಸಿದರು. ಸಹಕಾರಿಯ ಅಧ್ಯಕ್ಷರು/ನಿದೇಶಕರು ಹಾಗೂ ಸಿಬ್ಬಂದಿಗಳೊಂದಿಗೆ ಸಮಾಲೋಚನೆ ನಡೆಸಿದರು. ಇದೇ ಸಂದರ್ಭದಲ್ಲಿ ಮಾನ್ಯ ನಿರ್ದೇಶಕರಾದ ಶ್ರೀ ಎ. ಆರ್. ಪ್ರಸನ್ನ ಕುಮಾರ್ ರವರು ಉಪಸ್ಥಿತರಿದ್ದರು.

---

**ಶಿವಮೊಗ್ಗ :** ದಿನಾಂಕ 23.05.2022 ರಂದು ಶಾರದಾ ವಿವಿದೋದ್ಧೇಶ ಸೌಹಾರ್ದ ಸಹಕಾರಿ ನಿ,. ಶಿವಮೊಗ್ಗ ಸಹಕಾರಿಯವರು ನಿರ್ಮಿಸಿರುವ ರಿಪ್ಪನ್‌ಪೇಟೆಯಲ್ಲಿರುವ ಕೋಲ್ಡ್ ಸ್ಟೋರೇಜ್ ಸ್ಥಳಕ್ಕೆ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ ರವರು ಭೇಟಿ ನೀಡಿದರು. ಇದೇ ಸಂದರ್ಭದಲ್ಲಿ ಸದರಿ ಸಹಕಾರಿಯ ಆಡಳಿತ ಮಂಡಳಿಯವರಿಂದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರನ್ನು ಸನ್ಮಾನಿಸಲಾಯಿತು.

---

## ಶ್ರೀ ನಗರೇಶ್ವರ ಸೌಹಾರ್ದ ಸಹಕಾರಿಯ ದಶಮಾನೋತ್ಸವ ಕಾರ್ಯಕ್ರಮ



ದಿನಾಂಕ 01.05.2022 ರಂದು ಶ್ರೀ ನಗರೇಶ್ವರ ಸೌಹಾರ್ದ ಸಹಕಾರಿಯ ದಶಮಾನೋತ್ಸವ ಸಮಾರಂಭವು ಗಾಂದಿಬಜಾರ್‌ನ ಶ್ರೀ ನಗರೇಶ್ವರ ಸ್ವಾಮಿ ಕಲ್ಯಾಣ ಮಂಟಪದಲ್ಲಿ ನೆರವೇರಿತು. ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ರವರು ಮುಖ್ಯಅತಿಥಿಗಳಾಗಿ ಭಾಗವಹಿಸಿ ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡಿದರು. ಈ ಕಾರ್ಯಕ್ರಮದಲ್ಲಿ ವಿಶ್ರಾಂತ ಐ.ಎ.ಎಸ್. ಅಧಿಕಾರಿ ಹಾಗೂ ಕರ್ನಾಟಕ ಗಡಿ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ ಡಾ. ಸಿ. ಸೋಮಶೇಖರ್, ಸಹಕಾರ ಇಲಾಖೆಯ ಅಪರ ನಿಬಂಧಕರಾದ ಶ್ರೀ ಹೆಚ್. ಬಾಲಶೇಖರ್, ಸಹಕಾರಿಯ ಅಧ್ಯಕ್ಷರಾದ ಶ್ರೀ ಬಸವರಾಜ್, ಉಪಾಧ್ಯಕ್ಷರಾದ ಶ್ರೀ ಎಮ್. ಬಸಪ್ಪ ಹಾಗೂ ಆಡಳಿತ ಮಂಡಳಿ ಎಲ್ಲಾ ನಿರ್ದೇಶಕರು ಉಪಸ್ಥಿತರಿದ್ದರು.

# ಸಂಯುಕ್ತ ಸಹಕಾರಿಯ ಪ್ರಕಟಣೆ ಪುಸ್ತಕಗಳ ವಿವರ

| ಕ್ರ..ಸಂ. | ಪುಸ್ತಕದ ಹೆಸರು | ಬೆಲೆ |
|---|---|---|
| 1 | ಸೌಹಾರ್ದ ಸಹಕಾರಿ ಮಾರ್ಗದರ್ಶಿ | 15/– |
| 2 | ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಉಪವಿಧಿ | 30/– |
| 3 | ಸೌಹಾರ್ದ ಸಹಕಾರಿಗಳ ಮಾದರಿ ಸಾಲ ಮತ್ತು ಠೇವಣಾತಿ ನಿಯಮಗಳು | 20/– |
| 4 | ಸೌಹಾರ್ದ ಸಹಕಾರಿಗಳಿಗಾಗಿ ನೌಕರರ ಮಾದರಿ ಸೇವಾ ನಿಯಮಗಳು | 15/– |
| 5 | ಸೌಹಾರ್ದ ಸಹಕಾರಿಗಳಿಗಾಗಿ ಮಾಹಿತಿ ಕೈಪಿಡಿ | 15/– |
| 6 | ಸಂಯುಕ್ತ ಸಹಕಾರಿ ಸಿಬ್ಬಂದಿ ಸೇವಾ ನಿಯಮಗಳು | 25/– |
| 7 | ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರ ಕೈಪಿಡಿ | 15/– |
| 8 | ಕರ್ನಾಟಕ ರಾಜ್ಯದ ವಿಶಿಷ್ಠ ಸಹಕಾರ ಸಂಸ್ಥೆಗಳು | 40/– |
| 9 | Special Co-opearative Societies of Karnataka | 25/– |
| 10 | ಇ–ಸ್ಟಾಂಪಿಂಗ್ ಮಾಹಿತಿ ಕೈಪಿಡಿ | 50/– |
| 11 | ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದ ನ್ಯಾಯಾಲಯದ ತೀರ್ಪುಗಳು ಸಾರಾಂಶ | 100/– |
| 12 | ಸಹಕಾರ ಸಂಸ್ಥೆಗಳಿಗೆ ಅನ್ವಯಿಸುವ ತೆರಿಗೆ ಕಾಯ್ದೆಗಳು | 50/– |
| 13 | Karnataka High Court Judgements Related to Co-operative Sector | 200/– |
| 14 | ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದ ಮಾಹಿತಿ ಹಕ್ಕು ಕಾಯ್ದೆಯನ್ವಯ ನೀಡಲಾದ ನ್ಯಾಯಾಲಯಗಳ ತೀರ್ಪುಗಳ ಸಾರಂಶ | 100/– |
| 15 | ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದ ನ್ಯಾಯಾಲಯಗಳ ತೀರ್ಪುಗಳ ಸಾರಂಶ ಭಾಗ – 2 | 100/– |
| 16 | ಸಹಕಾರಿಗಳಿಗೆ ಉಪಯುಕ್ತವಾದ ಮಾದರಿಗಳ ಕೈಪಿಡಿ | 50/– |
| 17 | ಸಹಕಾರಿಗಳಿಗೆ ಅನ್ವಯಿಸುವ ತೆರಿಗೆ ಸಂಬಂಧಿತ ತೀರ್ಪುಗಳು | 120/– |
| 18 | Karnataka High Court Judgements Related to Co-operative Sector Vol -2 | 400/– |
| 19 | Supreme Court Judgement Related to Co-operative Sector Volume - 1 | 150/– |
| 20 | Supreme Court Judgement Related to Co-operative Sector Volume - 2 | 500/– |
| 21 | ಸ್ವಾಭಿಮಾನಿ ಸಹಕಾರಿ ವಾರ್ಷಿಕ ಚಂದಾ 1 ವರ್ಷಕ್ಕೆ | 100/– |
| 22 | ಸಹಕಾರ ಮತ್ತು ಬ್ಯಾಂಕಿಂಗ್ ಮೆನೆಜಮೆಂಟ್ ಡಿಪ್ಲೋಮಾ ಬಹು ಆಯ್ಕೆಯ ಪ್ರಶ್ನೆಗಳು ಹಾಗೂ ಉತ್ತರಗಳು | 300/– |
| 23 | ವಿಷಯ–01 – ಸಹಕಾರ ಪರಿಸರ ಹಾಗೂ ಆಡಳಿತ ನಿರ್ವಹಣೆ | 250/– |
| 24 | ವಿಷಯ–02 – ಸಹಕಾರಿ ಪತ್ತು ನಿರ್ವಹಣೆ | 250/– |
| 25 | ವಿಷಯ–03 – ಬ್ಯಾಂಕಿಂಗ್ ಮೂಲ ಮಾಹಿತಿ | 250/– |
| 26 | ವಿಷಯ–04 – ಸಹಕಾರ ಕಾಯ್ದೆಗಳು, ಬ್ಯಾಂಕಿಂಗ್ ಕಾಯ್ದೆಗಳು ಇತರೆ ಅನ್ವಯಿಸುವ ಕಾಯ್ದೆಗಳು | 250/– |
| 27 | ವಿಷಯ–05 – ಲೆಕ್ಕ ಪತ್ರಗಳು ಹಾಗೂ ಲೆಕ್ಕ ಪರಿಶೋಧನೆ | 250/– |
| 28 | ವಿಷಯ–06 – ಮಾಹಿತಿ ತಂತ್ರಜ್ಞಾನ | 250/– |
| 29 | ಸಾಲ ವಸೂಲಾತಿ ಹಾಗೂ ದಾಖಲಾತಿಗಳ ನಿರ್ವಹಣೆ ಮತ್ತು ಭಾರತದ ಸಂವಿಧಾನ, ಅರ್ಥ, ಆಶಯ ಹಾಗೂ ಪ್ರಮುಖ ಅಂಶಗಳು | 150/– |

# ಸಹಕಾರ ಸಂಘ ಸಂಸ್ಥೆಗಳು ಹಾಗೂ ಸೌಹಾರ್ದ ಸಹಕಾರಿಗಳು ಬ್ಯಾಂಕ್/ ಬ್ಯಾಂಕರ್/ ಬ್ಯಾಂಕಿಂಗ್ ಪದಗಳನ್ನು ಬಳಕೆ ಮಾಡದಿರುವ ಕುರಿತು. ಸರ್ಕಾರದ ಸುತ್ತೋಲೆ

ಕರ್ನಾಟಕ ಸರ್ಕಾರ
(ಸಹಕಾರ ಇಲಾಖೆ)
ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು-52

ಸಂಖ್ಯೆ: ಯುಬಿಸಿ-7/ಯುಎಂಸಿ/188 /2021-22

ದಿನಾಂಕ: 30-03-2022

**ಸುತ್ತೋಲೆ**

ವಿಷಯ: ಸಹಕಾರ ಸಂಘ ಸಂಸ್ಥೆಗಳು ಹಾಗೂ ಸೌಹಾರ್ದ ಸಹಕಾರಿಗಳು ಬ್ಯಾಂಕ್ ಎಂಬ ಪದ ಬಳಸುತ್ತಿರುವ ಬಗ್ಗೆ.

ಉಲ್ಲೇಖ:
1. ಈ ಕಛೇರಿಯ ಸುತ್ತೋಲೆ ಸಂಖ್ಯೆ: ಯುಬಿಸಿ-1/231/ಯುಎಂಸಿ/2017-18 ದಿನಾಂಕ 23-09-2017
2. ಭಾರತೀಯ ರಿಸರ್ವ್ ಬ್ಯಾಂಕ್‌ನಲ್ಲಿ ನಡೆದ ಟ್ಯಾಫ್‌ಕಬ್ ಸಭಾ ನಡವಳಿಗಳು ದಿನಾಂಕ 23-12-2020, 08-07-2021, 28-12-2021

******

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ರಡಿ ನೋಂದಣಿಗೊಂಡ ಸಹಕಾರ ಸಂಘಗಳು / ಸಹಕಾರಿಗಳು ಆಯಾ ಅಧಿನಿಯಮದ ಚೌಕಟ್ಟಿನಲ್ಲಿ ಕಾರ್ಯನಿರ್ವಹಿಸಬೇಕಾಗಿದೆ.

ಯಾವುದೇ ಸಹಕಾರ ಸಂಘವು "ಬ್ಯಾಂಕ್" ಎಂಬ ಪದ ಬಳಸಬೇಕಾದಲ್ಲಿ ಬ್ಯಾಂಕಿಂಗ್ ರೆಗ್ಯುಲೇಷನ್ ಅಧಿನಿಯಮ 1949 ರ ಪ್ರಕರಣ 22 ರಡಿಯಲ್ಲಿ ಭಾರತೀಯ ರಿಸರ್ವ್ ಬ್ಯಾಂಕಿನಿಂದ ಪರವಾನಗಿ (license) ಪಡೆಯಬೇಕಾಗಿರುತ್ತದೆ. ಈ ರೀತಿ ಪರವಾನಿಗೆ ಪಡೆದ ಸಹಕಾರ ಸಂಘ ಸಂಸ್ಥೆಗಳು ಸದಸ್ಯೇತರರು ಖಾತೆ ಹೊಂದಲು ಅವಕಾಶವಿರುತ್ತದೆ.

ಆದರೆ ರಾಜ್ಯದ ಕೆಲವು ಸಹಕಾರ ಸಂಘಗಳು/ ಸಹಕಾರಿಗಳು ಬ್ಯಾಂಕಿಂಗ್ ಲೈಸೆನ್ಸ್ ಹೊಂದದಿದ್ದರೂ "ಸಹಕಾರ ಬ್ಯಾಂಕ್" ಎಂಬ ಪದ ಬಳಸಿ ವ್ಯವಹರಿಸುತ್ತಿರುವುದು ಭಾರತೀಯ ರಿಸರ್ವ್ ಬ್ಯಾಂಕ್ ಮತ್ತು ಸರ್ಕಾರದ ಉನ್ನತ ಮಟ್ಟದ ಸಭೆಯಲ್ಲಿ ಆಗಾಗ್ಗೆ ಚರ್ಚೆಯಾಗುತ್ತಿದೆ. ಸಹಕಾರ ಸಂಘಗಳು / ಸಹಕಾರಿಗಳು ಭಾರತೀಯ ರಿಸರ್ವ್ ಬ್ಯಾಂಕಿನಿಂದ ಲೈಸೆನ್ಸ್ ಪಡೆಯದೇ ಬ್ಯಾಂಕ್ ಎಂಬ ಪದ ಬಳಸುತ್ತಿರುವುದರಿಂದ ಸಾರ್ವಜನಿಕರು ಬ್ಯಾಂಕೆಂದು ಪರಿಭಾವಿಸಿ ವಂಚನೆಗೊಳಗಾಗುತ್ತಿರುವುದು ಭಾರತೀಯ ರಿಸರ್ವ್ ಬ್ಯಾಂಕ್ ಮತ್ತು ಈ ಕಛೇರಿಯ ಗಮನಕ್ಕೆ ಬಂದಿರುತ್ತದೆ.

ಯಾವುದೇ ಸಹಕಾರ ಸಂಘ / ಸಹಕಾರಿಗಳು ಬ್ಯಾಂಕಿಂಗ್ ಲೈಸೆನ್ಸ್ ಪಡೆಯದೇ ಬ್ಯಾಂಕ್ ಪದ ಬಳಸುವುದು ಆಕ್ಷೇಪಾರ್ಹ ಹಾಗೂ ಶಿಕ್ಷಾರ್ಹ.

ಸಹಕಾರ ಸಂಘ / ಸಹಕಾರಿಗಳು ಬ್ಯಾಂಕ್ ಪದ ಬಳಸುವುದನ್ನು ನಿಷೇಧಿಸಿ ಈಗಾಗಲೇ ಉಲ್ಲೇಖ (1) ರ ಸುತ್ತೋಲೆಯನ್ನು ಹೊರಡಿಸಲಾಗಿದೆ. ಆದಾಗ್ಯೂ ಪುನಃ ಬ್ಯಾಂಕ್ ಪದ ಬಳಸುತ್ತಿರುವುದನ್ನು ತೀವ್ರವಾಗಿ ಪರಿಗಣಿಸಲಾಗಿದೆ.

ಇನ್ನು ಮುಂದೆ ಯಾವುದೇ ಸಹಕಾರ ಸಂಘ / ಸಹಕಾರಿಗಳು ತಮ್ಮ ನೋಂದಾಯಿತ ನಾಮಾಂಕಿತವನ್ನು ಹೊರತುಪಡಿಸಿ ಕಾನೂನು ಉಲ್ಲಂಘನೆ ಮಾಡಿ ಬ್ಯಾಂಕ್ ಎಂಬ ಪದ ಬಳಸಿದಲ್ಲಿ ಅಂತಹ ಸಹಕಾರ ಸಂಘದ ಆಡಳಿತ ಮಂಡಳಿ ಸದಸ್ಯರು, ಪದಾಧಿಕಾರಿ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ವಿರುದ್ಧ ಕಟ್ಟುನಿಟ್ಟಿನ ಕಾನೂನು ಕ್ರಮ ಜರುಗಿಸಲಾಗುವುದು.

ಈ ಸುತ್ತೋಲೆಯ ನಿರ್ದೇಶನವನ್ನು ಇಲಾಖೆಯ ತಾಲ್ಲೂಕು ಸಹಕಾರ ಅಭಿವೃದ್ಧಿ ಅಧಿಕಾರಿ ಮೊದಲ್ಗೊಂಡು ಎಲ್ಲಾ ಕ್ಷೇತ್ರೀಯ ಅಧಿಕಾರಿಗಳು ತಮ್ಮ ಕಾರ್ಯವ್ಯಾಪ್ತಿಯ ಸಹಕಾರ ಸಂಘಗಳು ಬ್ಯಾಂಕ್ ಎಂಬ ಪದ ಬಳಸುತ್ತಿದ್ದಲ್ಲಿ ಅಂತಹ ಸಂಘದ ವಿರುದ್ಧ ಕ್ರಮ ಜರುಗಿಸಲು ಸೂಚಿಸಿದೆ. ಒಂದು ವೇಳೆ ಕ್ರಮ ಜರುಗಿಸದಿದ್ದಲ್ಲಿ ಸಂಬಂಧಪಟ್ಟವರನ್ನು ಹೊಣೆಗಾರರನ್ನಾಗಿ ಮಾಡಲಾಗುವುದು.

(ಎಸ್.ಜಿಯಾಉಲ್ಲಾ, ಭಾಆಸೇ)
ಸಹಕಾರ ಸಂಘಗಳ ನಿಬಂಧಕರು
ಕರ್ನಾಟಕ ರಾಜ್ಯ, ಬೆಂಗಳೂರು

# ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಮತ್ತು ಪದಾಧಿಕಾರಿಗಳ ಚುನಾವಣೆ ನಡೆಸುವ ಸಂಬಂಧ ಕರಡು ಮತದಾರರ ಪಟ್ಟಿ ಪ್ರಕಟಿಸುವ ಕುರಿತು ಹಾಗೂ ರಿಟರ್ನಿಂಗ್ ಅಧಿಕಾರಿ ನೇಮಕ ಮಾಡುವ ಕುರಿತು.

**ಕರ್ನಾಟಕ ಸರ್ಕಾರ**
(ಕಂದಾಯ ಇಲಾಖೆ)

ಸಂಖ್ಯೆ: ಚುನಾವಣೆ/ವಿವ/16/2021-22

ಪ್ರಾದೇಶಿಕ ಆಯುಕ್ತರ ಕಛೇರಿ,
2ನೇ ಮಹಡಿ, ಬಿ.ಎಂ.ಟಿ.ಸಿ ಕಟ್ಟಡ,
ಕೆ.ಹೆಚ್.ರಸ್ತೆ, ಶಾಂತಿನಗರ,
ಬೆಂಗಳೂರು, ದಿನಾಂಕ:04-06-2022.

ರವರಿಗೆ,
ಆಯುಕ್ತರು,
ಸಹಕಾರ ಚುನಾವಣಾ ಪ್ರಾಧಿಕಾರ,
ಬೆಂಗಳೂರು.

ಮಾನ್ಯರೆ,

ವಿಷಯ: 2022ನೇ ಸಾಲಿನಲ್ಲಿ ಪದಾವಧಿ ಮುಗಿಯಲಿರುವ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಆಡಳಿತ ಮಂಡಳಿ ಮತ್ತು ಪದಾಧಿಕಾರಿಗಳ ಚುನಾವಣೆ ನಡೆಸುವ ಸಂಬಂಧ ಕರಡು ಮತದಾರರ ಪಟ್ಟಿ ಪ್ರಕಟಿಸುವ ಕುರಿತು ಹಾಗೂ ರಿಟರ್ನಿಂಗ್ ಅಧಿಕಾರಿಯನ್ನು ನೇಮಕ ಮಾಡುವ ಬಗ್ಗೆ.

ಉಲ್ಲೇಖ:1. ಆಯುಕ್ತರು, ಸಹಕಾರ ಚುನಾವಣಾ ಪ್ರಾಧಿಕಾರ, ಬೆಂಗಳೂರು ರವರ ಆದೇಶದ ಸಂಖ್ಯೆ:ಸಚುಪ್ರಾ/ಆಡಳಿತ/ಸೌ.ಸ.ಚು.ನೇಮಕಾತಿ /23(1)/2021-22ದಿನಾಂಕ:04-03-2022.

2. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರುರವರ ಪತ್ರ ಸಂಖ್ಯೆ: ಸಂಸ/ ಆವಿ/ಚು-07/2021-22/226 ದಿನಾಂಕ: 13-05-2022.
3. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರುರವರ ಪತ್ರ ಸಂಖ್ಯೆ: ಸಂಸ/ ಆವಿ/ಚು-09/2021-22/300 ದಿನಾಂಕ: 25-05-2022.
4. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರುರವರ ಪತ್ರ ಸಂಖ್ಯೆ: ಸಂಸ/ ಆವಿ/ಚು-10/2022-23/335 ದಿನಾಂಕ: 01-06-2022.
5. ಈ ಕಛೇರಿಯ ಸಮಸಂಖ್ಯೆ ಅಧಿಕೃತ ಜ್ಞಾಪನ ದಿ:04-06-2022.

********

ಆಯುಕ್ತರು, ಸಹಕಾರ ಚುನಾವಣಾ ಪ್ರಾಧಿಕಾರರವರ ಉಲ್ಲೇಖ(1)ರ ಆದೇಶದಂತೆ 2022ನೇ ಸಾಲಿನಲ್ಲಿ ಪದಾವಧಿ ಮುಗಿಯಲಿರುವ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ. ಬೆಂಗಳೂರು ಇದರ ಆಡಳಿತ ಮಂಡಳಿ ಮತ್ತು ಪದಾಧಿಕಾರಿಗಳ ಚುನಾವಣೆ ನಡೆಸುವ ಸಂಬಂಧ ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರುರವರನ್ನು ಚುನಾವಣಾಧಿಕಾರಿಗಳನ್ನಾಗಿ ನೇಮಕ ಮಾಡಿ ಆದೇಶಿಸಲಾಗಿರುತ್ತದೆ. ಅದರಂತೆ ಚುನಾವಣಾಧಿಕಾರಿಗಳು ಮತದಾರರ ಪಟ್ಟಿಗಳನ್ನು ಸಂಬಂಧಿಸಿದ ದಾಖಲೆಗಳೊಂದಿಗೆ ಪರಿಶೀಲಿಸಿ, ಚುನಾವಣಾ ದಿನಾಂಕದ 45 ದಿನಗಳ ಪೂರ್ವದಲ್ಲಿ ಕರಡು ಮತದಾರರ ಪಟ್ಟಿಯನ್ನು ಪ್ರಕಟಿಸಲು ಹಾಗೂ ಆಡಳಿತ ಮಂಡಳಿ ಹಾಗೂ ಪದಾಧಿಕಾರಿಗಳ ಚುನಾವಣೆ ನಡೆಸುವ ಸಂಬಂಧ ಮುಂದಿನ ಅಗತ್ಯ ಕ್ರಮ ವಹಿಸಬೇಕಾಗಿರುತ್ತದೆ.

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರು ಉಲ್ಲೇಖ(1)ರಿಂದ ಉಲ್ಲೇಖ(4)ರವರೆಗಿನ ಪತ್ರಗಳನ್ವಯ ಮತ ನೀಡುವ ಹಕ್ಕುಳ್ಳ

ಸದಸ್ಯರ ಕರಡು ಪಟ್ಟಿ, ಸುಸ್ತಿದಾರ ಸದಸ್ಯರ ಕರಡು ಪಟ್ಟಿ ಮತ್ತು ಮತದಾನದ ಹಕ್ಕನ್ನು ಹೊಂದಿರದ ಅನರ್ಹ ಸದಸ್ಯರ ಕರಡು ಪಟ್ಟಿ ಮತ್ತು ಅಂತಿಮ ಮತದಾರರ ಪಟ್ಟಿಯನ್ನು ಪ್ರಕಟಿಸುವ ದಿನಾಂಕಕ್ಕೆ ಸುಸ್ತಿಯಾಗುವಂತಹ ಮತದಾರರ ಕರಡು ಪಟ್ಟಿಗಳನ್ನು ಮತ್ತು ಡೆಲಿಗೇಟ್ ನಮೂನೆಗಳೊಂದಿಗೆ ದಾಖಲೆಗಳನ್ನು ಪರಿಶೀಲನೆಗೆ ಸಲ್ಲಿಸಿರುತ್ತಾರೆ.

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರು ಸಲ್ಲಿಸಿರುವ ಕರಡು ಮತದಾರರ ಪಟ್ಟಿಗಳನ್ನು ಮತ್ತು ಸಂಬಂಧಪಟ್ಟ ದಾಖಲೆಗಳನ್ನು ಪರಿಶೀಲಿಸಿ, ಚುನಾವಣೆ ನಡೆಸಲು ನಿಯಮಾನುಸಾರ ಅಗತ್ಯವಿರುವ ಕಾಲಾವಕಾಶವನ್ನು ಗಮನದಲ್ಲಿಟ್ಟುಕೊಂಡು ದಿನಾಂಕ:24-07-2022ರಂದು ಚುನಾವಣಾ ದಿನಾಂಕವನ್ನು ನಿಗದಿಪಡಿಸಿ, ಉಲ್ಲೇಖ(5)ರನ್ವಯ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಚುನಾವಣೆ ನಡೆಸುವ ಬಗ್ಗೆ ಮತ ನೀಡುವ ಹಕ್ಕುಳ್ಳ ಸದಸ್ಯರ ಕರಡು ಪಟ್ಟಿ, ಸುಸ್ತಿದಾರ ಸದಸ್ಯರ ಕರಡು ಪಟ್ಟಿ ಮತ್ತು ಮತದಾನದ ಹಕ್ಕನ್ನು ಹೊಂದಿರದ ಅನರ್ಹ ಸದಸ್ಯರ ಕರಡು ಪಟ್ಟಿ ಮತ್ತು ಅಂತಿಮ ಮತದಾರರ ಪಟ್ಟಿಯನ್ನು ಪ್ರಕಟಿಸುವ ದಿನಾಂಕಕ್ಕೆ ಸುಸ್ತಿಯಾಗುವಂತಹ ಮತದಾರರ ಕರಡು ಪಟ್ಟಿಗಳನ್ನು ಪ್ರಕಟಿಸಲಾಗಿದೆ.

ಆದ್ದರಿಂದ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ **ಚುನಾವಣೆಯನ್ನು, ದಿನಾಂಕ:24-07-2022ರಂದು ನಡೆಸುವ ಬಗ್ಗೆ ಅನುಮೋದನೆ ನೀಡಲು** ಕೋರಿದೆ.

ಮುಂದುವರೆದು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಈ ಸಹಕಾರಿಯ ಆಡಳಿತ ಮಂಡಳಿ ಮತ್ತು ಪದಾಧಿಕಾರಿಗಳ ಚುನಾವಣೆಯನ್ನು ನಡೆಸಲು **ಶ್ರೀ ಬಿ.ವೆಂಕಟೇಶ್, ಕ.ಆ.ಸೇ., ಆಯುಕ್ತರು, ಕರ್ನಾಟಕ ಕೊಳಚೆ ಅಭಿವೃದ್ಧಿ ಮಂಡಳಿ, ಬೆಂಗಳೂರು (ಮೊಬೈಲ್ ಸಂಖ್ಯೆ:9483502638 ಕಛೇರಿ ದೂರವಾಣಿ ಸಂಖ್ಯೆ:080-23460085)** ಇವರನ್ನು ರಿಟರ್ನಿಂಗ್ ಅಧಿಕಾರಿಯನ್ನಾಗಿ ನೇಮಕ ಮಾಡಲು ಕೋರಿದೆ.

ತಮ್ಮ ವಿಶ್ವಾಸಿ

**(ನವೀನ್ ರಾಜ್ ಸಿಂಗ್, ಭಾಆಸೇ.,)**
**ಪ್ರಾದೇಶಿಕ ಆಯುಕ್ತರು,**
**ಬೆಂಗಳೂರು ವಿಭಾಗ, ಬೆಂಗಳೂರು**
**ಹಾಗೂ ಚುನಾವಣಾಧಿಕಾರಿ.**

**ಪ್ರತಿಯನ್ನು:** ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಸೌಹಾರ್ದ ಸಹಕಾರಿ ಸೌಧ" ನಂ. 68, 1ನೇ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560055 ರವರಿಗೆ ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.

# ಸಂಯುಕ್ತ ಸಹಕಾರಿಯ ಇದರ ಆಡಳಿತ ಮಂಡಳಿ ಮತ್ತು ಪದಾಧಿಕಾರಿಗಳ ಚುನಾವಣೆ ನಡೆಸುವ ಸಂಬಂಧ ಕರಡು ಮತದಾರರ ಪಟ್ಟಿ ಪ್ರಕಟಿಸುವ ಕುರಿತು.

**ಕರ್ನಾಟಕ ಸರ್ಕಾರ**
(ಕಂದಾಯ ಇಲಾಖೆ)

ಸಂಖ್ಯೆ: ಚುನಾವಣೆ/ವಿವ/42/2015–16

ಪ್ರಾದೇಶಿಕ ಆಯುಕ್ತರ ಕಛೇರಿ,
2ನೇ ಮಹಡಿ, ಬಿ.ಎಂ.ಟಿ.ಸಿ ಕಟ್ಟಡ,
ಕೆ.ಹೆಚ್.ರಸ್ತೆ, ಶಾಂತಿನಗರ,
ಬೆಂಗಳೂರು, ದಿನಾಂಕ:04–06–2022.

**ಅಧಿಕೃತ ಜ್ಞಾಪನ**

ವಿಷಯ: 2022ನೇ ಸಾಲಿನಲ್ಲಿ ಪದಾವಧಿ ಮುಗಿಯಲಿರುವ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಆಡಳಿತ ಮಂಡಳಿ ಮತ್ತು ಪದಾಧಿಕಾರಿಗಳ ಚುನಾವಣೆ ನಡೆಸುವ ಸಂಬಂಧ ಕರಡು ಮತದಾರರ ಪಟ್ಟಿ ಪ್ರಕಟಿಸುವ ಕುರಿತು.

ಉಲ್ಲೇಖ:1. ಆಯುಕ್ತರು, ಸಹಕಾರ ಚುನಾವಣಾ ಪ್ರಾಧಿಕಾರ, ಬೆಂಗಳೂರು ರವರ ಆದೇಶದ ಸಂಖ್ಯೆ:ಸಚುಪ್ರಾ/ಆಡಳಿತ/ಸೌ.ಸ.ಚು.ನೇಮಕಾತಿ /23(1)/2021–22ದಿನಾಂಕ:04–03–2022.

2. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರುರವರ ಪತ್ರ ಸಂಖ್ಯೆ: ಸಂಸ/ ಆವಿ/ಚು–07/2021–22/226 ದಿನಾಂಕ: 13–05–2022.

3. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರುರವರ ಪತ್ರ ಸಂಖ್ಯೆ: ಸಂಸ/ ಆವಿ/ಚು–09/2021–22/300 ದಿನಾಂಕ: 25–05–2022.

4. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರುರವರ ಪತ್ರ ಸಂಖ್ಯೆ: ಸಂಸ/ ಆವಿ/ಚು–10/2022–23/335 ದಿನಾಂಕ: 01–06–2022.

*********

ಆಯುಕ್ತರು, ಸಹಕಾರ ಚುನಾವಣಾ ಪ್ರಾಧಿಕಾರರವರ ಉಲ್ಲೇಖ(1)ರ ಆದೇಶದಂತೆ 2022ನೇ ಸಾಲಿನಲ್ಲಿ ಪದಾವಧಿ ಮುಗಿಯಲಿರುವ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ. ಬೆಂಗಳೂರು ಇದರ ಆಡಳಿತ ಮಂಡಳಿ ಮತ್ತು ಪದಾಧಿಕಾರಿಗಳ ಚುನಾವಣೆ ನಡೆಸುವ ಸಂಬಂಧ ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರುರವರನ್ನು ಚುನಾವಣಾಧಿಕಾರಿಗಳನ್ನಾಗಿ ನೇಮಕ ಮಾಡಿ ಆದೇಶಿಸಲಾಗಿರುತ್ತದೆ. ಅದರಂತೆ ಚುನಾವಣಾಧಿಕಾರಿಗಳು ಮತದಾರರ ಪಟ್ಟಿಗಳನ್ನು ಸಂಬಂಧಿಸಿದ ದಾಖಲೆಗಳೊಂದಿಗೆ ಪರಿಶೀಲಿಸಿ, ಚುನಾವಣಾ ದಿನಾಂಕದ 45 ದಿನಗಳ ಪೂರ್ವದಲ್ಲಿ ಕರಡು ಮತದಾರರ ಪಟ್ಟಿಯನ್ನು ಪ್ರಕಟಿಸಲು ಹಾಗೂ ಆಡಳಿತ ಮಂಡಳಿ ಹಾಗೂ ಪದಾಧಿಕಾರಿಗಳ ಚುನಾವಣೆ ನಡೆಸುವ ಸಂಬಂಧ ಮುಂದಿನ ಅಗತ್ಯ ಕ್ರಮ ವಹಿಸಬೇಕಾಗಿರುತ್ತದೆ.

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರು ಉಲ್ಲೇಖ(1)ರಿಂದ ಉಲ್ಲೇಖ(4)ರವರೆಗಿನ ಪತ್ರಗಳನ್ವಯ ಮತ ನೀಡುವ ಹಕ್ಕುಳ್ಳ ಸದಸ್ಯರ ಕರಡು ಪಟ್ಟಿ, ಸುಸ್ತಿದಾರ ಸದಸ್ಯರ ಕರಡು ಪಟ್ಟಿ ಮತ್ತು ಮತದಾನದ ಹಕ್ಕನ್ನು ಹೊಂದಿರದ ಅನರ್ಹ ಸದಸ್ಯರ ಕರಡು ಪಟ್ಟಿ ಮತ್ತು ಅಂತಿಮ ಮತದಾರರ ಪಟ್ಟಿಯನ್ನು ಪ್ರಕಟಿಸುವ ದಿನಾಂಕಕ್ಕೆ ಸುಸ್ತಿಯಾಗುವಂತಹ ಮತದಾರರ ಕರಡು ಪಟ್ಟಿಗಳನ್ನು ಮತ್ತು ಡೆಲಿಗೇಟ್ ನಮೂನೆಗಳೊಂದಿಗೆ ದಾಖಲೆಗಳನ್ನು ಪರಿಶೀಲನೆಗೆ ಸಲ್ಲಿಸಿರುತ್ತಾರೆ.

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರು ಸಲ್ಲಿಸಿರುವ ಕರಡು ಮತದಾರರ ಪಟ್ಟಿಗಳನ್ನು ಮತ್ತು ಸಂಬಂಧಪಟ್ಟ ದಾಖಲೆಗಳನ್ನು ಪರಿಶೀಲಿಸಿ, **ಚುನಾವಣೆ ನಡೆಸಲು ನಿಯಮಾನುಸಾರ ಅಗತ್ಯವಿರುವ ಕಾಲಾವಕಾಶವನ್ನು ಗಮನದಲ್ಲಿಟ್ಟುಕೊಂಡು ದಿನಾಂಕ:24-07-2022ರಂದು ಚುನಾವಣಾ ದಿನಾಂಕವನ್ನು ನಿಗದಿಪಡಿಸಿ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಚುನಾವಣೆ ನಡೆಸುವ ಬಗ್ಗೆ ಮತ ನೀಡುವ ಹಕ್ಕುಳ್ಳ ಸದಸ್ಯರ ಕರಡು ಪಟ್ಟಿ, ಸುಸ್ತಿದಾರ ಸದಸ್ಯರ ಕರಡು ಪಟ್ಟಿ ಮತ್ತು ಮತದಾನದ ಹಕ್ಕನ್ನು ಹೊಂದಿರದ ಅನರ್ಹ ಸದಸ್ಯರ ಕರಡು ಪಟ್ಟಿ ಮತ್ತು ಅಂತಿಮ ಮತದಾರರ ಪಟ್ಟಿಯನ್ನು ಪ್ರಕಟಿಸುವ ದಿನಾಂಕಕ್ಕೆ ಸುಸ್ತಿಯಾಗುವಂತಹ ಮತದಾರರ ಕರಡು ಪಟ್ಟಿಗಳನ್ನು ಈ ಮೂಲಕ ಸಂಬಂಧಪಟ್ಟವರ ಗಮನಕ್ಕೆ ಪ್ರಕಟಿಸಲಾಗಿದೆ.**

**ಈ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ದಿನಾಂಕದಿಂದ ಮೂವತ್ತು ದಿನಗಳ ಒಳಗಾಗಿ ಆಕ್ಷೇಪಣೆಗಳನ್ನು ಸಲ್ಲಿಸಲು ಕಾಲಾವಕಾಶ ನೀಡಿದೆ. ಆಕ್ಷೇಪಣೆ ಸಲ್ಲಿಸಬಯಸುವ ಸದಸ್ಯರು/ ಸದಸ್ಯ ಸಹಕಾರಿಗಳು ಜಿಲ್ಲಾ ಚುನಾವಣಾಧಿಕಾರಿಗಳಿಗೆ/ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ವ್ಯವಸ್ಥಾಪಕ ನಿರ್ದೇಶಕರಿಗೆ ನಿಗದಿತ ಕಾಲಾವಧಿಯಲ್ಲಿ ನೇರವಾಗಿ ತಮ್ಮ ನಿರ್ದಿಷ್ಟ ಆಕ್ಷೇಪಣೆಗಳನ್ನು ಅಗತ್ಯ ಮತ್ತು ಪೂರಕ ದಾಖಲೆಗಳೊಂದಿಗೆ ಸಲ್ಲಿಸುವುದು. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರು ಆಕ್ಷೇಪಣೆಗಳ ಬಗ್ಗೆ ನಿಯಮಾನುಸಾರ ಮುಂದಿನ ಅಗತ್ಯ ಕ್ರಮ ವಹಿಸಲು ಸೂಚಿಸಿದೆ.**

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರುರವರು ಇದರೊಂದಿಗೆ ಲಗತ್ತಿಸಲಾಗಿರುವ ಮತ ನೀಡುವ ಹಕ್ಕುಳ್ಳ ಸದಸ್ಯರ ಕರಡು ಪಟ್ಟಿ, ಸುಸ್ತಿದಾರ ಸದಸ್ಯರ ಕರಡು ಪಟ್ಟಿ ಮತ್ತು ಮತದಾನದ ಹಕ್ಕನ್ನು ಹೊಂದಿರದ ಅನರ್ಹ ಸದಸ್ಯರ ಕರಡು ಪಟ್ಟಿ ಮತ್ತು ಅಂತಿಮ ಮತದಾರರ ಪಟ್ಟಿಯನ್ನು ಪ್ರಕಟಿಸುವ ದಿನಾಂಕಕ್ಕೆ ಸುಸ್ತಿಯಾಗುವಂತಹ ಮತದಾರರ ಕರಡು ಪಟ್ಟಿಗಳನ್ನು ಸಂಯುಕ್ತ ಸಹಕಾರಿಯ ಸೂಚನಾ ಫಲಕದಲ್ಲಿ, ಸದಸ್ಯ ಸಹಕಾರಿಗಳ ಕಛೇರಿಗಳಲ್ಲಿ ಹಾಗೂ ನಿಯಮಾನುಸಾರ ಅನ್ವಯಿಸುವ ಇತರೆ ಶಾಖಾ ಕಛೇರಿಗಳಲ್ಲಿ ಪ್ರಕಟಿಸುವ ಬಗ್ಗೆ ಅಗತ್ಯ ಕ್ರಮ ಕೈಗೊಂಡು, ಪ್ರಕಟಿಸಿದ ಬಗ್ಗೆ ತಕ್ಷಣವೇ ಈ ಕಛೇರಿಗೆ ವರದಿ ಸಲ್ಲಿಸಲು ಸೂಚಿಸಿದೆ.

**ಪ್ರಾದೇಶಿಕ ಆಯುಕ್ತರು,**
**ಬೆಂಗಳೂರು ವಿಭಾಗ, ಬೆಂಗಳೂರು**
**ಹಾಗೂ ಚುನಾವಣಾಧಿಕಾರಿಗಳು.**

**ಪ್ರತಿಯನ್ನು:-**

(1) ಆಯುಕ್ತರು, ಸಹಕಾರ ಚುನಾವಣಾ ಪ್ರಾಧಿಕಾರ, ಬೆಂಗಳೂರು ರವರಿಗೆ ಮಾಹಿತಿಗಾಗಿ ಕಳುಹಿಸಿದೆ.
(2) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಸೌಹಾರ್ದ ಸಹಕಾರಿ ಸೌಧ" ನಂ. 68, 1ನೇ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560055 ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
(3) ಕಛೇರಿ ಪ್ರತಿ.

# ಸಂಯುಕ್ತ ಸಹಕಾರಿಯ ಇದರ ಆಡಳಿತ ಮಂಡಳಿ ಮತ್ತು ಪದಾಧಿಕಾರಿಗಳ ಚುನಾವಣೆ ನಡೆಸುವ ಸಂಬಂಧ ಕರಡು ಮತದಾರರ ಪಟ್ಟಿ ಪ್ರಕಟಿಸುವ ಕುರಿತು.

**ಕರ್ನಾಟಕ ಸರ್ಕಾರ**
**(ಕಂದಾಯ ಇಲಾಖೆ)**

**ಸಂಖ್ಯೆ: ಚುನಾವಣೆ/ವಿವ/16/2021-22**

ಪ್ರಾದೇಶಿಕ ಆಯುಕ್ತರ ಕಛೇರಿ,
2ನೇ ಮಹಡಿ, ಬಿ.ಎಂ.ಟಿ.ಸಿ ಕಟ್ಟಡ,
ಕೆ.ಹೆಚ್.ರಸ್ತೆ, ಶಾಂತಿನಗರ,
ಬೆಂಗಳೂರು, ದಿನಾಂಕ:04-06-2022.

**ರವರಿಗೆ,**

ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ಸೌಹಾರ್ದ ಸಹಕಾರಿ ಸೌಧ" ನಂ. 68, 1ನೇ ಮಹಡಿ,
17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ,
ಮಲ್ಲೇಶ್ವರಂ, ಬೆಂಗಳೂರು-560055.

**ಮಾನ್ಯರೆ,**

**ವಿಷಯ:** 2022ನೇ ಸಾಲಿನಲ್ಲಿ ಪದಾವಧಿ ಮುಗಿಯಲಿರುವ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಆಡಳಿತ ಮಂಡಳಿ ಮತ್ತು ಪದಾಧಿಕಾರಿಗಳ ಚುನಾವಣೆ ನಡೆಸುವ ಸಂಬಂಧ ಕರಡು ಮತದಾರರ ಪಟ್ಟಿ ಪ್ರಕಟಿಸುವ ಕುರಿತು.

**ಉಲ್ಲೇಖ:1.** ಆಯುಕ್ತರು, ಸಹಕಾರ ಚುನಾವಣಾ ಪ್ರಾಧಿಕಾರ, ಬೆಂಗಳೂರು ರವರ ಆದೇಶದ ಸಂಖ್ಯೆ:ಸಚುಪ್ರಾ/ಆಡಳಿತ/ಸೌ.ಸ.ಚು.ನೇಮಕಾತಿ /23(1)/2021-22ದಿನಾಂಕ:04-03-2022.

**2.** ನಿಮ್ಮ ಪತ್ರ ಸಂಖ್ಯೆ:ಸಂಸ/ಆವಿ/ಚು-07/2021-22/226 ದಿನಾಂಕ: 13-05-2022.

**3.** ನಿಮ್ಮ ಪತ್ರ ಸಂಖ್ಯೆ:ಸಂಸ/ಆವಿ/ಚು-09/2021-22/300 ದಿನಾಂಕ: 25-05-2022.

**4.** ನಿಮ್ಮ ಪತ್ರ ಸಂಖ್ಯೆ:ಸಂಸ/ಆವಿ/ಚು-10/2022-23/335 ದಿನಾಂಕ: 01-06-2022.

**5.** ಈ ಕಛೇರಿಯ ಸಮಸಂಖ್ಯೆ ಅಧಿಕೃತ ಜ್ಞಾಪನ ದಿ:04-06-2022.

*********

ಆಯುಕ್ತರು, ಸಹಕಾರ ಚುನಾವಣಾ ಪ್ರಾಧಿಕಾರರವರ ಉಲ್ಲೇಖ(1)ರ ಆದೇಶದಂತೆ 2022ನೇ ಸಾಲಿನಲ್ಲಿ ಪದಾವಧಿ ಮುಗಿಯಲಿರುವ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ. ಬೆಂಗಳೂರು ಇದರ ಆಡಳಿತ ಮಂಡಳಿ ಮತ್ತು ಪದಾಧಿಕಾರಿಗಳ ಚುನಾವಣೆ ನಡೆಸುವ ಸಂಬಂಧ ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರುರವರನ್ನು ಚುನಾವಣಾಧಿಕಾರಿಗಳನ್ನಾಗಿ ನೇಮಕ ಮಾಡಿ ಆದೇಶಿಸಲಾಗಿರುತ್ತದೆ.

ಅದರಂತೆ ಉಲ್ಲೇಖ(1)ರಿಂದ ಉಲ್ಲೇಖ(4)ರವರೆಗಿನ ಪತ್ರಗಳನ್ವಯ ನಿಮ್ಮಿಂದ ಸ್ವೀಕೃತವಾದ ಮತ ನೀಡುವ ಹಕ್ಕುಳ್ಳ ಸದಸ್ಯರ ಕರಡು ಪಟ್ಟಿ, ಸುಸ್ತಿದಾರ ಸದಸ್ಯರ ಕರಡು ಪಟ್ಟಿ ಮತ್ತು ಮತದಾನದ ಹಕ್ಕನ್ನು ಹೊಂದಿರದ ಅನರ್ಹ ಸದಸ್ಯರ ಕರಡು ಪಟ್ಟಿ ಮತ್ತು ಅಂತಿಮ ಮತದಾರರ ಪಟ್ಟಿಯನ್ನು ಪ್ರಕಟಿಸುವ ದಿನಾಂಕಕ್ಕೆ ಸುಸ್ತಿಯಾಗುವಂತಹ ಮತದಾರರ ಕರಡು ಪಟ್ಟಿಗಳನ್ನು ಮತ್ತು ಸಂಬಂಧಪಟ್ಟ ದಾಖಲೆಗಳನ್ನು ಪರಿಶೀಲಿಸಿ, ಚುನಾವಣೆ ನಡೆಸಲು ನಿಯಮಾನುಸಾರ ಅಗತ್ಯವಿರುವ ಕಾಲಾವಕಾಶವನ್ನು ಗಮನದಲ್ಲಿಟ್ಟುಕೊಂಡು ದಿನಾಂಕ:24-07-2022ರಂದು ಚುನಾವಣಾ ದಿನಾಂಕವನ್ನು ನಿಗದಿಪಡಿಸಿ, ಉಲ್ಲೇಖ(5)ರನ್ವಯ ಮತ ನೀಡುವ ಹಕ್ಕುಳ್ಳ ಸದಸ್ಯರ ಕರಡು ಪಟ್ಟಿ, ಸುಸ್ತಿದಾರ ಸದಸ್ಯರ ಕರಡು ಪಟ್ಟಿ

ಮತ್ತು ಮತದಾನದ ಹಕ್ಕನ್ನು ಹೊಂದಿರದ ಅನರ್ಹ ಸದಸ್ಯರ ಕರಡು ಪಟ್ಟಿ ಮತ್ತು ಅಂತಿಮ ಮತದಾರರ ಪಟ್ಟಿಯನ್ನು ಪ್ರಕಟಿಸುವ ದಿನಾಂಕಕ್ಕೆ ಸುಸ್ತಿಯಾಗುವಂತಹ ಮತದಾರರ ಕರಡು ಪಟ್ಟಿಗಳನ್ನು ಪ್ರಕಟಿಸಿ, ಆಕ್ಷೇಪಣೆಗಳನ್ನು ಸಲ್ಲಿಸಲು ಕಾಲಾವಕಾಶ ನೀಡಲಾಗಿರುತ್ತದೆ.

ಚುನಾವಣಾ ದಿನಾಂಕಕ್ಕೆ ಸ್ಪಷ್ಟ 15 ದಿನಗಳ ಮುಂಚೆ ಅಂತಿಮ ಮತದಾರರ ಪಟ್ಟಿಯನ್ನು ಪ್ರಕಟಿಸಬೇಕಾಗಿದ್ದು, ಕರಡು ಮತದಾರರ ಪಟ್ಟಿಗೆ ಆಕ್ಷೇಪಣೆಗಳು ಸ್ವೀಕೃತವಾದಲ್ಲಿ, ಸದರಿ ಆಕ್ಷೇಪಣೆಗಳನ್ನು ಪರಿಗಣಿಸುವ ಅಥವಾ ತಿರಸ್ಕರಿಸುವ ಬಗ್ಗೆ ನೇಮಕ ಮಾಡಲಾಗಿರುವ ಪರಿಶೀಲನಾಧಿಕಾರಿಗಳಿಂದ ಅಗತ್ಯ ಪರಿಶೀಲನಾ ಕ್ರಮವಹಿಸಿ, ಪರಿಶೀಲನಾಧಿಕಾರಿಗಳ ವಿವರಣೆಯೊಂದಿಗೆ ಹಾಗೂ ನಿಮ್ಮ ವಸ್ತುನಿಷ್ಠ ವರದಿಯನ್ನು ತಕ್ಷಣವೇ ಈ ಕಛೇರಿಗೆ ಸಲ್ಲಿಸುವುದು.

ಅಲ್ಲದೆ, ಸದಸ್ಯ ಸಹಕಾರಿಗಳಿಂದ ಸ್ವೀಕೃತವಾಗಿರುವ/ಸ್ವೀಕೃತವಾಗುವ ಡೆಲಿಗೇಟ್ಸ್ ನಮೂನೆಗಳನ್ನು ಸಹ ಪರಿಶೀಲನಾಧಿಕಾರಿಗಳ ಪರಿಶೀಲನೆಗೆ ಒಳಪಡಿಸಿ, ಯಾವುದಾದರೂ ಡೆಲಿಗೇಟ್ಸ್ ನಮೂನೆಗಳು ತಿರಸ್ಕೃತಗೊಳಿಸಬೇಕಾದಲ್ಲಿ ತಕ್ಷಣವೇ ಈ ಕಛೇರಿಗೆ ವರದಿ ಸಲ್ಲಿಸುವುದು. ಉಳಿದಂತೆ ಕ್ರಮಬದ್ಧವಾಗಿರುವ ಡೆಲಿಗೇಟ್ಸ್ ನಮೂನೆಗಳ ಮೇಲೆ ಪರಿಶೀಲನಾಧಿಕಾರಿಗಳ ದೃಢೀಕರಣದೊಂದಿಗೆ ಅಂತಿಮ ಮತದಾರರ ಪಟ್ಟಿಯ ಕರಡು ಪ್ರತಿಯನ್ನು ತಯಾರಿಸಿ ನಿಗದಿತ ಕಾಲಾವಧಿಯೊಳಗೆ ಈ ಕಛೇರಿಗೆ ಹಾಜರುಪಡಿಸಲು ತಿಳಿಸಿದೆ.

ತಮ್ಮ ವಿಶ್ವಾಸಿ

(ನವೀನ್ ರಾಜ್ ಸಿಂಗ್, ಭಾಆಸೇ.,)
ಪ್ರಾದೇಶಿಕ ಆಯುಕ್ತರು,
ಬೆಂಗಳೂರು ವಿಭಾಗ, ಬೆಂಗಳೂರು
ಹಾಗೂ ಚುನಾವಣಾಧಿಕಾರಿ.

## ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಆಯ್ಕೆ

ಶ್ರೀ ಪುಟ್ಟರಾಜ ಗವಾಯಿ–ಸಚೇತನ ವಿವಿಧೋದ್ದೇಶಗಳ ಸೌಹಾರ್ದ ಸಹಕಾರಿ ನಿಯಮಿತ ಬಂಕಾಪೂರ



ಶ್ರೀ ಹನುಮಂತಪ್ಪ, ಯುವ್,ವಿ
ಅಧ್ಯಕ್ಷರು



ಶ್ರೀ ಸುಭಾಷಗೌಡ ಆರ್ ಪಾಟೀಲ
ಉಪಾಧ್ಯಕ್ಷರು

## ವರ್ಷಾಂತ್ಯಕ್ಕೆ ಆರ್ಥಿಕ ಅಂಕಿ ಸಂಖ್ಯೆಗಳು

ಆದಿಶಕ್ತಿ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿಯಮಿತ, ಹಾನಗಲ್ಲ.

| ಆರ್ಥಿಕ ಅಂಶಗಳು | 31.03.2022ಕ್ಕೆ ಇದ್ದಂತೆ |
|---|---|
| ಷೇರು ಬಂಡವಾಳ | 12.25 ಲಕ್ಷ |
| ಠೇವಣಿಗಳು | ರೂ 4.57 ಕೋಟಿ |
| ಸಾಲಗಳು ಹಾಗೂ ಮುಂಗಡಗಳು | ರೂ 3.99 ಕೋಟಿ |
| ಒಟ್ಟು ವ್ಯವಹಾರ | ರೂ 8.56 ಕೋಟಿ |
| ನಿವ್ವಳ ಲಾಭ | ರೂ 23.93 ಲಕ್ಷ |

## ರಾಯಚೂರು ಜಿಲ್ಲಾ ಸಂಪರ್ಕ ಕಚೇರಿಯ ನೂತನ ವಿಳಾಸ

**ವಿಳಾಸ :** ಜಿ. ರಾಮಣ್ಣ ಕಾಂಪ್ಲೆಕ್ಸ್, ಎಟಿಎಂ ಸರ್ಕಲ್ ಹತ್ತಿರ, ನಿಜಲಿಂಗಪ್ಪ ಕಾಲೋನಿ, ರಾಯಚೂರು.

# ಸಂಯುಕ್ತ ಸಹಕಾರಿಯ ಇದರ ಆಡಳಿತ ಮಂಡಳಿ ಮತ್ತು ಪದಾಧಿಕಾರಿಗಳ ಚುನಾವಣೆಗೆ ಸಂಬಂಧಿಸಿದಂತೆ ಡೆಲಿಗೇಟ್ ನಮೂನೆಗಳನ್ನು ಪರಿಶೀಲಿಸಲು ಪರಿಶೀಲನಾಧಿಕಾರಿಗಳನ್ನು ನೇಮಿಸುವ ಕುರಿತು

ದೂರವಾಣಿ :ಕಛೇರಿ : 080 22109665
ಫ್ಯಾಕ್ಸ್ : 080 22220883
080 22111163
ಇ-ಮೇಲ್: rcb27bangalore@gmail.com

ಕರ್ನಾಟಕ ಸರ್ಕಾರ
(ಕಂದಾಯ ಇಲಾಖೆ)

**ಪ್ರಾದೇಶಿಕ ಆಯುಕ್ತರ ಕಾರ್ಯಾಲಯ, ಬೆಂಗಳೂರು ವಿಭಾಗ, ಬೆಂಗಳೂರು.**

2ನೇ ಮಹಡಿ, ಬಿ.ಎಂ.ಟಿ.ಸಿ. ಕಟ್ಟಡ, ಶಾಂತಿನಗರ, ಕೆ.ಹೆಚ್.ರಸ್ತೆ, ಬೆಂಗಳೂರು.

ಸಂಖ್ಯೆ:ಚುನಾವಣೆ.ವಿವ/16/2021-22 ದಿನಾಂಕ:04-06-2022.

:: ಆ ದೇ ಶ ::

**ವಿಷಯ:** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಇದರ ಆಡಳಿತ ಮಂಡಳಿ ಮತ್ತು ಪದಾಧಿಕಾರಿಗಳ ಚುನಾವಣೆಗೆ ಸಂಬಂಧಿಸಿದಂತೆ ಡೆಲಿಗೇಟ್ ನಮೂನೆಗಳನ್ನು ಪರಿಶೀಲಿಸಲು ಪರಿಶೀಲನಾಧಿಕಾರಿಗಳನ್ನು ನೇಮಿಸುವ ಬಗ್ಗೆ.

***********

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು** ಇದರ ಇದರ ಆಡಳಿತ ಮಂಡಳಿ ಮತ್ತು ಪದಾಧಿಕಾರಿಗಳ ಚುನಾವಣೆಗೆ ಸಂಬಂಧಿಸಿದಂತೆ ಸಂಯುಕ್ತರ ಸಹಕಾರಿಯ ಸದಸ್ಯ ಸಹಕಾರಿಗಳು ಕಾರ್ಯನಿರತವಾಗಿರುವ ಬಗ್ಗೆ ಮತ್ತು ಸದರಿ ಸಹಕಾರಿಗಳ ಡೆಲಿಗೇಟ್‌ಗಳು ಸೌಹಾರ್ದ ಸಹಕಾರಿ ಅಧಿನಿಯಮ ಮತ್ತು ನಿಯಮಗಳು ಹಾಗೂ ಉಪವಿಧಿಗಳ ಅವಕಾಶದಂತೆ ಮತ ಚಲಾಯಿಸಲು ಅರ್ಹತೆ ಹೊಂದಿರುವ ಬಗ್ಗೆ ಸದಸ್ಯ ಸಹಕಾರಿಗಳಿಂದ ಸ್ವೀಕೃತವಾಗಿರುವ/ಸ್ವೀಕೃತವಾಗುವ ಡೆಲಿಗೇಟ್ ನಮೂನೆಗಳನ್ನು ಸಂಬಂಧಿಸಿದ ದಾಖಲಾತಿಗಳೊಂದಿಗೆ ಪರಿಶೀಲಿಸಿ ದೃಢೀಕರಿಸಲು ಈ ಕೆಳಕಂಡಂತೆ ಪರಿಶೀಲನಾಧಿಕಾರಿಗಳನ್ನು ನೇಮಕ ಮಾಡಿ ಆದೇಶಿಸಿರುತ್ತೇನೆ.

| ಕ್ರ.ಸಂ | ವಿಭಾಗ | ನೇಮಕ ಮಾಡಲಾಗಿರುವ ಪರಿಶೀಲನಾಧಿಕಾರಿಗಳ ವಿವರ |
|---|---|---|
| 1 | ಬೆಂಗಳೂರು | ಶ್ರೀ ಪ್ರಮೋದ್‌ಕುಮಾರ್, ಸಹಕಾರ ಸಂಘಗಳ ಸಹಾಯಕ ನಿಬಂಧಕರು, (ವಸತಿ ಶಾಖೆ), ನಿಬಂಧಕರ ಕಛೇರಿ, ಸಹಕಾರ ಇಲಾಖೆ, ಬೆಂಗಳೂರು. |
| 2 | ಮೈಸೂರು | ಶೈಲಜಾ, ಸಹಕಾರ ಸಂಘಗಳ ಸಹಾಯಕ ನಿಬಂಧಕರು, (ಆಯವ್ಯಯ), ನಿಬಂಧಕರ ಕಛೇರಿ, ಸಹಕಾರ ಇಲಾಖೆ, ಬೆಂಗಳೂರು. |
| 3 | ಬೆಳಗಾವಿ | ಶ್ರೀ ಬಿ.ವಿ.ಗಂಗಾಧರ್, ಸಹಕಾರ ಸಂಘಗಳ ಸಹಾಯಕ ನಿಬಂಧಕರು, 2ನೇ ವಲಯ, ಮಲ್ಲೇಶ್ವರಂ, ಬೆಂಗಳೂರು-560003. |
| 4 | ಕಲಬುರಗಿ | ಸರಳಾ, ಸಹಕಾರ ಸಂಘಗಳ ಸಹಾಯಕ ನಿಬಂಧಕರು, (ಪತ್ತು), ನಿಬಂಧಕರ ಕಛೇರಿ, ಸಹಕಾರ ಇಲಾಖೆ, ಬೆಂಗಳೂರು. |

(ನವೀನ್ ರಾಜ್ ಸಿಂಗ್, ಭಾ.ಆ.ಸೇ.,)
ಪ್ರಾದೇಶಿಕ ಆಯುಕ್ತರು ಹಾಗೂ
ಚುನಾವಣಾಧಿಕಾರಿಗಳು
ಬೆಂಗಳೂರು ವಿಭಾಗ, ಬೆಂಗಳೂರು.

ಪ್ರತಿಯನ್ನು:-

1) ಆಯುಕ್ತರು, ಸಹಕಾರ ಚುನಾವಣಾ ಪ್ರಾಧಿಕಾರ, ಟಿ.ಟಿ.ಎಂ.ಸಿ ಕಟ್ಟಡ, 3ನೇ ಮಹಡಿ, ಶಾಂತಿನಗರ, ಬೆಂಗಳೂರು -27.
2) ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ, ನಂ. 1, ಆಲಿಆಸ್ಕರ್ ರಸ್ತೆ, ಬೆಂಗಳೂರು-52.
3) ಸಂಬಂಧಪಟ್ಟ ಪರಿಶೀಲನಾಧಿಕಾರಿಗಳಿಗೆ.

# ವಿಶ್ವಸಾರ್ಹತೆಯ ಪ್ರತೀಕ – ಹಾವೇರಿಯ ಶ್ರೀ ಸುವರ್ಣ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ – ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರ ಭೇಟಿ



**ಹಾವೇರಿ :** ಶ್ರೀ ಸುವರ್ಣ ಪತ್ತಿನ ಸೌಹಾರ್ದ ಸಹಕಾರಿ ನಿ., ತನ್ನ 27 ವರ್ಷಗಳನ್ನು ಪೂರೈಸಿದೆ. 27 ವರ್ಷಗಳ ಸುದೀರ್ಘ ಪಯಣವನ್ನು ಪೂರೈಸಿ 28ನೇ ವರ್ಷಕ್ಕೆ ಕಾಲಿರಿಸಿದೆ. ಈ ಸಂದರ್ಭದಲ್ಲಿ ಅದು 900 ಸದಸ್ಯರನ್ನು ಹೊಂದಿದ್ದು 21,48,000 ಶೇರು ಬಂಡವಾಳವನ್ನು ಹೊಂದಿದೆ. ಹಾವೇರಿ ನಗರದಲ್ಲಿ ಸುತ್ತಮುತ್ತದಲ್ಲೂ ವಾಣಿಜ್ಯ ಬ್ಯಾಂಕುಗಳು ಹಾಗೂ ಬೇರೆ ಸಹಕಾರಿ ಸಂಸ್ಥೆಗಳು ಕಾರ್ಯನಿರ್ವಹಿಸುತ್ತದಾಗಿಯೂ ಸಹ ಈ ಸಹಕಾರಿಯಲ್ಲಿ ಬಂಗಾರ ಸಾಲ ಪಡೆಯಲು ಜನ ಬೆಳಿಗ್ಗೆಯಿಂದಲೇ ಕಾದುಕೊಂಡಿರುವುದು ವಿಶೇಷ. ಬೇರೆ ಬ್ಯಾಂಕು & ಸಹಕಾರಿ ಸಂಸ್ಥೆಗಳಿಂತಲ್ಲೂ ಬಡ್ಡಿದರ ಹೆಚ್ಚಾದರೂ ಸಹ ಈ ಸುವರ್ಣ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತದಲ್ಲಿ ಬಂಗಾರಕ್ಕೆ ಸಾಲ ಬರುವುದು ಈ ಸಹಕಾರಿಯ ಮೇಲೆ ಸದಸ್ಯರು ಇಟ್ಟಿರುವ ವಿಶ್ವಸಾರ್ಹತೆ. ಈ ವಿಶ್ವಾಸಾರ್ಹತೆಯನ್ನು ಕಾಯ್ದುಕೊಳ್ಳುವುದಕ್ಕಾಗಿ ಬ್ಯಾಂಕಿನ ಅಧ್ಯಕ್ಷರು, ಉಪಾಧ್ಯಕ್ಷರು, ಆಡಳಿತ ಮಂಡಳಿ & ಸಿಬ್ಬಂದಿಯವರು ಸತತ ಶ್ರಮ ವಹಿಸುತ್ತಿದ್ದಾರೆ. ಸದಸ್ಯರಿಗೆ ಸ್ಪಂಧಿಸುತ್ತಿರುವುದು ಇತರೆ ಸಂಸ್ಥೆಗಳಿಗೆ ಅನುಕರಣೀಯ ಹಾಗೂ ಅಧ್ಯಯನ ಯೋಗ್ಯವಾಗಿದೆ

ಈ ಸಹಕಾರಿಯ ಅಧ್ಯಕ್ಷರಾದ ಶ್ರೀಯುತ ಉದಯಕುಮಾರ ಡಿ. ಕುರ್ಡೇಕರ, ಉಪಾಧ್ಯಕ್ಷರಾದ ಶ್ರೀಮತಿ ಗಾಯತ್ರಿ ಎಸ್ ನೇಜಕರ, ಮುಖ್ಯ ಕಾರ್ಯನಿರ್ವಾಹಕರಾದ ಶ್ರೀಮತಿ ಜ್ಯೋತಿ ಎಮ್ ಬಿಷ್ಟಣ್ಣವರ ಇವರುಗಳು ಈ ಸಂಸ್ಥೆಯ ಸುಸ್ಥಿತ ಅಭಿವೃದ್ಧಿಗಾಗಿ ಕಾರ್ಯನಿರ್ವಹಿಸುತ್ತಿರುವುದು ಶ್ಲಾಘನೀಯ & ಅಭಿನಂದರ್ನಹರು.

ದಿನಾಂಕ 18.05.2022 ರಂದು ಹಾವೇರಿ ಜಿಲ್ಲೆ ಇದಕ್ಕೆ ಸಂಯುಕ್ತ ಸಹಕಾರಿ ಅಧ್ಯಕ್ಷರಾದ ಮಾನ್ಯ ಶ್ರೀ ಬಿ ಹೆಚ ಕೃಷ್ಣಾರೆಡ್ಡಿ ಅವರು ಬಂಗಾರ ಸಾಲ ಹಂಚುವಿಕೆಯಲ್ಲಿ ಪ್ರಸಿದ್ಧರಾದ ಸುವರ್ಣ ಪತ್ತಿನ ಸೌಹಾರ್ದ ಸಹಕಾರಿ ಸಂಘದ ನಿ., ಹಾವೇರಿ ಇದಕ್ಕೆ ಭೇಟಿ ನೀಡಿದ್ದಾರೆ ಇದರಲ್ಲಿ ಪ್ರಸಕ್ತ ಕರ್ನಾಟಕದಲ್ಲಿ ವಿಶೇಷವಾಗಿ ಸಾಲ ಹಂಚುವುದು ಮತ್ತು ಉತ್ತಮ ಬಂಡವಾಳದಿಂದ ಕೆಲಸ ನಿರ್ವಹಿಸುತ್ತಿದ್ದು ಮಾನ್ಯ ಅಧ್ಯಕ್ಷರು ಭೇಟಿ ನೀಡಿ ಸದರಿ ಸಹಕಾರಿ ಯೋಜನೆ ಬಗ್ಗೆ ಮಾಹಿತಿಯನ್ನು ಪಡೆದುಕೊಂಡರು. ಸದರಿ ಸಹಕಾರಿ ಸಂಘದ ಆಡಳಿತ ಮಂಡಳಿ ಮತ್ತು ಸಿಬ್ಬಂದಿ ವತಿಯಿಂದ ವಿಶೇಷವಾಗಿ ಸನ್ಮಾನ ಕಾರ್ಯಕ್ರಮ ಮಾಡಲಾಯಿತು. ಸದರಿ ಸಂಘದ ಕಾರ್ಯಚಟುವಟಿಕೆಗಳು ಅತ್ಯಂತ ಉತ್ತಮವಾಗಿ ನಡೆಯುತ್ತಿರುವುದು ಮತ್ತು ಬೇರೆ ಸಹಕಾರಿಗಳಿಗೆ ಅನುಕರಣೀಯ ಹಾಗೂ ಅಧ್ಯಯನ ಯೋಗ್ಯವಾಗಿದೆ ಎಂದು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ. ಹೆಚ್. ಕೃಷ್ಣಾರೆಡ್ಡಿ ಯವರು ತಿಳಿಸಿದರು.



ಉದಯಕುಮಾರ ಡಿ. ಕುರ್ಡೇಕರ,
ಅಧ್ಯಕ್ಷರು



ಶ್ರೀಮತಿ ಗಾಯತ್ರಿ ಎಸ್ ನೇಜಕರ
ಉಪಾಧ್ಯಕ್ಷರು

# ಶ್ರೀ ಚಂದ್ರಶೇಖರ ಪರಸರೆಡ್ಡಿ ಇವರು National Fisheries Development Board ನ Governing body Member ಆಗಿ ಆಯ್ಕೆ – ಅಭಿನಂದನೆ



**ಕಲಬುರಗಿ :** ವೀರಭದ್ರೇಶ್ವರ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಚಂದ್ರಶೇಖರ ಪರಸರೆಡ್ಡಿ ಇವರನ್ನು National Fisheries Development Board, Government of india ಇದಕ್ಕೆ Governing body Member ಆಗಿ ನೇಮಕಗೊಂಡಿರುವ ಪ್ರಯುಕ್ತ ಸಂಯುಕ್ತ ಸಹಕಾರಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಇವರನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ಯವರು ಅಭಿನಂದಿಸಿದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶರಣಗೌಡ ಜಿ. ಪಾಟೀಲ ಹಾಗೂ ಸಾಮಾಜಿಕ ಕಾರ್ಯಕರ್ತ ಶ್ರೀ ವಿಶ್ವನಾಥ ಸಾಮೀಜಿಯವರು ಮತ್ತು ಇತರೆ ಅಧಿಕಾರಿಗಳು ಮುಂತಾದವರು ಇದ್ದಾರೆ.

## ಭ್ರಮರಾಂಭ ಪತ್ತಿನ ಸೌಹಾರ್ದ ಸಹಕಾರಿಯ ನೂತನ ಕಟ್ಟಡ ಉದ್ಘಾಟನೆ



**ಮಸ್ಕಿ :** ದಿನಾಂಕ 05.05.2022 ರಂದು ಶ್ರೀ ಭ್ರಮರಾಂಭ ಪತ್ತಿನ ಸೌಹಾರ್ದ ಸಹಕಾರಿ ನಿ., ಮಸ್ಕಿ ಇದರ ನೂತನ ಕಟ್ಟಡದ ಉದ್ಘಾಟನೆ ಹಾಗೂ 22ನೇ ವಾರ್ಷಿಕೋತ್ಸವವನ್ನು ಮಸ್ಕಿಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿಯವರು ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಹಿರಿಯ ಸಹಕಾರಿಗಳಾದ ಶ್ರೀ ರಮೇಶ ವೈದ್ಯ, ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರುಗಳಾದ ಶ್ರೀ ಗುರುನಾಥ ಜ್ಯಾಂತೀಕರ, ಶ್ರೀ ವಿಶ್ವನಾಥ ಚ ಹಿರೇಮಠ, ಶ್ರೀ ವೈ.ಟಿ ಪಾಟೀಲ, ಶ್ರೀ ಆರ್ ತಿಮ್ಮಯ್ಯಶೆಟ್ಟಿ, ಶ್ರೀ ಸಂಜೀವ ಮಹಾಜನ, ಶ್ರೀ ಜಿ.ಶ್ರೀಧರ ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲರವರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಹಿರಿಯ ಸಹಕಾರಿಗಳಾದ ಮಾಜಿ ವಿಧಾನ ಪರಿಷತ್ ಸದಸ್ಯರಾದ ಶ್ರೀ ಮನೋಹರ ಮಸ್ಕಿ, ಮಾಜಿ ಶಾಸಕರಾದ ಶ್ರೀ ಪ್ರತಾಪಗೌಡ ಪಾಟೀಲ, ಆರ್‌ಡಿಸಿಸಿ ಬ್ಯಾಂಕಿನ ನಿರ್ದೇಶಕರು, ನೂತನ ವಿಧಾನಪರಿಷತ್ ಸದಸ್ಯರಾದ ಶ್ರೀ ಶರಣಗೌಡ ಬಯ್ಯಾಪುರ, ಆರ್‌ಡಿಸಿಸಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ವಿಶ್ವನಾಥ ಪಾಟೀಲ, ಶ್ರೀ ಭ್ರಮರಾಂಬ ಪತ್ತಿನ ಸಹಕಾರಿಯ ಅಧ್ಯಕ್ಷರಾದ ಡಾ॥ ಶಿವಶರಣಪ್ಪ ಇತಲಿ ಇವರು ಉಪಸ್ಥಿತರಿದ್ದರು.

## ಸ್ಪಂದನ ಕ್ರೆಡಿಟ್ ಸೌಹಾರ್ದ ಸಹಕಾರಿಯ 12ನೇ ವಾರ್ಷಿಕೋತ್ಸವ

**ಬೆಂಗಳೂರು :** ಸ್ಪಂದನ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತ, ಚಂದ್ರಬಡಾವಣೆ, ಬೆಂಗಳೂರು. ಇದರ 12ನೇ ವಾರ್ಷಿಕೋತ್ಸವವನ್ನು ದಿನಾಂಕ 03.05.2022 ರಂದು ಆಚರಿಸಲಾಯಿತು ಸಹಕಾರ ಸಂಘಗಳ ನಿವೃತ್ತ ಸಂಯುಕ್ತ ನಿಬಂಧಕರಾದ ಶ್ರೀ.ಸಿದ್ದಪ್ಪ.ಕೆ. ರವರು ಈ ಸಮಾರಂಭದ ಮುಖ್ಯ ಅತಿಥಿಯಾಗಿ ಭಾಗವಹಿಸಿದರು.


ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ.ಟಿ.ಹೆಚ್.ಕರಿಯಪ್ಪ ರವರು ಸದಸ್ಯರನ್ನು ಉದ್ದೇಶಿಸಿ ಮಾತನಾಡಿ ಸಹಕಾರಿಯೂ 2021–22 ನೇ ಸಾಲಿನಲ್ಲಿ ರೂ.416 ಕೋಟಿಗಳ ವಹಿವಾಟು ನಡೆಸಿ ರೂ.10.87 ಕೋಟಿಗಳ ಒಟ್ಟು ಆದಾಯ ಹಾಗೂ ರೂ.2.26 ಕೋಟಿಗಳ ನಿವ್ವಳ ಲಾಭವನ್ನು ಗಳಿಸಿರುತ್ತದೆ ಎಂದು ತಿಳಿಸಿ ಮುಂದಿನ ವರ್ಷ ರೂ.14ಕೋಟಿಗಳ ಒಟ್ಟು ಆದಾಯ ಹಾಗೂ ರೂ.3 ಕೋಟಿಗಳಿಗಿಂತ ಹೆಚ್ಚಿನ ನಿವ್ವಳ ಲಾಭಗಳಿಸಲು ಉದ್ದೇಶಿಸಲಾಗಿದೆ ಎಂದು ಸದಸ್ಯರಿಗೆ ವಿವರಿಸಿದರು.

## ಪ್ರಥಮ ಸರ್ವ ಸದಸ್ಯರ ವಾರ್ಷಿಕ ಸಾಮಾನ್ಯ ಸಭೆ

**ಹಾಸನ :** ದಿನಾಂಕ 25.04.2022ರಂದು ನಡೆದ ಜೀವನಜ್ಯೋತಿ ಶ್ರೀ ಶಕ್ತಿ ಸೌಹಾರ್ದ ಸಹಕಾರಿ ನಿ., ಹಾಸನ ಇದರ ಪ್ರಥಮ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆಯನ್ನು ಶ್ರೀಮತಿ ಭಾಗ್ಯ ಮೇರಿ ರವರು, ಸಹಕಾರಿ ಅಧ್ಯಕ್ಷರು ವಹಿಸಿದ್ದರು. ಉದ್ಘಾಟನೆಯನ್ನು ಎಂ. ಚಂದ್ರಶೇಖರಯ್ಯ, ಜಿಲ್ಲಾ ಸಂಯೋಜಕರು ನೆರವೇರಿಸಿದರು. ಮುಖ್ಯ ಅತಿಥಿಯಾಗಿ ಶ್ರೀ ಶಾಂತರಾಜ್ .ಆರ್ ರವರು ಮತ್ತು ಶ್ರೀಮತಿ ಪ್ರಮೀಳಾ ರವರು ಉಪಾಧ್ಯಕ್ಷರು ವೇದಿಕೆಯ ಮೇಲೆ ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಜಿಲ್ಲಾ ಸಂಯೋಜಕರು ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ ಮತ್ತು ಸಹಕಾರಿ ಸದಸ್ಯರ ಹಕ್ಕು & ಕರ್ತವ್ಯ ಗಳ ಮಾಹಿತಿಯನ್ನು ನೀಡಿದರು.

**ಮಂಡ್ಯ :** ಸ್ಪೂರ್ತಿ ಕಾವೇರಿ ಸೌಹಾರ್ದ ಸಹಕಾರಿ ಸಂಘ ನಿ., ಮಂಡ್ಯ ಇದರ ಪ್ರಥಮ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ಶ್ರೀ ಡಿ.ಸಿ ತಮ್ಮಣ್ಣ ರವರು, ಮಾಜಿ ಸಚಿವರು ಹಾಗೂ ಮದ್ದೂರು ಕ್ಷೇತ್ರ ಶಾಸಕರು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀ ಜಿ.ಡಿ ಹರೀಶ್ ರವರು, ಉಪಾಧ್ಯಕ್ಷರು, ಅಪೆಕ್ಸ್ ಬ್ಯಾಂಕ್ ಹಾಗೂ ಅಧ್ಯಕ್ಷರು ಎಂಸಿಡಿಸಿಸಿ ಬ್ಯಾಂಕ್ ಇವರು, ಶ್ರೀ ಅಶೋಕ ಜಯರಾಮ್ ರವರು, ಶ್ರೀ ಎಂ. ಚಂದ್ರಶೇಖರಯ್ಯ, ಜಿಲ್ಲಾ ಸಂಯೋಜಕರು, ಶ್ರೀ ಕೆ.ಎಲ್ ಶಿವರಾಮ ರವರು, ಮುಖ್ಯ ಪ್ರವರ್ತಕರು ಉಪಸ್ಥಿತರಿದ್ದರು.

# ಭತ್ತದ ಒಂದಷ್ಟು ಕ್ಷೇತ್ರ ಕೋಕೋ ಬೆಳೆಯಲು ಸುಕೋ ಬ್ಯಾಂಕಿನಿಂದ ಅಭಿಯಾನ – ಕೃಷಿ ಕ್ಷೇತ್ರದ ಮಹತ್ತರ ಬದಲಾವಣೆಗೆ ಮುನ್ನುಡಿ.



ಕಳೆದ ಮೂರು ವರ್ಷಗಳಿಂದ ಭತ್ತದ ಬೆಲೆ ಏರದೇ ಇರುವುದು, ಅದೇ ಸಮಯದಲ್ಲಿ ಬೆಳೆ ಸಂಬಂಧಿತ ಖರ್ಚುಗಳು ಹೆಚ್ಚುತ್ತಿರುವುದರಿಂದ, ಭತ್ತದ ಕೃಷಿ, ರೈತರಿಗೆ ನಷ್ಟವನ್ನು ಉಂಟು ಮಾಡುತ್ತಿದೆ. ರಾಸಾಯನಿಕ ಗೊಬ್ಬರಗಳ ಬಳಕೆ ಮತ್ತು ಬೆಲೆ ಎರಡೂ ಇನ್ನಷ್ಟು ಏರಿಕೆಯಾಗಿವೆ, ಈ ಎಲ್ಲಾ ಹಿನ್ನೆಲೆಯಲ್ಲಿ ಉತ್ತರ ಕರ್ನಾಟಕದ ಪ್ರಮುಖ ಸಹಕಾರಿ ಬ್ಯಾಂಕ್ ಆಗಿರುವ ಸುಕೋ ಬ್ಯಾಂಕ್ ಭತ್ತಕ್ಕೆ ಪರ್ಯಾಯವಾಗಿ ಒಂದಷ್ಟು ಕ್ಷೇತ್ರದಲ್ಲಿ ವಾಣಿಜ್ಯ ಮತ್ತು ಪ್ಲಾಂಟೇಷನ್ ಬೆಳೆಯಾದ ಕೋಕೋ ಬೆಳೆಯನ್ನು ಜನಪ್ರಿಯಗೊಳಿಸುವ ಅಭಿಯಾನ ತೆಗೆದುಕೊಂಡಿದೆ.

ಇಪ್ಪತ್ತು ವರ್ಷಗಳ ಹಿಂದೆಯೇ ಈ ಭಾಗದ ಜೀವನಾಡಿಯಾದ ತುಂಗಭದ್ರಾ ಕಾಲುವೆ ಹಲವು ಬಾರಿ ಒಡೆದಾಗ ತಕ್ಷಣ ಗದ್ದೆಯಲ್ಲಿರುವ ನೀರನ್ನು ಉಳಿಸಿಕೊಳ್ಳಲು ಬೇವಿನ ಎಣ್ಣೆ ಅಥವಾ ಯಾವುದೇ ಎಣ್ಣೆ ಸಿಂಪಡಿಸಿ ನೀರು ಆವಿಯಾಗುವುದನ್ನು ತಪ್ಪಿಸಲು ಸುಕೋ ಬ್ಯಾಂಕ್ ಅಭಿಯಾನ ನಡೆಸಿತ್ತು. ಗದ್ದೆಗಳಲ್ಲಿ ಕೆರೆ ಮಾಡಿಸಲು, ರೈತರ ಜಮೀನಿನಲ್ಲಿಯೇ ಗೋದಾಮು ಕಟ್ಟಲು 20 ವರ್ಷಗಳ ಹಿಂದೆಯೇ ಸಾಲದ ಯೋಜನೆ ರೂಪಿಸಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಕಳೆದ ಹತ್ತಾರು ವರ್ಷಗಳಿಂದ ಇವು ಸರಕಾರದ ಕಾರ್ಯಕ್ರಮಗಳಾಗಿ ರೂಪುಗೊಂಡದ್ದು ಸುಕೋ ಬ್ಯಾಂಕಿನ ದೂರದೃಷ್ಟಿಗೆ ಸಾಕ್ಷಿ ಎನ್ನಬಹುದು.

ಕೋಕೋ ಮಲೆನಾಡಿನಲ್ಲಿ ಅಂತರ ಬೆಳೆಯಾಗಿ ಬೆಳೆಯುತ್ತಿರುವುದು ಸರ್ವೇ ಸಾಮಾನ್ಯ, ಅಂತಹ ಬೆಳೆಯನ್ನು ಬಿಸಿಲನಾಡಿನಲ್ಲಿ ಪ್ರಮುಖ ಬೆಳೆಯಾಗಿ ಕೃಷಿ ಮಾಡಲು ಸೂಚಿಸುವ ಮತ್ತು ರೈತರನ್ನು ಪ್ರೇರೇಪಿಸುವ ದೊಡ್ಡ ಸಾಹಸದ ಕೆಲಸಕ್ಕೆ ಸುಕೋ ಬ್ಯಾಂಕ್ ಕೈ ಹಾಕಿದೆ ಎಂದು ಬ್ಯಾಂಕಿನ ಅಧ್ಯಕ್ಷ ಮೋಹಿತ ಮಸ್ಕಿ ತಿಳಿಸಿದ್ದಾರೆ.

### ಕೋಕೋ ಬೆಳೆ :–

ಪ್ರಸ್ತುತ ನಮ್ಮ ದೇಶದ ಬೇಡಿಕೆಯ ಶೇಕಡಾ 30 ರಷ್ಟು ಮಾತ್ರ ಕೋಕೋ ದೇಶೀಯವಾಗಿ ಬೆಳೆಯಲಾಗುತ್ತಿದೆ. ಇದೆ ಸಮಯದಲ್ಲಿ ಪ್ರತಿವರ್ಷ ಶೇಕಡಾ 10 ರಷ್ಟು ಬೇಡಿಕೆ ಹೆಚ್ಚುತ್ತಿದೆ. ಕೋಕೋ ಪ್ಲಾಂಟೇಷನ್ ಬೆಳೆಯಾದ್ದರಿಂದ ರೈತರಿಗೆ ಧೀರ್ಘ ಅವಧಿಯ ಆದಾಯ ತರಲಿದೆ. ಈಗಾಗಲೇ ಕೆಲವು ರಾಜ್ಯಗಳಲ್ಲಿ ಬಯಲು ಸೀಮೆಯಲ್ಲಿಯೇ ಕೋಕೋವನ್ನು ಪ್ರಮುಖ ಬೆಳೆಯಾಗಿ ಬೆಳೆದು ಯಶಸ್ವಿಯಾದ ರೈತರಿದ್ದಾರೆ. ನಮ್ಮ ಕಲ್ಯಾಣ ಕರ್ನಾಟಕದಲ್ಲಿ ಇರುವಷ್ಟೇ ತಾಪಮಾನದ, ಪಕ್ಕದ ರಾಜ್ಯ ಆಂಧ್ರ ಪ್ರದೇಶದಲ್ಲಿ ಕೋಕೋವನ್ನು ಅತ್ಯಂತ ಉತ್ತಮವಾಗಿ 1000 ಕ್ಕೂ ಹೆಚ್ಚು ಎಕರೆಯಲ್ಲಿ ಈಗಾಗಲೇ ಹಲವು ರೈತರು ಬೆಳೆದು ಯಶಸ್ವಿಯಾಗಿದ್ದಾರೆ. ಕೋಕೋ ಆಫ್ರಿಕಾದ ದೇಶಗಳಲ್ಲಿ ಕಾಡು ಉತ್ಪನ್ನವಾಗಿದೆ ಮತ್ತು ಹಲವು ರೀತಿಯ ತಾಪಮಾನಗಳಲ್ಲಿ ಬೆಳೆಯುತ್ತಿದೆ. ಅದರ ಕೃಷಿಯನ್ನು ನಮ್ಮ ದೇಶದಲ್ಲಿ ಮಲೆನಾಡಿನಲ್ಲಿ ಆರಂಭ ಮಾಡಿದ್ದರಿಂದ ಇದು ಮಲೆನಾಡಿನ ಬೆಳೆ ಎನ್ನುವ ಅಭಿಪ್ರಾಯ ಉಂಟಾಗಿದೆ ಅಷ್ಟೇ, ಆದರೆ ಕೋಕೋ ಎಲ್ಲ ರೀತಿಯ ತಾಪಮಾನದಲ್ಲಿ ಬೆಳೆಯಬಲ್ಲದು ಎಂದು ಸುಕೋ ಬ್ಯಾಂಕಿನ ಪ್ರಕಟಣೆ ತಿಳಿಸಿದೆ.

### ರೈತರಿಗೆ ಮಾಹಿತಿ ಮತ್ತು ಕ್ಷೇತ್ರ ಭೇಟಿ :–

ಆಸಕ್ತ ರೈತರಿಗೆ ಮೊದಲ ಹಂತದಲ್ಲಿ ಜಾಲತಾಣದ ಮೂಲಕ ಮಾಹಿತಿ ಸಭೆ. ನಂತರ ಈಗಾಗಲೇ ಕೋಕೋ ಬೆಳೆದು ಯಶಸ್ವಿಯಾಗಿರುವ ಪಕ್ಕದ ರಾಜ್ಯದ ರೈತರ ಕ್ಷೇತ್ರಗಳಿಗೆ ಭೇಟಿ ಏರ್ಪಡಿಸಲಾಗುತ್ತದೆ. ಮುಂದಿನ ಹಂತದಲ್ಲಿ ವಿಷಯ ವಿಜ್ಞಾನಿಗಳೊಂದಿಗೆ ಮುಖಾಮುಖಿ ಸಭೆ ಏರ್ಪಡಿಸಲಾಗುತ್ತದೆ. ಹಾಗೆಯೇ ಕೇಂದ್ರ ಸರಕಾರದ ಸಹಾಯ ಧನ ಪಡೆದು ರಿಯಾಯಿತಿ ದರದಲ್ಲಿ ಉತ್ತಮ ಸಸಿಗಳ ಪೂರೈಕೆಗೆ ಸಂಯೋಜನೆ ಮಾಡಲಾಗುತ್ತದೆ. ಮುಂದಿನ ಹಂತದಲ್ಲಿ ರೈತರ ಕ್ಷೇತ್ರಗಳಿಗೆ ವಿಷಯ ತಜ್ಞರ ಭೇಟಿ ಮತ್ತು ಅಗತ್ಯ ತಾಂತ್ರಿಕ ನೆರವು ನೀಡಲು ಕೋಕೋ ಬೆಳೆಯ ಸಂಶೋಧನಾ ಕೇಂದ್ರಗಳ ವಿಜ್ಞಾನಿಗಳೊಂದಿಗೆ ಒಡಂಬಡಿಕೆ ಮಾಡಲಾಗುತ್ತದೆ.

ಸುಕೋ ಬ್ಯಾಂಕ್ ಇದಕ್ಕೆ ಸಂಬಂಧಿಸಿದಂತೆ ಈಗಾಗಲೇ ಕೇಂದ್ರ ಸರಕಾರದ ಕೋಕೋ ನಿರ್ದೇಶನಾಲಯ, ದೇಶದ ಪ್ಲಾಂಟೇಷನ್ ಬೆಳೆಗಳ ಅಧ್ಯಯನ ಸಂಸ್ಥೆಯಾದ ಕೇಂದ್ರೀಯ ಪ್ಲಾಂಟೇಶನ ಬೆಳೆಗಳ ಸಂಶೋಧನಾ ಕೇಂದ್ರ ಕಾಸರಗೋಡು, ರಾಜ್ಯದ ತೋಟಗಾರಿಕಾ ಇಲಾಖೆಯ ಪ್ಲಾಂಟೇಷನ್ ವಿಭಾಗ ಹಾಗೂ ಓಟಿಟಿ ಮೂಲಕ ಪ್ರಸಾರವಾಗುತ್ತಿರುವ ಫಾರಂ ಟಿವಿ ಗಳ ಜೊತೆ ಹಲವು ಸುತ್ತಿನ ಚರ್ಚೆ ಮತ್ತು ಸಭೆಗಳನ್ನು ಮಾಡಿ ಉತ್ತರ ಕರ್ನಾಟಕ ಅದರಲ್ಲೂ ಕಲ್ಯಾಣ ಕರ್ನಾಟಕ ಭಾಗದಲ್ಲಿ ಭತ್ತಕ್ಕೆ ಪರ್ಯಾಯವಾಗಿ ಕೋಕೋ ಪ್ರೋತ್ಸಾಹಿಸುವ ಕಾರ್ಯಕ್ರಮವನ್ನು ರೂಪಿಸಲಾಗಿದೆ. ಸುಕೋ ಬ್ಯಾಂಕಿನ ಸಂಸ್ಥಾಪಕ ಅಧ್ಯಕ್ಷರು ಮತ್ತು ವಿಧಾನ ಪರಿಷತ್ತಿನ ಹಿಂದಿನ ಸದಸ್ಯರು ಆದ ಮನೋಹರ ಮಸ್ಕಿಯವರು ಹಲವು ತಿಂಗಳುಗಳಿಂದ ಈ ಬಗ್ಗೆ ಕೆಲಸ ಮಾಡುತ್ತಿದ್ದಾರೆ.

### 19 ರಂದು ಮೊದಲ ಸಭೆ ಹಾಗೂ 23ಕ್ಕೆ ಕ್ಷೇತ್ರ ಭೇಟಿ :–

ಇದೇ ತಿಂಗಳ 19 ರಂದು ಆಸಕ್ತ ರೈತರ ಮೊದಲ ಆನ್ ಲೈನ್ ಸಭೆಯನ್ನು ಮೇಲೆ ತಿಳಿಸಿದ ಎಲ್ಲಾ ಸಂಸ್ಥೆಗಳ ಪ್ರತಿನಿಧಿಗಳು ಹಾಗೂ ವಿಜ್ಞಾನಿಗಳೊಂದಿಗೆ ಏರ್ಪಡಿಸಲಾಗಿದೆ, ದಿನಾಂಕ 23.5.2022 ರಂದು ಆಂಧ್ರ ಪ್ರದೇಶದಲ್ಲಿ ಕೋಕೋ ಬೆಳೆದ ರೈತರ ಕ್ಷೇತ್ರಗಳಿಗೆ ಭೇಟಿ ಏರ್ಪಡಿಸಲಾಗಿದೆ, ಈ ಭೇಟಿಗೆ ಕೇಂದ್ರ ಸರಕಾರದ ಕೋಕೋ ನಿರ್ದೇಶನಾಲಯ ಒಂದಷ್ಟು ಆರ್ಥಿಕ ನೆರವು ನೀಡಲು ಸಹ ಒಪ್ಪಿಕೊಂಡಿದೆ. ಫಾರ್ಮ್ ಟಿವಿ ರೈತರ ಈ ಭೇಟಿಯನ್ನು ದಾಖಲಿಸಲು ಮತ್ತು ಅವರ ಈ ಹಿಂದಿನ ಕ್ಷೇತ್ರ ಭೇಟಿಯ ಮಾಹಿತಿ ಹಂಚಿಕೊಳ್ಳುತ್ತದೆ.

ಆಸಕ್ತ ರೈತರು ತಮ್ಮ ಹತ್ತಿರದ ಸುಕೋ ಬ್ಯಾಂಕಿನಲ್ಲಿ ದಿನಾಂಕ 18 ರೊಳಗೆ ತಮ್ಮ ಮೊಬೈಲ್ ಸಂಖ್ಯೆಯೊಂದಿಗೆ ಹೆಸರು ನೋಂದಾಯಿಸಿದಲ್ಲಿ ಈ ಸಭೆಯಲ್ಲಿ ತಮ್ಮ ಮೊಬೈಲ್ ಮೂಲಕ ಪಾಲ್ಗೊಳ್ಳಬಹುದಾಗಿದೆ. ಅಥವಾ ಸುಕೋ ಬ್ಯಾಂಕಿನ ಕಾಲ್ ಸೆಂಟರಿನ 1800 121 5560 ಸಂಖ್ಯೆಗೆ ಬೆಳಿಗ್ಗೆ 10 ರಿಂದ ಸಂಜೆ 6 ಸಮಯದಲ್ಲಿ (ರಜಾ ದಿನಗಳನ್ನು ಹೊರತುಪಡಿಸಿ) ರೈತರು ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದು ಎಂದು ಸುಕೋ ಬ್ಯಾಂಕ್ ತಿಳಿಸಿದೆ.

# ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ಪ್ರಪ್ರಥಮ ಸಹಕಾರಿ ಶೈತ್ಯಾಗಾರ (ಕೋಲ್ಡ್ ಸ್ಟೋರೇಜ್) : ಶಿವಮೊಗ್ಗ ಜಿಲ್ಲೆಯ ಶ್ರೀ ಶಾರದ ವಿವಿಧೊದ್ದೇಶ ಸೌಹಾರ್ದ ಸಹಕಾರಿಯ ಸಾಧನೆಯ ಮೈಲಿಗಲ್ಲು.

ಶಿವಮೊಗ್ಗ ನಗರದ ಶ್ರೀ ಶಾರದಾ ಸೌಹಾರ್ದ ಸಹಕಾರಿ ನಿ. ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ಉತ್ತಮ ಸೌಹಾರ್ದ ಸಹಕಾರಿಗಳ ಸಾಲಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಕಾರಿಯಾಗಿದೆ. ಅರಿತ ಸುಸಂಸ್ಕೃತ ಸಹಕಾರಿ ತತ್ವಗಳಲ್ಲಿ ಅಚಲವಾದ ನಂಬಿಕೆಯುಳ್ಳ ಅಧ್ಯಕ್ಷರು, ಆಡಳಿತ ಮಂಡಳಿ ದಕ್ಷತೆಯಿಂದ ಕಾರ್ಯನಿರ್ವಹಿಸುತ್ತಿರುವ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತು ಸಿಬ್ಬಂದಿ ಎಲ್ಲದಕ್ಕೂ ಪ್ರಾಮುಖ್ಯವಾಗಿ ಆಸಕ್ತ ಸದಸ್ಯರು ಈ ಸಹಕಾರಿಯ ಬೆನ್ನೆಲಬಾಗಿ ಕಾರ್ಯನಿರ್ವಹಿಸುತ್ತಿರುವುದು ಸಹಕಾರಿಯ ಪ್ರಗತಿಗೆ ಪೂರಕವಾಗಿದೆ.

ಶ್ರೀ ಶರಣಗೌಡ ಜಿ.ಪಾಟೀಲ್ ವ್ಯವಸ್ಥಾಪಕ ನಿರ್ದೇಶಕರು ದಿನಾಂಕ 23/5/2022 ರಂದು ಈ ಸಹಕಾರಿಗೆ ಭೇಟಿ ನೀಡಿ ಸಹಕಾರಿಯ ಕಾರ್ಯಚಟುವಟಿಕೆಗಳ ವೀಕ್ಷಣೆ ಮಾಡಿ ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ಇದೊಂದು ಸಾಧನೆ ಹಾಗೂ ಹೆಮ್ಮೆಯ ವಿಷಯವಾಗಿದೆ. ರಾಜ್ಯದ ಬೇರೆ ಸೌಹಾರ್ದ ಸಹಕಾರಿಗಳು ಸಹ ಈ ನಿಟ್ಟಿನಲ್ಲಿ ಚಿಂತನೆ ಮಾಡಬಹುದಾಗಿದೆ ಎಂದು ತಿಳಿಸಿದರು.

### ಶಾರದಾ ವಿವಿಧೋದ್ದೇಶ ಸೌಹಾರ್ದ ಕೋಲ್ಡ್ ಸ್ಟೋರೇಜ್ ಶಿವಮೊಗ್ಗ

ಶ್ರೀ ಶಾರದಾ ಸೌಹಾರ್ದ ಸಹಕಾರಿಯು ತನ್ನ ಕಾರ್ಯವ್ಯಾಪ್ತಿಯ ಹೊಸನಗರ, ಶಿಕಾರಿಪುರ ಸೋರಬ್ ತಾಲ್ಲೂಕಗಳ ಸದಸ್ಯರ ಶುಂಠಿ ಬೆಳೆಯ ಸಂಗ್ರಹ ವ್ಯವಸ್ಥೆಗೆ ಅನುಕೂಲಕ್ಕಾಗಿ ಅವರ ವಿನಂತಿಯ ಮೇರೆಗೆ ಕರ್ನಾಟಕ ಸರಕಾರದ ಕರ್ನಾಟಕ ಸರಕಾರದ ಕೃಷಿ ಇಲಾಖೆಯ ವರದಿಯನ್ನು ಆಧರಿಸಿ 900 ಹೆಕ್ಟೇರ್ ಜಮೀನಿನಲ್ಲಿ 4400 ಮೆಟ್ರಿಕ್ ಟನ್ ಸಾಮರ್ಥದ ಕೊಲ್ಡ್ ಸ್ಟೋರೇಜ್ನ್ನು ರೂ 10 ಕೋಟಿ ವೆಚ್ಚದಲ್ಲಿ ನಿರ್ಮಿಸಿರುವುದು ಈ ಸಹಕಾರಿಯ ಸಾಧನೆಯ ಮೈಲುಗಲ್ಲು. ಒಟ್ಟು 24,450 ವಿಸ್ತೀರ್ಣದ ಜಾಗದಲ್ಲಿ 18000 ಸ್ಕೇರ ಫೀಟನಲ್ಲಿ 4 ಅಂತಸ್ತಿನ ಒಟ್ಟಾರೆ 72000 ಸ್ಕೇರ್ ಫೀಟ್ ಕಟ್ಟಡದಲ್ಲಿ ಕಾರ್ಯನಿರ್ವಹಿಸಲಾಗುತ್ತಿಧೆ. ಆಧುನಿಕ ತಂತ್ರಜ್ಞಾನವನ್ನು ಸಂಪೂರ್ಣ ಬಳಸಿಕೊಳ್ಳಲಾಗುತ್ತಿದೆ. ಸದಸ್ಯರಿಗೆ ಈ ಬಗ್ಗೆ ಆಗಾಗ್ಗೆ ಮಾಹಿತಿಯನ್ನು ನೀಡಲಾಗುತ್ತಿದೆ. ಈ ಕಟ್ಟಡವನ್ನು ನಿರ್ಮಿಸಲು ಎ.ಪಿ.ಎಮ್.ಸಿ ಯವರಿಂದ 1.2 ಎಕರೆ ಜಾಗವನ್ನು 24,447 ಸ್ಕೇರ್ ಫೀಟ್ ಜಾಗವನ್ನು 10.ಲಕ್ಷ 75,000 ರೂಗಳಿಗೆ ಪಡೆಯಲಾಗಿದೆ.

ಈ ಶೈತ್ಯಾಗಾರ ಪ್ರಾರಂಭದ ವರ್ಷದಲ್ಲಿ 30% ತುಂಬಿತ್ತು. 2 ನೇ ವರ್ಷದಲ್ಲಿ 80% ತುಂಬಿತ್ತು. 3ನೇ ವರ್ಷದಿಂದ 100% ತುಂಬಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ. ಈ ಶೈತ್ಯಾಗಾರದಲ್ಲಿ ಸದಸ್ಯ ರೈತರು ತಮ್ಮ ಶುಂಠಿಯನ್ನು ಇಡುವುದರಿಂದ ಅವರಿಗೆ 50% ರಿಂದ 60% ಶುಂಠಿಯ ಬೆಲೆಯ ಮುಂಗಡವನ್ನು ನೀಡಲಾಗುತ್ತಿದೆ. ಈ ಸೌಲಭ್ಯ ಅವರಿಗೆ ಖಾಸಗಿಯವರಿಂದ ಸಿಗುತ್ತಿರಲಿಲ್ಲ. ಶೈತ್ಯಾಗಾರದಲ್ಲಿ ತಮ್ಮ ವಸ್ತುಗಳನ್ನು ಇಡುವ ಸದಸ್ಯ ರೈತರಿಗೆ ಒಂದು ವರ್ಷಕ್ಕೆ ಒಂದು ಬ್ಯಾಗಿಗೆ ರೂ 200 ಹಾಗೂ 3 ತಿಂಗಳಿಗೆ ಒಂದು ಬ್ಯಾಗಿಗೆ ರೂ 150 ಬಾಡಿಗೆಯನ್ನು ಸಂಗ್ರಹಿಸಲಾಗುವುದು . ಪ್ರಸಕ್ತ ಸಾಲಿನಲ್ಲಿ 63000 ಬ್ಯಾಗುಗಳ ಸಂರಕ್ಷಣೆಯ ಬಾಡಿಗೆಯಿಂದ ರೂ 1,26,00,000 ಆದಾಯ ಸಂಗ್ರಹವಾಗಿದೆ. ಇದರಲ್ಲಿ ವಿಮೆಗಾಗಿ 18 ಲಕ್ಷ ಮತ್ತು ವಿದ್ಯುತ್ತಾಗಿ 33,00,000 ವೆಚ್ಚ ಹೆಚ್ಚಿನದ್ದಾಗಿದೆ. ಇದಕ್ಕಾಗಿ 4 ಕೋಟಿ ರೂಗಳ ಸಾಲ ಮಾಡಿರುವುದರಲ್ಲಿ ಪ್ರತಿ ವರ್ಷ ಅಸಲು ಮತ್ತು ಬಡ್ಡಿ ಸೇರಿ ರೂ 10.00 ಲಕ್ಷ ರುಗಳನ್ನು ಪಾವತಿಸಲಾಗುತ್ತಿದೆ ಈ ವ್ಯವಸ್ಥೆಯಿಂದಾಗಿ ಶುಂಠಿ ಮಾರುಕಟ್ಟೆ ಬೆಲೆ ನಿಯಂತ್ರಣವಾಗಿದೆ. ಸದಸ್ಯರಿಗೆ 100% ವಿಮೆ ಸೌಲಭ್ಯ ನೀಡಲಾಗುತ್ತಿದೆ. ಸರಕು ಇಳಿಸುವ ಹಾಗೂ ಸರಕು ತುಂಬುವ ಸೌಲಭ್ಯವನ್ನು ಸಹ ಸಹಕಾರಿಯಿಂದ ಒದಗಿಸಲಾಗುತ್ತಿದೆ. ಕರ್ನಾಟಕ ಸರಕಾರದ ತೋಟಗಾರಿಕಾ ಇಲಾಖೆಯಿಂದ 1.23 ಲಕ್ಷ ರೂಗಳ ಸಹಾಯ ಧನವನ್ನು ನೀಡಿರುತ್ತಾರೆ

ಇದಲ್ಲದೆ ಅಡಕೆ ಮಾರಾಟದ ಕಮಿಶನ್ ಏಜೆಂಟ್ ಆಗಿ ಕಾರ್ಯನಿರ್ವಹಿಸುತ್ತೇವೆ. ಸಾಂಪ್ರದಾಯಿಕ ಸಾಲ ನೀಡುವುದು ಹಾಗೂ ಡಿಪಾಸಿಟ್ ಸ್ವೀಕರಿಸುವುದರ ಜೊತೆಗೆ ಇವೆಲ್ಲ ವಿವಿಧ ಚಟುವಟಿಕೆಗಳನ್ನು ಶ್ರೀ ಶಾರದಾ ಸೌಹಾರ್ದ ಸಹಕಾರಿ ಮಾಡುತ್ತಿದೆ. ಅಧ್ಯಕ್ಷ ಶ್ರೀ ಶಿವಶಂಕರ ಹೆಚ್.ಎಸ್. ಇವರ ದಕ್ಷ , ಪಾರದರ್ಶಕ ಪ್ರಾಮಾಣಿಕ ಪ್ರಯತ್ನ ಅವರುಗಳ ಜೊತೆಗೆ ಆಡಳಿತ ಮಂಡಳಿಯ ಎಲ್ಲ ಸದಸ್ಯರು ಸಂಪೂರ್ಣ ಸಹಕಾರದಿಂದಾಗಿ ಈ ಎಲ್ಲ ಚಟುವಟಿಕೆಗಳು ಉತ್ತಮವಾಗಿ ಕಾರ್ಯನಿರ್ವಹಿಸುವಂತಾಗಿದೆ ಸದಸ್ಯರು ಕೂಡ ಸಹಕಾರಿಯ ಜೊತೆಗೆ ವ್ಯವಹರಿಸುತ್ತ ನಮ್ಮೆಲ್ಲ ಚಟುವಟಿಕೆಗಳಿಗೆ ಪ್ರೋತ್ಸಾಹಿಸುತ್ತ ತುಂಬ ಸಹಕ–ರಿಸುತ್ತಿದ್ದಾರೆ. ವಿಶೇಷವಾಗಿ ಗಮನಿಸಬೇಕಾದ ವಿಷಯವೆನಂದರೆ ಈ ಯೋಜನೆಯು ಕಾರ್ಯಗತವಾಗಲು ಕರ್ನಾಟಕ ಬ್ಯಾಂಕಿನಿಂದ ಸಾಲಪಡೆಯ ಬೇಕಾದ ಸಂದರ್ಭದಲ್ಲಿ ಈ ಸಹಕಾರಿಯ ಆಡಳಿತ ಮಂಡಳಿಯ ಎಲ್ಲ ಸದಸ್ಯರು ತಮ್ಮ ಸ್ವಂತ ಆಸ್ತಿಗಳನ್ನು ಸಾಲಕ್ಕಾಗಿ ಭದ್ರತೆ ನೀಡಿ ಈ ಯೋಜನೆ ಕಾರ್ಯಗತವಾಗಲು ಸಹಕರಿಸಿರುವುದು ಎಂದು ಸಹಕಾರಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಮಂಜುನಾಥ ಶರ್ಮರವರು ತಿಳಿಸಿದರು.

ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಜಿ.ಪಾಟೀಲ್ ಇವರ ಭೇಟಿಯ ಸಮಯದಲ್ಲಿ ಇವರ ಪತ್ನಿ ಶ್ರೀಮತಿ ಡಾ. ಲಲಿತಾ ಪಾಟೀಲ್, ಶಿವಮೊಗ್ಗ ಜಿಲ್ಲೆಯ ಸೌಹಾರ್ದ ಸಹಕಾರ ಸಂಯೋಜಕ ಶ್ರೀ ಶಶಿಕುಮಾರ ಉಪಸ್ಥಿತರಿದ್ದರು. ಇದಲ್ಲದೆ ಶ್ರೀಯುತ ಶರಣಗೌಡ ಜಿ. ಪಾಟೀಲರವರು ಶಿವಮೊಗ್ಗ ಜಿಲ್ಲೆಯ ಅಮೃತ ದಿನಸಿ ಸೌಹಾರ್ದ ಸಹಕಾರಿ ಗರ್ತಿಕೆರೆ , ಯೋಗಿ ನಾರಾಯಣಗುರು ಸೌಹಾರ್ದ ಸಹಕಾರಿ ಗರ್ತಿಕೆರೆ, ಅಕ್ಷರ ಧಾಮ ಸೌಹಾರ್ದ ಸಹಕಾರಿ ಗರ್ತಿಕೆರೆ ಅಭಯ ವಿವಿಧೋದ್ಧೇಶ ಸೌಹಾರ್ದ ಸಹಕಾರಿ ಹಾದಿಗಲ್ , ಸಮ್ಮಿಲನ ಕೃಷಿ ಸಂಸ್ಕರಣ ಸೌಹಾರ್ದ ಸಹಕಾರಿ ಕೋಟೆಗದ್ದೆಗಳಿಗೆ ಭೇಟಿ ನೀಡಿ ಸಹಕಾರಿ ಮಾರ್ಗದರ್ಶನ ಮಾಡಿದರು.

### ಸಹಕಾರಿಯ ಆರ್ಥಿಕ ವಿವರ :

ಸಹಕಾರಿಯ ಶೇರು ಬಂಡವಾಳ 2,29,52,300/–, ನಿಧಿಗಳು 5,63,02,957, ಠೇವಣಿಗಳು 54,89,53,906, ಸಾಲಗಳು 15,62,49,786, ದುಡಿಯುವ ಬಂಡವಾಳ 78,44,58,949, ಸದಸ್ಯರಿಗೆ ನೀಡಿರುವ ಸಾಲ 49,35,66,368, ಕಟಬಾಕಿ ಶೇಕಡಾ 4.26%, ಎನ್.ಪಿ.ಎ ಶೇಕಡಾ 3.29%



# ಸಹಕಾರಿ ಶಿಕ್ಷಣ ಮತ್ತು ತರಬೇತಿಗೆ ಕೆಲವು ಪರಿಣಾಮಕಾರಿ ಸೂತ್ರಗಳು

– ಶ್ರೀ ಯಶವಂತ ಡೋಂಗ್ರೆ

ಶಿಕ್ಷಣ, ತರಬೇತಿ ಮತ್ತು ಮಾಹಿತಿ ಒಂದು ಪ್ರಮುಖ ಸಹಕಾರಿ ತತ್ವವಾಗಿರುವುದು ನಮಗೆಲ್ಲ ತಿಳಿದ ವಿಷಯ. ಈ ತತ್ವವು ಸಹಕಾರಿ ಚಳುವಳಿಯ ಆರಂಭದಲ್ಲಿ ರೋಶ್‌ಡೇಲ್ ಗುಂಪು ಚರಿಸಿದ ಪ್ರಾಥಮಿಕ ತತ್ವಗಳಲ್ಲಿ ಒಂದಾಗಿದ್ದು, ಇಂದಿಗೂ ಸಹಕಾರಿ ತತ್ವಗಳ ಭಾಗವಾಗಿ ಉಳಿದಿದೆ. "ಸಹಕಾರಿ ಸಂಸ್ಥೆಗಳು ತಮ್ಮ ಸದಸ್ಯರು, ಚುನಾಯಿತ ಪ್ರತಿನಿಧಿಗಳು, ವ್ಯವಸ್ಥಾಪಕರು ಮತ್ತು ಸಿಬ್ಬಂದಿಗಳಿಗೆ ಶಿಕ್ಷಣ ನೀಡುವುದರ ಮೂಲಕ ಅವರುಗಳು ಸಹಕಾರಿ ಮಾದರಿಯನ್ನು ಸರಿಯಾಗಿ ಅರಿಯಲು ಮತ್ತು ತನ್ಮೂಲಕ ತಮ್ಮ ಸಹಕಾರಿ ಸಂಘಗಳ ಉತ್ತಮ ಅಭಿವೃದ್ದಿಗೆ ಪೂರಕವಾಗಿ ಮತ್ತು ಪರಿಣಾಮಕಾರಿಯಾಗಿ ಸಹಕಾರಿ ಸಂಘದ ಚಟುವಟಿಕೆಗಳಲ್ಲಿ ಭಾಗಿವಹಿಸುವಂತೆ ಮಾಡುತ್ತವೆ. ಸಾರ್ವಜನಿಕರಿಗೆ ಅದರಲ್ಲೂ ಯುವಜನತೆ ಮತ್ತು ಅಭಿಪ್ರಾಯ ನಿರೂಪಕ ವರ್ಗದವರಿಗೆ (ಒಪೀನಿಯನ್ ಮೇಕರ್ಸ್) ಸರಿಯಾದ ಮಾಹಿತಿಯನ್ನು ಕ್ಲುಪ್ತವಾಗಿ ನೀಡುವುದರ ಮೂಲಕ ಅವರುಗಳಿಗೆ ಸಹಕಾರಿ ಮಾದರಿಯ ಉಪಯೋಗಗಳನ್ನು ಪರಿಚಯಿಸುತ್ತವೆ" ಎಂದು ಅಂತಾರಾಷ್ಟ್ರೀಯ ಸಹಕಾರಿ ಒಕ್ಕೂಟವು ತನ್ನ ಸಹಕಾರಿ ತತ್ವಗಳ ಅನನ್ಯತೆಯ ನರೂಪಣೆಯಲ್ಲಿ (ಸ್ಟೇಟ್‌ಮೆಂಟ್ ಆಫ್ ಕೋಆಪರೇಟಿವ್ ಇಡೆಂಟಿಟಿ) ತಿಳಿಸಿರುವುದನ್ನು ಗಮನಿಸಬಹುದು. ಆದುದರಿಂದ ಸಹಕಾರಿ ಶಿಕ್ಷಣ, ತರಬೇತಿ ಮತ್ತು ಮಾಹಿತಿ ಹಂಚಿಕೆ ಸಹಕಾರಿ ಸಂಘಟನೆಗಳ ಪ್ರಮುಖ ಚಟುವಟಿಕೆಗಳಲ್ಲಿ ಒಂದಾಗಿದೆ.

ಶಿಕ್ಷಣವು ಹೆಚ್ಚಾಗಿ ಸದಸ್ಯರಿಗಾಗಿ ಮುಖ್ಯವಾಗಿದ್ದು ಇದರ ಒತ್ತು ಸಹಕಾರಿ ತತ್ವಗಳು ಮತ್ತು ಮೌಲ್ಯಗಳ ಬಗ್ಗೆ ಅರಿವು ಮೂಡಿಸುವುದು, ಸದಸ್ಯರ ಪಾತ್ರ ಮತ್ತು ಸಹಕಾರ ಸಂಘಗಳ ವಿವಿಧ ಕಾರ್ಯಚಟುವಟಿಕೆಗಳಲ್ಲಿ ಅವರು ಭಾಗವಹಿಸಲು ಅಗತ್ಯವಾದ ಜ್ಞಾನವನ್ನು ಒದಗಿಸುವುದು ಮತ್ತು ಕಾಲದಿಂದ ಕಾಲಕ್ಕೆ ಬದಲಾಗುವ ಸಹಕಾರಿ ಆಂದೋಲನದ ಸಂರಚನೆ, ಜನರ ಅಗತ್ಯಗಳು, ಸರಕಾರದ ನೀತಿಗಳು, ಕಾನೂನುಗಳು ಇತ್ಯಾದಿಗಳ ಬಗ್ಗೆ ಆಯಾಕಾಲಕ್ಕೆ ಪ್ರಸ್ತುತವಾಗುವ ಮಾಹಿತಿಗಳನ್ನು ಒದಗಿಸುವುದಾಗಿರುತ್ತದೆ. ತರಬೇತಿಯು ಹೆಚ್ಚಾಗಿ ಚುನಾಯಿತ ಪ್ರತಿನಿಧಿಗಳು ಮತ್ತು ಸಿಬ್ಬಂದಿಗಳನ್ನು ಕೇಂದ್ರವಾಗಿಟ್ಟುಕೊಂಡಿರುತ್ತದೆ. ಚುನಾಯಿತ ಪ್ರತಿನಿಧಿಗಳು ಸಹಕಾರಿ ಸಂಘಗಳ ನಾಯಕತ್ವ ವಹಿಸುತ್ತಾರೆ. ಅವರುಗಳಿಗೆ ಸಂಘದ ವ್ಯವಸ್ಥಾಪನಕ್ಕೆ ಸಂಬಂಧಿಸಿದ ಜ್ಞಾನ ಮುಖ್ಯವಾಗುತ್ತದೆ. ಸಭೆಗಳನ್ನು ನಡೆಸುವುದು ಮತ್ತು ಅವುಗಳಲ್ಲಿ ಭಾಗವಹಿಸುವ ಕ್ರಮಗಳು, ನೀತಿಗಳನ್ನು ಚರಿಸುವ ಪ್ರಕ್ರಿಯೆ, ಸಂಘದ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಕಾರ್ಯಯೋಜನೆಗಳನ್ನು ರೂಪಿಸುವುದು ಮುಂತಾದುವುಗಳ ಬಗ್ಗೆ ತರಬೇತಿ ನೀಡಬೇಕಾಗುತ್ತದೆ. ಹಾಗೆಯೇ ಸಿಬ್ಬಂದಿ ವರ್ಗದವರು ತಳಹಂತದಲ್ಲಿ ಯೋಜನೆಗಳನ್ನು ಅನುಷ್ಠಾನಕ್ಕೆ ತರುವವರು ಮತ್ತು ಸದಸ್ಯರೊಂದಿಗೆ ನಿರಂತರ ಸಂಪರ್ಕದಲ್ಲಿರುವವರಾದುದರಿಂದ ಅವರುಗಳಿಗೆ ಸಹಕಾರಿ ವ್ಯವಹಾರ ಮತ್ತು ಇತರ ಚಟುವಟಿಕೆಗಳನ್ನು ಕುರಿತಂತೆ ತಾಂತ್ರಿಕ ಮತ್ತು ಕಾರ್ಯಾನುಷ್ಠಾನಕ್ಕೆ ಸಂಬಂಧಿಸಿದ ತರಬೇತಿ ಅಗತ್ಯವಾಗುತ್ತದೆ. ಉತ್ಪಾದನೆ, ವಿತರಣೆ, ಮಾರಾಟ, ಹಣಕಾಸು, ಲೆಕ್ಕ ಪತ್ರಗಳು ಹೀಗೆ ವಿವಿಧ ತಂತ್ರಜ್ಞಾನ ಮತ್ತು ಕಛೇರಿ ಕೆಲಸಗಳ ಕೌಶಲಗಳು ದೊರೆಯುವಂತಹ ತರಬೇತಿಗಳನ್ನು ಸಿಬ್ಬಂದಿಗೆ ನೀಡಬೇಕಾಗುತ್ತದೆ. ಇನ್ನು ಮಾಹಿತಿಯ ವಿನಿಮಯ ಮತ್ತು ವಿತರಣೆಯು ಹೆಚ್ಚಾಗಿ ಸಹಕಾರಿ ಸಂಘದ ಪರೋಕ್ಷ ಪಾಲುದಾರರನ್ನು ಕೇಂದ್ರೀಕರಿಸಿಕೊಂಡಿರುತ್ತದೆ. ಉದಾಹರಣೆಗೆ ಸರಕಾರದ ವಿವಿಧ ಅಂಗಗಳು, ಇತರೆ ಸಹಕಾರಿ ಸಂಘಗಳು ಅಥವ/ಮತ್ತು ಇತರೆ ವ್ಯವಹಾರ ಸಂಸ್ಥೆಗಳು ಹಾಗೂ ಸಾರ್ವಜನಿಕರು ಇವರುಗಳಿಗೆಲ್ಲ ಕಾಲದಿಂದ ಕಾಲಕ್ಕೆ ಸಹಕಾರಿ ಸಂಘದ ವಿವಿಧ ಚಟುವಟಿಕೆಗಳ ಬಗ್ಗೆ ಮಾಹಿತಿ ನೀಡುವ ಅಗತ್ಯವಿದೆ. ಇದು ಸಹಕಾರಿ ಪದ್ಧತಿಯಬಗ್ಗೆ ಸಾರ್ವಜನಿಕ ವಲಯದಲ್ಲಿ ಸರಿಯಾದ ತಿಳುವಳಿಕೆ ಮೂಡಿಸಲು ಮತ್ತು ಸಹಾನುಭೂತಿ ಮೂಡಿಸಲು ಕಾರಣವಾಗುವುದಲ್ಲದೆ, ಕಾಯಿದೆಗಳನ್ವಯ ವಿವಿಧ ಮೂಲಕಗಳಿಗೆ ನೀಡಬೇಕಾದ ಮಾಹಿತಿಗಳನ್ನು ಒದಗಿಸುತ್ತ, ಸಹಕಾರಿ ಸಂಘವು ಕಾಯಿದೆಗಳನ್ವಯ ಕಾರ್ಯನಿರ್ವಹಿಸುವಂತೆ ಮಾಡುವಲ್ಲಿ ಮುಖ್ಯವಾಗುತ್ತದೆ.

ಮೇಲಿನ ಅಗತ್ಯಗಳ ಹಿನ್ನೆಲೆಯಲ್ಲಿ ಗಮನಿಸಿದಾಗ ಸಹಕಾರಿ ಶಿಕ್ಷಣ, ತರಬೇತಿ ಮತ್ತು ಮಾಹಿತಿ ಹಂಚಿಕೆಗಳನ್ನು ನಿರಂತರವಾಗಿ ಮತ್ತು ಪರಿಣಾಮಕಾರಿಯಾಗಿ ನಿರ್ವಹಿಸಲು ಕಾರ್ಯಯೋಜನೆಯೊಂದು ಅಗತ್ಯವಾಗುತ್ತದೆ. ಈ ಕಾರ್ಯಯೋಜನೆಯನ್ನು ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ನೆಲೆಗಳಲ್ಲಿ ರಚಿಸಿಕೊಂಡು ಸಹಕಾರಿ ಸಂಘಟನೆಗಳು ಕಾರ್ಯನಿರ್ವಹಿಸಬೇಕಾಗುತ್ತದೆ. ಇಂತಹ ಕಾರ್ಯಯೋಜನೆಗೆ ಅನುವಾಗುವಂತೆ ಕೆಲವು ಸಾಧ್ಯತೆಗಳನ್ನು ಕೆಳಗಿನ ಪುಟಗಳಲ್ಲಿ ಹಂಚಿಕೊಳ್ಳಲಾಗಿದೆ.

### ಸದಸ್ಯರ ಹಂತದಲ್ಲಿ ಸಹಕಾರಿ ಶಿಕ್ಷಣ :

ಸಹಕಾರಿ ಶಿಕ್ಷಣವನ್ನು ಸದಸ್ಯರ ಶಿಕ್ಷಣ ಮತ್ತು ಸಾರ್ವಜನಿಕ ಶಿಕ್ಷಣ ಎಂದು ವಿಂಗಡಿಸಿ ಅನುಷ್ಠಾನಗೊಳಿಸುವ್ಯದರಿಂದ ಉತ್ತಮ ಫಲಿತಾಂಶ ನರೀಕ್ಷಿಸಬಹುದು. ಸದಸ್ಯರ ಶಿಕ್ಷಣವು ಈಗಾಗಲೇ ಸಂಘದ ಸದಸ್ಯರಾಗಿರುವವರಿಗಾಗಿದ್ದು, ಇದು ಸದಸ್ಯರಿಗೆ ಸಹಕಾರಿ ಆಂದೋಲನದ ಕುರಿತಂತೆ ಮತ್ತು ಸದಸ್ಯರ ನೆಲೆಚುಲ್ಲಿ ತಮ್ಮ ಹಕ್ಕು ಮತ್ತು ಕರ್ತವ್ಯಗಳ ಬಗ್ಗೆ ತಿಳಿವಳಿಕೆ ನೀಡುವ ಮತ್ತು ಅವರನ್ನು ಸಕ್ರಿಯ ಸದಸ್ಯರನ್ನಾಗಿಸಲು ಪ್ರೋತ್ಸಾಹಿಸುವ ಪ್ರಕ್ರಿಯೆಯಾಗಿರಬೇಕು. ಆದುದರಿಂದ ಈ ಕೆಳಗಿನ ಅಂಶಗಳನ್ನು ಗಮನಿಸಬೇಕಾಗುತ್ತದೆ.

1. ಸಹಕಾರಿ ಶಿಕ್ಷಣವು ರಾಜ್ಯ (ಮಹಾಮಂಡಳ) ಅಥವಾ ಜಿಲ್ಲೆಯ (ಯೂನಿಯನ್) ಮಟ್ಟದಲ್ಲಿ ನಡೆದರೆ ಹೆಚ್ಚಿನ ಸದಸ್ಯರನ್ನು ತಲುಪುವುದು ಸಾಧ್ಯವಾಗುವುದಿಲ್ಲ. ಆದುದರಿಂದ ಸಾಧ್ಯವಾದಷ್ಟೂ ಸದಸ್ಯ ಶಿಕ್ಷಣವನ್ನು ಸ್ಥಳೀಯವಾಗಿ ಅಥವಾ ಪ್ರತಿ ಸಹಕಾರಿ ಸಂಘದ

ಮಟ್ಟದಲ್ಲಿ ನಡೆಸುವುದು ಅಗತ್ಯ.

2. ಪ್ರತಿ ಸಹಕಾರಿ ಸಂಘವೂ ಸದಸ್ಯ ಶಿಕ್ಷಣಕ್ಕಾಗಿ ಒಂದು ನಿಧಿಯನ್ನು ಹೊಂದುವುದು ಅಥವ ಸಂಘದ ವಾರ್ಷಿಕ ಆಯವ್ಯದಲ್ಲಿ ಸದಸ್ಯ ಚಟುವಟಿಕೆಗಳಿಗಾಗಿ ಒಂದು ಮೊತ್ತವನ್ನು ನಿಗದಿಪಡಿಸುವುದು ಅಗತ್ಯ.
3. ಉಪನ್ಯಾಸಗಳು ಮತ್ತು ಕ್ಷೆರ್ಯಾಗಾರ/ವಿಚಾರಸಂಕಿರಣಗಳ ಮಾದರಿಯಲ್ಲಿ ಸದಸ್ಯ ಶಿಕ್ಷಣವನ್ನು ನೀಡಬಹುದಾದರೂ, ಇವುಗಳ ಪರಿಣಾಮ ದೀರ್ಘಾವಧಿಯದಾಗಿರುವುದಿಲ್ಲ ಮತ್ತು ಎಲ್ಲ ಸದಸ್ಯರೂ ಈ ಮಾರ್ಗಗಳಿಂದ ಕಲಿಯುವುದು ಸಾಧ್ಯವಾಗುವುದಿಲ್ಲ. ಆದುದರಿಂದ ಸದಸ್ಯರ ಅಗತ್ಯಗಳ ಆಧಾರದಲ್ಲಿ ವಿವಿಧ ರೀತಿಯ ಕಾರ್ಯಕ್ರಮಗಳನ್ನು ಆಯೋಜಿಸಬೇಕಾಗುತ್ತದೆ.
4. ವರ್ಷದಲ್ಲಿ ಮೂರು ಅಥವ ನಾಲ್ಕು ಬಾರಿ ಸದಸ್ಯರು ಒಂದೆಡೆ ಸೇರುವಂತಹ ಕಾರ್ಯಕ್ರಮಗಳನ್ನು ಪ್ರತಿ ಸಹಕಾರಿ ಸಂಘದ ಮಟ್ಟದಲ್ಲಿ ಸಂಘಟಿಸುವ್ಯದರಿಂದ ಸದಸ್ಯ ಶಿಕ್ಷಣದ ಆಶಯಗಳನ್ನು ಸುಲಭವಾಗಿ ತಲುಪಬಹುದು.
5. ಸದಸ್ಯರ ಮಕ್ಕಳು ಮತ್ತು ಕುಟುಂಬದ ಸದಸ್ಯರು ಭಾಗವಹಿಸುವಚಿತಹ ಮನರಂಜನೆಯ ಅಥವಾ ಸ್ಪರ್ಧಾತ್ಮಕ ಕಾರ್ಯಕ್ರಮಗಳನ್ನು ಸಂಘಟಿಸಿ ಇಚಿತಹ ಕಾರ್ಯಕ್ರಮಗಳ ನಡುವೆ ಸದಸ್ಯರ ಜ್ಞಾನಾರ್ಜನೆಯು ಸಾಧ್ಯವಾಗುವಚಿತಹ ಅಂಶಗಳನ್ನು ಸೇರಿಸಿಕೊಳ್ಳುವುದು ಒಳ್ಳೆಯದು.
6. ಸಣ್ಣ ಸಣ್ಣ ಸಹಕಾರಿ ಸಂಘಗಳಾದರೆ ಎರಡು ಅಥವಾ ಮೂರು ಸಹಕಾರಿ ಸಂಘಗಳು ಒಟ್ಟಾಗಿ ತಮ್ಮ ಸದಸ್ಯರಿಗೆ ಶೈಕ್ಷಣಿಕ ಕಾರ್ಯಕ್ರಮಗಳನ್ನು ಏರ್ಪಡಿಸಬಹುದು.
7. ಪ್ರತಿ ಸಹಕಾರಿ ಸಂಘದಲ್ಲಿಯೂ ಸಹಕಾರಿ ತತ್ವ ಮತ್ತು ಮೌಲ್ಯಗಳನ್ನು ಬಿತ್ತರಿಸುವ ಬೋರ್ಡುಗಳು ಅಥವ ಫಲಕಗಳನ್ನು ಪ್ರದರ್ಶಿಸಬಹುದು.
8. ಅವಕಾಶವಿರುವಲ್ಲಿ ಸದಸ್ಯ ಚಟುವಟಿಕೆ ಕೊಠಡಿಗಳನ್ನು ಸಹಕಾರಿ ಸಂಘದ ಮಟ್ಟದಲ್ಲಿ ಹೊಂದುವುದು ಮತ್ತು ಸದಸ್ಯರು ತಮಗೆ ಸಮಯವಿದ್ದಾಗಲೆಲ್ಲ ಅಲ್ಲಿ ಕಲೆತು ಚರ್ಚಿಸಲು ಅನುವು ಮಾಡಿಕೊಡಬಹುದು ಮತ್ತು ಅಂತಹ ಕೊಠಡಿಗಳಲ್ಲಿ ಸಹಕಾರಿ ವಿಷಯಗಳ ಮಾಹಿತಿಗಳನ್ನು ನೀಡುವ ಪುಸ್ತಕಗಳು ಮತ್ತು ಇತರೆ ಬೋಧನಾ ವಸ್ತುಗಳನ್ನು ಇಡಬಹುದು.
9. ಇಂದಿನ ದಿನಗಳಲ್ಲಿ ಹೆಚ್ಚಿನವರು ಸ್ಮಾರ್ಟ್‌ಫೋನ್‌ಗಳನ್ನು ಹೊಂದಿರುವ್ಯದರಿಂದ ಮತ್ತು ಸಾಮಾಜಿಕ ಜಾಲತಾಣಗಳನ್ನು ಬಳಸುವ್ಯದರಿಂದ – ವಾಟ್ಸಪ್, ಫೇಸ್‌ಬುಕ್ ಮುಂತಾದುವುಗಳು ಹಾಗೂ ಇಮೇಲ್‌ಗಳ ಮೂಲಕವೂ ಸದಸ್ಯರಿಗೆ ಆಗಿಂದಾಗ್ಗೆ ಉಪಯುಕ್ತ ಮಾಹಿತಿಗಳನ್ನು ನೀಡಬಹುದು.
10. ವಿವಿಧೆಡೆಗಳಲ್ಲಿ ನಡೆಯುವ ಸಹಕಾರಿ ಆಂದೋಲನವನ್ನು ಕುರಿತ ಕಾರ್ಯಕ್ರಮಗಳಬಗ್ಗೆ ಮಾಹಿತಿಯನ್ನು ಸದಸ್ಯರಿಗೆ ನೀಡುತ್ತ ಅವರನ್ನು ಅಚಿತಹ ಕಾರ್ಯಕ್ರಮಗಳಲ್ಲಿ ಭಾಗವಹಿಸುವಚಿತೆ ಪ್ರೋತ್ಸಾಹಿಸಬಹುದು.

**ಸಾರ್ವಜನಿಕ ನೆಲೆಯ ಸಹಕಾರಿ ಶಿಕ್ಷಣ:**

ಸದಸ್ಯರಿಗೆ ಶಿಕ್ಷಣ ನೀಡುವಂತೆಯೇ ಭಾವೀ ಸದಸ್ಯರಿಗೆ ಮತ್ತು ಸದಸ್ಯರಲ್ಲದ ಸಾರ್ವಜನಿಕರಿಗೆ ಕೂಡ ಸಹಕಾರಿ ಶಿಕ್ಷಣ ದೊರೆಯುವಂತೆ ಮಾಡುವುದು ಸಹಕಾರಿ ಆಂದೋಲನದ ಸುಸ್ಥಿರತೆಯ ದೃಷ್ಟಿಯಿಂದ ಮುಖ್ಯವಾಗುತ್ತದೆ. ಆದುದರಿಂದ ಈ ಕೆಳಗಿನ ಪ್ರಯತ್ನಗಳತ್ತ ಗಮನಹರಿಸಬಹುದು.

1. ಸಾರ್ವಜನಿಕ ನೆಲೆಯ ಸಹಕಾರಿ ಶಿಕ್ಷಣದ ಚಟುವಟಿಕೆಗಳನ್ನು ಬಹುತೇಕ ಮಹಾಮಂಡಳಗಳು ಮತ್ತು ಜಿಲ್ಲಾ ಮಟ್ಟದ ಯೂನಿಯನ್‌ಗಳು ನಡೆಸಬೇಕಾಗುತ್ತದೆ. ಈ ಕುರಿತಂತೆ ಒಂದು ನಿರ್ದಿಷ್ಟ ಕಾರ್ಯ ಯೋಜನೆಯನ್ನು ಮಹಾಮಂಡಳಗಳು ರಚಿಸಿಕೊಳ್ಳಬೇಕು.
2. ಆಗಾಗ್ಗೆ ಪತ್ರಿಕೆಗಳು ಮತ್ತು ಇತರೆ ಮಾಧ್ಯಮಗಳ ಮೂಲಕ ಸಹಕಾರಿ ಸಂಘಟನೆಗಳ ಬಗ್ಗೆ ಮಾಹಿತಿಗಳನ್ನು ಮತ್ತು ಶೈಕ್ಷಣಿಕ ಬರಹಗಳನ್ನು ಜನರಿಗೆ ತಲುಪಿಸಲು ಪ್ರಯತ್ನಿಸಬೇಕು.
3. ಟೆಲಿವಿಷನ್ ಒಂದು ಅತ್ಯಂತ ಪರಿಣಾಮಕಾರಿ ಮಾಧ್ಯಮವಾದುದರಿಂದ ಕಾಲಕಾಲಕ್ಕೆ ಸಹಕಾರಿ ಆಂದೋಲನದ ವಿಷಯಗಳು, ಸಹಕಾರಿ ಸಂಘಗಳ ಕುರಿತಂತೆ ಡಾಕ್ಯುಮೆಂಟರಿಗಳು, ಜಾಗತಿಕ ಸಹಕಾರಿ ಚಳುವಳಿಯ ವಿದ್ಯಮಾನಗಳು ಇವುಗಳನ್ನೊಳಗೊಂಡ ಕಾರ್ಯಕ್ರಮಗಳನ್ನು ಈ ಮಾಧ್ಯಮದ ಮೂಲಕ ಸಾರ್ವಜನಿಕರಿಗೆ ತಲುಪಿಸಲು ಪ್ರಯತ್ನಿಸಬೇಕು.
4. ವಿಶೇಷವಾಗಿ ಯುವಕರು ಮತ್ತು ಮಹಿಳೆಯರನ್ನು ಗಮನದಲ್ಲಿರಿಸಿಕೊಂಡು ವಿವಿಧ ಸಂಘ ಸಂಸ್ಥೆಗಳು ಮತ್ತು ಶಿಕ್ಷಣ ಸಂಸ್ಥೆಗಳ ಮಟ್ಟದಲ್ಲಿ ಸಹಕಾರಿ ವಿಷಯಗಳನ್ನು ಕೇಂದ್ರವಾಗಿಟ್ಟುಕೊಂಡು ಕಾರ್ಯಕ್ರಮಗಳನ್ನು ನಡೆಸಬೇಕು.
5. ಸಾಮಾನ್ಯ ಪಠ್ಯದಲ್ಲಿ ಸಹಕಾರಿ ವಿಷಯಗಳನ್ನು ಸೇರಿಸಲು ಶಿಕ್ಷಣ ಇಲಾಖೆ ಮತ್ತು ವಿಶ್ವವಿದ್ಯಾನಿಲಯಗಳೊಂದಿಗೆ ಸಂವಹನ ನಡೆಸಿ ಪ್ರಯತ್ನಿಸಬಹುದು. ಇದು ಸ್ವಲ್ಪ ಕಠಿಣವಾದ ಪ್ರಕ್ರಿಯೆಯಾಗಿದ್ದು ಸುಲಭವಾಗಿ ನೆರವೇರಲಾರದು. ಆದರೂ ನಿರಂತರ ಪ್ರಯತ್ನ ಅಗತ್ಯ.
6. ಶಾಲಾ ಕಾಲೇಜು ಮಟ್ಟದಲ್ಲಿ ಸಂಸ್ಥೆಯ ಎಲ್ಲ ಸದಸ್ಯರೂ, ಅಂದರೆ ವಿದ್ಯಾರ್ಥಿಗಳು, ಬೋಧಕ ವರ್ಗದವರು ಮತ್ತು ಬೋಧಕೇತರ ಸಿಬ್ಬಂದಿಗಳು ಸದಸ್ಯರಾಗಿರುವಂತಹ ವಿವಿಧೋದ್ದೇಶ ಸಹಕಾರಿ ಸಂಘಗಳನ್ನು ಸ್ಥಾಪಿಸುವುದರಿಂದ, ಎಲ್ಲರೂ ಭಾಗವಹಿಸುವ ಪ್ರಕ್ರಿಯೆಯ ಮೂಲಕ ಸಹಕಾರದ ಪ್ರಾಥಮಿಕ ಅಂಶಗಳನ್ನು ಅರಿಯುವುದು ಸಾಧ್ಯವಾಗುತ್ತದೆ.
7. ಸಾರ್ವಜನಿಕರ ಆಸಕ್ತಿಯ ವಿಷಯಗಳನ್ನು ಕುರಿತಂತೆ ಮತ್ತು ಸಾರ್ವಜನಿಕರ ಕುಂದು ಕೊರತೆಗಳನ್ನು ಕುರಿತಂತೆ ಸಹಕಾರಿ ಸಂಘಗಳು ಕಾಲದಿಂದ ಕಾಲಕ್ಕೆ ಸಹಾಯ ಮಾಡುವುದು ಮತ್ತು ಅಂತಹ ವಿಷಯಗಳನ್ನು ಮುನ್ನೆಲೆಗೆ ತಂದು ಸರಕಾರ ಮತ್ತು ಸಂಬಂಧಿತ ಸಂಸ್ಥೆಗಳ ಗಮನ ಸೆಳೆಯುವ ಕೆಲಸಗಳನ್ನು ಸಹಕಾರಿ ಮಹಾಮಂಡಳ/ಯೂನಿಯನ್‌ಗಳು ನಡೆಸಬಹುದು.

**ಚುನಾಯಿತ ಪ್ರತಿನಿಧಿಗಳಿಗೆ ಸಹಕಾರಿ ತರಬೇತಿ:**

ಚುನಾಯಿತ ಪ್ರತಿನಿಧಿಗಳು ಸಹಕಾರ ಸಂಘದ ಆಡಳಿತ ಮಂಡಳಿಯ ಸದಸ್ಯರಾಗಿ, ಉಪಸಮಿತಿಗಳ ಅಧ್ಯಕ್ಷರು ಅಥವ ಸದಸ್ಯರಾಗಿ ಮತ್ತು ಕಾಲಕ್ರಮದಲ್ಲಿ ಸಂಘದ ಉಪಾಧ್ಯಕ್ಷ ಅಥವ ಅಧ್ಯಕ್ಷರಾಗಿ ಕೆಲಸ ನಿರ್ವಹಿಸಬೇಕಾದವರು. ಸಹಜವಾಗಿಯೇ ಇವರುಗಳಿಗೆ ಸಹಕಾರಿ ತತ್ವ, ಮೌಲ್ಯ ಮತ್ತಿತರ ವಿಷಯಗಳಷ್ಟೇ ಮುಖ್ಯವಾಗಿ ಆಡಳಿತಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ಜ್ಞಾನವಿರಬೇಕಾಗುತ್ತದೆ. ಆದುದರಿಂದ ಶಿಕ್ಷಣದಷ್ಟೇ

ಮುಖ್ಯವಾಗಿ ತರಬೇತಿಯೂ ಇವರುಗಳಿಗೆ ಅಗತ್ಯವಾಗುತ್ತದೆ. ಚುನಾಯಿತ ಪ್ರತಿನಿಧಿಗಳ ತರಬೇತಿಯ ಕುರಿತಂತೆ ಈ ಕೆಳಗಿನ ಅಂಶಗಳನ್ನು ಅಳವಡಿಸಿಕೊಳ್ಳಬಹುದು.

1. ರಾಜ್ಯ ಮತು ಜಿಲ್ಲಾ ಮಟ್ಟದಲ್ಲಿ ಹಲವು ಸಹಕಾರಿ ಸಂಘಗಳ ಆಡಳಿತ ಮಂಡಳಿಯ ಸದಸ್ಯರನ್ನು ಒಟ್ಟುಗೂಡಿಸಿ ತರಬೇತಿ ಕಾರ್ಯಕ್ರಮಗಳನ್ನು ನಡೆಸಬಹುದು. ಈ ತರಬೇತಿಗಳು ಮುಖ್ಯವಾಗಿ ಮೊದಲಬಾರಿಗೆ ಆಡಳಿತ ಮಂಡಳಿಯ ಸದಸ್ಯರಾದವರನ್ನು ಗಮನದಲ್ಲಿರಿಸಿಕೊಂಡು ನಡೆಸಬೇಕು. ಆಡಳಿತ ಮಂಡಳಿಯ ಸದಸ್ಯರ ಹಕ್ಕುಗಳು ಮತ್ತು ಕರ್ತವ್ಯಗಳು, ಸಭೆಗಳಲ್ಲಿ ಭಾಗವಹಿಸುವ ಪ್ರಕ್ರಿಯೆ, ಕಾಯಿದೆಗಳ ಮುಖ್ಯ ಅಂಶಗಳು ಮುಂತಾದುಗಳು ಈ ತರಬೇತಿಗಳಲ್ಲಿ ಮುಖ್ಯ ವಿಷಯಗಳಾಗಬೇಕು.
2. ಸಹಕಾರಿ ಅನನ್ಯತೆಗೆ ಬದ್ಧರಾಗಿದ್ದುಕೊಂಡೇ ಸಂಘದ ವ್ಯವಹಾರವನ್ನು ನಡೆಸುವ ವಿಧಿವಿಧಾನಗಳಬಗ್ಗೆ ಈ ತರಬೇತಿಗಳಲ್ಲಿ ವಿಶೇಷ ಗಮನಹ–ರಿಸಬೇಕು.
3. ಇಂತಹ ತರಬೇತಿಗಳಲ್ಲಿ ಸರಕಾರದ ಅಧಿಕಾರಿಗಳು ಮತ್ತು ಈಗಾಗಲೇ ಸಹಕಾರಿ ಸಂಸ್ಥೆಗಳ ಆಡಳಿತದಲ್ಲಿ ದೀರ್ಘ ಅನುಭವಹೊಂದಿರುವ ಸಹಕಾರಿ ನಾಯಕರುಗಳನ್ನು ಸಂಪನ್ಮೂಲ ವ್ಯಕ್ತಿಗಳನ್ನಾಗಿ ಆಹ್ವಾನಿಸುವುದು ಒಳ್ಳೆಯದು.
4. ಚುನಾಯಿತ ಪ್ರತಿನಿಧಿಗಳು ಆಗಿಂದಾಗ್ಗೆ ಕೆಲವು ಯಶಸ್ವಿ ಸಹಕಾರಿ ಸಂಘಗಳಿಗೆ ಭೇಟಿಕೊಟ್ಟು ಅಲ್ಲಿಯ ಆಡಳಿತದ ವಿವಿಧ ವಿಷಯಗಳನ್ನು ಖುದ್ದಾಗಿ ಗಮನಿಸುವ ಮೂಲಕ ಅಗತ್ಯ ಜ್ಞಾನ ಪಡೆಯುವಂತೆಯೂ ಕಾರ್ಯಕ್ರಮಗಳನ್ನು ಸಂರಚಿಸಬಹುದು.
5. ಕೆಲವು ಸಹಕಾರಿ ವ್ಯವಸ್ಥಾಪನ ಸಂಸ್ಥೆಗಳು ಮತ್ತು ಐಐಎಂನಂತಹ ಸಂಸ್ಥೆಗಳು ಕೂಡ ಆಗಾಗ್ಗೆ ವ್ಯವಹಾರ ಸಂಸ್ಥೆಗಳ ವ್ಯವಸ್ಥಾಪನವನ್ನು ಕುರಿತಂತೆ ಅಲ್ಪಾವಧಿ ಕಾರ್ಯಕ್ರಮಗಳನ್ನು ನಡೆಸುತ್ತಿರುತ್ತವೆ. ಇಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸುವಂತೆ ಚುನಾಯಿತ ಸದಸ್ಯರನ್ನು ಉತ್ತೇಜಿಸಿ ಆ ಮೂಲಕವೂ ಉತ್ತಮ ತರಬೇತಿ ದೊರೆಯುವಂತೆ ಮಾಡಬಹುದು.

### ಸಿಬ್ಬಂದಿಗಳಿಗೆ ತರಬೇತಿ:

ಸಿಬ್ಬಂದಿ ತರಬೇತಿ ಒಂದು ನಿರಂತರ ಪ್ರಕ್ರಿಯೆ. ಸಿಬ್ಬಂದಿಗಳು ಪ್ರತಿನಿತ್ಯ ನಡೆಸುವ ಹಲವು ಕೆಲಸಕಾರ್ಯಗಳಿಗೆ ಸಂಬಂಧಿಸಿದಂತೆ ಬದಲಾವಣೆಗಳು ಆಗುತ್ತಲೇ ಇರುತ್ತವೆ. ಆದುದರಿಂದ ಅವರುಗಳಿಗೆ ಬೇರೆ ಬೇರೆ ಕೌಶಲ್ಯಗಳ ಅಗತ್ಯವಿರುತ್ತದೆ. ಇದನ್ನು ಮನಗಂಡು ಬದಲಾಗುತ್ತಿರುವ ಪರಿಸ್ಥಿತಿಗೆ ಹೊಂದಿಕೊಳ್ಳಲು ಅನುವಾಗುವ ನಿಟ್ಟಿನಲ್ಲಿ ಸಿಬ್ಬಂದಿ ತರಬೇತಿಯನ್ನು ನಡೆಸುವ ಕುರಿತಂತೆ ಈ ಕೆಳಗಿನ ಮಾರ್ಗೋಪಾಯಗಳನ್ನು ಅಳವಡಿಸಿಕೊಳ್ಳಬಹುದು.

1. ಸಿಬ್ಬಂದಿ ತರಬೇತಿಯು ಮೂಲಭೂತವಾಗಿ ಸಹಕಾರಿ ಸಂಸ್ಥೆಯ ವ್ಯವಹಾರಗಳ ದೈನಂದಿನ ಕಾರ್ಯ ಚಟುವಟಿಕೆಗಳಿಗೆ ಸಂಬಂಧಿಸಿದ ಜ್ಞಾನ ಮತ್ತು ಕೌಶಲಗಳಿಗೆ ಸಂಬಂಧಿಸಿದುದಾಗಿರಬೇಕು.
2. ಹಾಗೆಯೇ ಸಹಕಾರಿ ಸಂಘಗಲ ಸಿಬ್ಬಂದಿಯು ಖಾಸಗಿ ಅಥವ ಸರಕಾರಿ ಸಂಸ್ಥೆಗಳ ಸಿಬ್ಬಂದಿಗಳಿಗಿಂದ ಹೇಗೆ ಭಿನ್ನ ಮತ್ತು ಅವರ ನಿರ್ದಿಷ್ಟ ಗುರಿ, ಹಕ್ಕು ಮತ್ತು ಬಾಧ್ಯತೆಗಳೇನು ಎನ್ನುವುದನ್ನು ತಿಳಿಸುವ ತರಬೇತಿಯೂ ಮುಖ್ಯವಾಗುತ್ತದೆ.
3. ಸಹಕಾರಿ ಸಂಸ್ಥೆಗಳು ವೃತ್ತಿಪರತೆಯನ್ನು ಸಾಧಿಸುವುದು ಬಹು ಮುಖ್ಯ. ಇದು ಸಾಧ್ಯವಾಗಬೇಕಾದರೆ ಸಿಬ್ಬಂದಿಗೆ ಆಯಾ ಕಾಲಘಟ್ಟದಲ್ಲಿ ಅನ್ವಯವಾಗುವ ಕೌಶಲಗಳಲ್ಲಿ ತರಬೇತಿ ಬಹು ಮುಖ್ಯ. ಈ ಹಿನ್ನೆಲೆಯಲ್ಲಿ ಗಮನಿಸಿದಾಗ ತಂತ್ರಜ್ಞಾನದ ಬಳಕೆ, ಕಾಯಿದೆ/ಕಾನೂನುಗಳಲ್ಲಿನ ಬದಲಾವಣೆಗಳು, ವಿವಿಧ ವ್ಯವಹಾರಗಳಿಗೆ ಸಂಬಂಧಿಸದಂತೆ ಆಗುತ್ತಿರುವ ಬದಲಾವಣೆಗಳು, ಕಾಲದಿಂದ ಕಾಲಕ್ಕೆ ಬದಲಾಗುವ ಗ್ರಾಹಕರ/ಸದಸ್ಯರ ಅಗತ್ಯಗಳು ಮತ್ತು ಬೇಡಿಕೆಗಳು ಮುಂತಾದುವುಗಳ ಜೊತೆಗೆ ಸದಸ್ಯರೊಡನೆ ಸಂವಹನ ನಡೆಸುವ ಕುರಿತು ಕೂಡ ತರಬೇತಿ ಕಾರ್ಯಕ್ರಮಗಳು ಆಗತ್ಯ.
4. ಸಿಬ್ಬಂದಿ ತರಬೇತಿಯನ್ನು ನಿರ್ದಿಷ್ಟ ತರಬೇತಿ ಸಂಸ್ಥೆಗಳಲ್ಲಿ ನಡೆಸುವುದು ಹೆಚ್ಚು ಸೂಕ್ತ. ಸಿಬ್ಬಂದಿಗಳಿಗೆ ತರಬೇತಿ ಎನ್ನುವುದು ಕೇವಲ ಹೊಸತನ್ನು ಕಲಿಯುವ ಪ್ರಕ್ರಿಯೆ ಮಾತ್ರವಲ್ಲದೆ ತಮ್ಮ ದಿನನಿತ್ಯದ ಕೆಲಗಳ ಏಕತಾನತೆ ಮತ್ತು ಶ್ರಮದಿಂದ ಸ್ವಲ್ಪ ಕಾಲ ಬಿಡುಗಡೆ ಹೊಂದುವ ಮತ್ತು ಆ ಮೂಲಕ ಹೆಚ್ಚಿನ ಉತ್ತೇಜನ ಪಡೆಯುವ ಪ್ರಕ್ರಿಯೆ ಕೂಡ ಎನ್ನುವುದನ್ನು ನೆನಪಿಡಬೇಕು.
5. ಅಗತ್ಯದ ಸಂದರ್ಭಗಳಲ್ಲಿ ತರಬೇತುದಾರರನ್ನು/ಸಂಪನ್ಮೂಲ ವ್ಯಕ್ತಿಗಳನ್ನು ಸಂಘಕ್ಕೆ ಆಹ್ವಾನಿಸಿ ಕೆಲಸದ ವಾತಾವರಣದಲ್ಲಿಯೇ ಪ್ರಾಯೋಗಿಕ ತರಬೇತಿ ನೀಡುವ ಅಗತ್ಯವೂ ಇರುವುದನ್ನು ಗುರುತಿಸಿ ಅದರಂತೆ ತರಬೇತಿ ಕಾರ್ಯಕ್ರಮಗಳನ್ನು ಸಂಚರಿಸಬೇಕು.

### ವಿಸ್ತೃತ ನೆಲೆಯಲ್ಲಿ ಮಾಹಿತಿ ನೀಡುವಿಕೆ/ಹಂಚಿಕೊಳ್ಳುವಿಕೆ:

ಸಹಕಾರಿ ತತ್ವ 5ರಲ್ಲಿ ತಿಳಿಸಿರುವಂತೆ ಸಹಕಾರಿ ಸಂಘಟನೆಗಳು ಕೇವಲ ಶಿಕ್ಷಣ ಮತ್ತು ತರಬೇತಿಗಳು ಮಾತ್ರವಲ್ಲದೆ, ಮಾಹಿತಿ ನೀಡಿಕೆ ಅಥವ ಮಾಹಿತಿ ಹಂಚಿಕೊಳ್ಳುವಿಕೆಯ ಬಗ್ಗೆಯೂ ಕಾರ್ಯಪ್ರವೃತ್ತರಾಗಬೇಕು. ಮಾಹಿತಿ ನೀಡಿಕೆ/ಹಂಚಿಕೆಯು ಸಹಕಾರಿ ಸಂಸ್ಥೆಗಳ ಪರಿಸ್ಥಿತಿಯನ್ನು ಜನರಿಗೆ ತಿಳಿಸುವುದರ ಜೊತೆಗೆ ಸಹಕಾರಿ ಆಡಳಿತದಲ್ಲಿ ಪಾರದರ್ಶಕತೆಯನ್ನು ಸಾಧ್ಯವಾಗಿಸುವ ಮೂಲಕ ಸಾರ್ವಜನಿಕ ವಲಯದಲ್ಲಿ ಸಹಕಾರಿ ಸಂಸ್ಥೆಗಳ ಬಗ್ಗೆ ಉತ್ತಮ ಅಭಿಪ್ರಾಯ ಮೂಡುವಂತೆ ಮಾಡುವಲ್ಲಿ ಸಹಕರಿಸುತ್ತದೆ. ಈ ನಿಟ್ಟಿನಲ್ಲಿ ಕೆಳಗಿನ ಕೆಲವು ಉಪಕ್ರಮಗಳನ್ನು ಪ್ರಯತ್ನಿಸಬಹುದು.

1. ಪ್ರತಿ ಸಹಕಾರಿ ಸಂಘವು ತನ್ನ ಅಂತರ್ಜಾಲ ತಾಣವನ್ನು (ವೆಬ್ ಸೈಟ್) ಹೊಂದುವುದು ಅತಿ ಅಗತ್ಯ. ಇದರಿಂದಾಗಿ ಸಾರ್ವಜನಿಕರಿಗೆ ಸಹಕಾರಿ ಸಂಘದ ಬಗ್ಗೆ ಹಲವಾರು ಮಾಹಿತಿಗಳು ಸುಲಭದಲ್ಲಿ ಲಭ್ಯವಾಗುತ್ತದೆ. ಇಂದಿನ ತಂತ್ರಜ್ಞಾನ ಯುಗದಲ್ಲಿ ಇಂತಹ ಜಾಲತಾಣಗಳು ಸಹಕಾರಿ ಸಂಸ್ಥೆಗಳು ಕಾಲಮಾನದ ಅಗತ್ಯಗಳಿಗನುಸಾರವಾಗಿ ಕೆಲಸ ನಿರ್ವಹಿಸುತ್ತಿವೆ ಎನ್ನುವ ಅಭಿಪ್ರಾಯವನ್ನು ಬಲಗೊಳಿಸುತ್ತದೆ.
2. ಜಾಲತಾಣಗಳು ಸದಸ್ಯರೊಡನಿನ ಸಂವಹನಕ್ಕೂ ಮತ್ತು ಹಲವಾರು ವ್ಯವಹಾರ ಚಟುವಟಿಕೆಗಳಿಗೂ ಉತ್ತಮ ಸಾಧನವಾಗುತ್ತದೆ. ಸದಸ್ಯ–ರಿಗೆ ತಿಳಿಸಬೇಕಾದ ಮಾಹಿತಿಗಳ ವಿವರಗಳನ್ನು ವೆಬ್‌ಸೈಟ್ ನಲ್ಲಿ ಪ್ರಕಟಿಸಿದರೆ, ತಮಗೆ ಅನುಕೂಲವಾದಾಗ ಸದಸ್ಯರು ಸಂಬಂಧಿತ ಮಾಹಿತಿಗಳನ್ನು ಪಡೆಯುವುದು ಸಾಧ್ಯವಾಗುತ್ತದೆ.
3. ಸಹಕಾರಿ ಸಂಘಗಳು ಕಾಲ ಕಾಲಕ್ಕೆ ತಮ್ಮ ಸಂಘದ ವ್ಯವಹಾರ, ಹಣ–

ತಂನೇ ಪುಟಕ್ಕೆ.....

# ಆಹಾರ ಆರೋಗ್ಯ

– ಅನೂರಾಧ ಶ್ರೀಧರ್

ನಲ್ವತ್ತೈದರ ನಾರಾಯಣನಿಗೆ ನಾಲಿಗೆ ಚಪಲ ಜಾಸ್ತಿ ಕಂಡದ್ದನ್ನೆಲ್ಲ ತಿನ್ನಬೇಕು ಎನಿಸುತ್ತದೆ. ಆದರೆ ಆಗಲೇ ಶರೀರದಲ್ಲಿ ಸೇರಿರುವ ಬಿ.ಪಿ, ಶುಗರ್ ಹಾಗೆ ತಿನ್ನಲು ಬಿಟ್ಟಾವೇ?

ಅರವತ್ತರ ಅಂಬುಜಮ್ಮನಿಗೆ ಆಹಾರದ ಮೇಲೆ ಪ್ರೀತಿಯೇ ನೆನಸಿಕೊಂಡದ್ದನ್ನೆಲ್ಲಾ ಮಾಡಿ ತಿನ್ನುವ ತರಾತುರಿ ತಿಂದ ಮೇಲೆ ಪ್ರಾರಂಭ ಮಂಡಿನೋವು, ಸೊಂಟವೋವು ಇತ್ಯಾದಿ.

ಹಾಗಂದರೇನು ಅರ್ಥ ನಾವು ತಿನ್ನುವ ಆಹಾರವೇ ನಮಗೆ ಅನಾರೋಗ್ಯ ತಂದೊಡ್ಡುತ್ತಿದೆಯೇ? ಹೇಗೆ ತಿಂದರೂ ಏನೇ ತಿಂದರೂ ಎಷ್ಟೇ ತಿಂದರೂ ಕಡೆಯ ಫಲಿತಾಂಶ ನೋವು ಮತ್ತು ಅನಾರೋಗ್ಯ ಹೀಗೇಕೆ ?

ಒಮ್ಮೆ ಯೋಚಿಸಿ ನೋಡಿ ನಿಮ್ಮ ಬಾಲ್ಯದ ದಿನಗಳ ನೆನಪು ಮಾಡಿಕೊಳ್ಳಿ 20 ಮೈಲುಗಳ ದೂರವನ್ನು ಸೈಕಲ್ ತುಳಿಯುತ್ತಾ ಮಕ್ಕಳು, ಮೊಮ್ಮಮಕ್ಕಳೀಗೆಂದು ಹಲಸಿನ ಹಣ್ಣನ್ನು ಅದರ ಮೇಲೆ ಸಮತೋಲನ ಮಾಡುತ್ತಾ ಬರುತ್ತಿದ್ದ ತಾತ, ಮನೆ ತಲುಪಿಸುಸ್ತೆಂದು ಕೊತದ್ದೋ– ಅಜ್ಜಿಯ ಮೇಲೆ ಎಗರಾಡಿದ್ದೋ ಕಂಡೇ ಇಲ್ಲ ಬದಲು ಕೈ ಕಾಲು ತೊಳೆದು ಹಣ್ಣು ಹೆಚ್ಚಲು ಕುಳಿತೇ ಬಿಟುತ್ತಿದ್ದ ನಗುನಗುತ್ತಾ ಮನೆಯವರೆಲ್ಲಾ ಸೇರಿ ಹಣ್ಣು ಹೆಚ್ಚಿ ತಿನ್ನುತ್ತಿದ್ದೆವು ಅಜ್ಜನ ಮುಖದಲ್ಲಿ ಆಯಾಸದ ಕಳೆ ಸ್ವಲ್ಲವೂ ಇರುತ್ತಿರಲಿಲ್ಲ. ಎಷ್ಟು ಆರೋಗ್ಯವಂತ ಆತ.

ನಂತರ ಅಪ್ಪಲ ಕಾಲ – ಅವನೂ ಅಷ್ಟೇ ಇಪ್ಪತ್ತು ಮೈಲಿ ತನ್ನ ಸ್ಕೂಟರ್‌ನಲ್ಲಿ ಆರಾಮವಾಗಿ ಶ್ರಮಿಸುತ್ತಿದ್ದ ಆದರದೇಕೋ ಅಜ್ಜನಿಗಿಂತ ಸ್ವಲ್ಪ ಆಯಾಸಗೊಂಡವನಂತೆ ಕಾಣುತ್ತಿದ್ದ ಅದಕ್ಕೆ ಆಹಾರವೇ ಕಾರಣ ಎಂದು ಅಮ್ಮ ಅನ್ನುತ್ತಿದ್ದಳು ಆದರೂ ಪರವಾಗಿಲ್ಲ ತಾತನಷ್ಟು ಅಲ್ಲದಿದ್ದರೂ ಆರಾಮವಾಗಿ ನಗುನಗುತ್ತಲೇ ಸಂಸಾರ ನಡೆಸುತ್ತಿದ್ದ ಈಗ ನನ್ನ ಕಾಲ ಹೇಗಿದೆ ? ಓಲಾದಲ್ಲಿ ಆಫೀಸ್‌ಗೆ ಹೋಗಿ ಬರುವ ನಾನು ಅವರಿಬ್ಬರಿಗಿಂತಲೂ ಸೋತು ಹೋದ ಹಾಗೆ ಕಾಣೂತ್ತೇವಲ್ಲ? ಸುಮ್ಮ ಸುಮ್ಮನೆ ಹೆಂಡತಿ, ಮಕ್ಕಳ ಮೇಲೆಲ್ಲಾ ರೇಗುತ್ತಾ ನಗುವನ್ನೇ ಕಳೆದುಕೊಂಡು ಬದುಕುತ್ತಿದ್ದೀನಲ್ಲಾ? ಹಾಗೇ ಅದರೆ ಮುಂದೆ ನನ್ನ ಮಗನ ಗತಿ ?Work from home ನಲ್ಲಿದ್ದೂ ಸುಸ್ತಾಗಿ ಬಿಡುತ್ತಾನಾ ?

ಇದೇ ಬದಲಾವಣೆ ಅಜ್ಜಿ, ಅಮ್ಮಂದಿರಲ್ಲೂ ಗಮನಿಸಿದ್ದೇವೆ, ರುಬ್ಬುವ, ಕುಟ್ಟುವ, ಮನೆಸಾರಿಸುವ, ಬಟ್ಟೆ ಬಗೆಯುವ ಎಲ್ಲಾ ಪರಿಶ್ರಮದ ಕೆಲಸ ಮಡಿಯೂ, ಅಜ್ಜಿ ಆರಾಮವಾಗಿರುತ್ತಿದ್ದಳು ಅದರರ್ಥ ಕೆಲಸವನ್ನು ಅಮ್ಮ ಖುಶಿಯಿಂದ ಮಾಡುತ್ತಿದ್ದಳು, ಕುಟ್ಟುವ, ರುಬ್ಬುವ ಕೆಲಸಗಳು ಆಗಲೇ ಹೊರನಡೆದಿದ್ದವು. ಈಗ ನನ್ನ ಹೆಂಡತಿಗೆ ಎಲ್ಲಾ ಆಧುನಿಕತೆಗಳು ಬಂದಿದ್ದರೂ ದಿನಕ್ಕೊಂದು ರೋಗದ ಹೆಸರು ಆವಿಷ್ಕಾರವಾಗುತ್ತಿದೆ ಹೀಗೇ ಆದರೆ ಮುಂದೆ ಮಗಳ ಗತಿ ಏನು ? ಹಾಗಾದರೆ ನಮ್ಮ ಆರೋಗ್ಯದ ಗತಿ ತಾತನಿಂದ, ಅಪ್ಪನಿಂದ ನನ್ನ ಕಡೆಗೆ ಕಡಿಮೆಯಾಗಲೂ ಅಜ್ಜಿಯಿಂದ, ಅಮ್ಮನಿಂದ ನನ್ನ ಹೆಂಡತಿಗೆ ಕಡಿಮೆಯಾಗಲೂ ನಾವು ಸೇವಿಸುತ್ತಿರುವ ಆಹಾರವೂ ಒಂದು ಪ್ರಮುಖ ಕಾರಣವೇ ಎಂಬುದರ ಬಗ್ಗೆ ಮುಂದಿನ ಸಂಚಿಕೆಗಳಲ್ಲಿ ತಿಳಿದುಕೊಳ್ಳೂಣ.

**ಆಹಾರದಲ್ಲಿ ತಂದರೆ ಅಲ್ಪಸ್ವಲ್ಪ ಬದಲಾವಣೆ**
**ಆಗುವುದು ಶರೀರದಲ್ಲಿ ಶಕ್ತಿ ಸಂಚಲನ**
**ಆದ್ದರಿಂದ ತಿಳಿಯೋಣ ಆಹಾರದ ಬಗ್ಗೆ**
**ಅದು ಹರಿಸುವುದು ಮುಖದಲ್ಲಿ ಆರೋಗ್ಯದ ಬಗ್ಗೆ**

.....29ನೇ ಪುಟದಿಂದ

ಕಾಸು ಪರಿಸ್ಥಿತಿ, ತಾವು ಒದಗಿಸುತ್ತಿರುವ ವಿವಿಧ ಸೇವೆಗಳು ಮುಂತಾದುವುಗಳನ್ನು ಸಾರ್ವಜನಿಕರ ಅವಗಾಹನೆಗೆ ತರಬೇಕು. ದೊಡ್ಡ ದೊಡ್ಡ ಖಾಸಗಿ ಸಂಸ್ಥೆಗಳು ಪ್ರತಿ ಮೂರು ತಿಂಗಳಿಗೊಮ್ಮೆ ಇಂತಹ ಮಾಹಿತಿಯನ್ನು ತಮ್ಮ ಅಂತರ್ಜಾಲ ಜಾಲತಾಣಗಳ ಮೂಲಕವೂ ಮತ್ತು ಮಾಧ್ಯಮಗಳ ಮೂಲಕವೂ ಜನರಿಗೆ ತಲುಪಿಸುವುದನ್ನು ಕಾಣಬಹುದು. ಇಂತಹ ಪ್ರಯತ್ನಗಳು ಸಹಕಾರಿ ಸಂಸ್ಥೇಗಳಲ್ಲಿಯೂ ಚಾಲ್ತಿಗೆ ಬರಬೇಕು.

4. ಸಹಕಾರಿ ಸಂಸ್ಥೆಗಳು ಇತರ ಸಹಕಾರಿ ಸಂಸ್ಥೆಗಳೊಡನೆ ಮಾಹಿತಿ ವಿನಿಮಯ ಮಾಡಿಕೊಳ್ಳುವುದು ಕೂಡ ಬಹು ಅಗತ್ಯ. ಇದು ಸಹಕಾರಿ ಸಂಸ್ಥೆಗಳೊಡನಿನ ಸಹಕಾರವನ್ನು ವೃದ್ಧಿಸುತ್ತದೆ ಮತ್ತು ಒಂದು ಸಹಕಾರಿ ಸಂಘವು ಇನ್ನೊಂದು ಸಹಕಾರಿ ಸಂಘದ ಅನುಭವಗಳಿಂದ ಹಲವು ವಿಷಯಗಳನ್ನು ಕಲಿಯುವುದು ಸಾಧ್ಯವಾಗುತ್ತದೆ.
5. ಸರಕಾರಿ ಸಂಸ್ಥೆಗಳು, ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದ ಸಹಕಾರಿ ಸಂಸ್ಥೆಗಳು ಮತ್ತು ಅಂತಾರಾಷ್ಟ್ರೀಯ ಸಹಕಾರಿ ಸಂಘಟನೆಗಳೊಂದಿಗೆ ಕಾಲದಿಂದ ಕಾಲಕ್ಕೆ ಮಾಹಿತಿಯ ವಿನಿಮಯದಿಂದ ಕೂಡ ಸಹಕಾರಿ ಸಂಘಟನೆಗಳು ಹಲವು ವಿಷಯಗಳನ್ನು ತಿಳಿಯಲು ಮತ್ತು ತಮ್ಮ ಇರುವನ್ನು, ತಮ್ಮ ಅನನ್ಯತೆಯನ್ನು ಇತರರಿಗೆ ತಿಳಿಸಲು ಸಹಕಾ–ರಿಯಾಗುತ್ತದೆ.

ಶಿಕ್ಷಣ, ತರಬೇತಿ ಮತ್ತು ಮಾಹಿತಿ ಇವು ಸಹಕಾರಿ ತತ್ವಗಳ ಭಾಗವಾಗಿದ್ದು, ಸಹಕಾರಿ ಸಂಘಗಳು ನಿರಂತರವಾಗಿ ನಡೆಸಿಕೊಂಡು ಬರಬೇಕಾದ ಚಟುವಟಿಕೆಯಾಗಿದೆ. ಇವುಗಳನ್ನು ಅಗತ್ಯಗಳ ಅನುಸಾರ, ಪೂರ್ಣ ತತ್ವರತೆಯಿಂದ, ಸರಿಯಾದ ಮಾರ್ಗ ಮತ್ತು ಸಾಂಸ್ಥಿಕ ಸ್ವರೂಪಗಳಲ್ಲಿ ಮಾಡುವುದು ಬಹು ಮುಖ್ಯ. ಶಿಕ್ಷಣ, ತರಬೇತಿ ಮತ್ತು ಮಾಹಿತಿ ವಿನಿಮಯಗಳು ತಮ್ಮದೇ ನಿರ್ದಿಷ್ಟ ಉದ್ದೇಶಗಳನ್ನು ಹೊಂದಿರುವುದನ್ನು ಮತ್ತು ಇವುಗಳು ಸಹಕಾರಿ ಸಂಸ್ಥೆಗಳ ವಿಭಿನ್ನ ಆಸಕ್ತ ಗುಂಪುಗಳ ಮೇಲೆ ಕೇಂದ್ರೀಕೃತವಾಗಿರುವುದನ್ನು ಮನಗಾಣಬೇಕು. ಹಾಗೆಯೇ ಶಿಕ್ಷಣ, ತರಬೇತಿ ಮತ್ತು ಮಾಹಿತಿ ವಿನಿಮಯಗಳು ಹೆಚ್ಚು ಪರಿಣಾಮಕಾರಿಯಾಗಿ ನಡೆಯಲು ಅಗತ್ಯವಾದ ಸಾಧನಗಳನ್ನು ಮತ್ತು ವಿಧಾನಗಳನ್ನು ಬಳಸುತ್ತ ಸಹಕಾರಿ ಸಂಸ್ಥೆಗಳು ಕಾರ್ಯಪ್ರವೃತ್ತರಾಗಬೇಕು.

# ತಂಡ ಕಾರ್ಯ ಪ್ರಗತಿ ಪರ (Team work Progressive)

– ಶ್ರೀ ಧೀರೇಂದ್ರ ನಾಗರಹಳ್ಳಿ

ಬದಲಾಗಿರುವ (ಬದಲಾಗುತ್ತಿರುವ) ಕಾಲಮಾನ ಪರಿಸ್ಥಿತಿಯಲ್ಲಿ ಯಾವುದೇ ಒಂದು ಸಂಸ್ಥೆಯು ತನ್ನ ಗುರಿಯ ಪೂರ್ಣ ಸಾಫಲ್ಯಕ್ಕಾಗಿ ಕೇವಲ ಒಬ್ಬ ಕೆಲಸಗಾರರನ ಶಕ್ತಿ ಮತ್ತು ಸಾಮರ್ಥ್ಯಕ್ಕಿಂತಲೂ ಒಂದು 'ತಂಡದ' ಕಾರ್ಯ ಕ್ಷಮತೆಯ ಮೇಲೆಯೇ ಅವಲಂಬಿತವಾಗಿವೆ ಎನ್ನುವುದು ನಮಗೆ ಸಾಕಷ್ಟು ನಿದರ್ಶನಗಳಿಂದ ನಿರೂಪಿತವಾಗಿವೆ. ವಿಷಯದ ಆಳಕ್ಕಿಳಿಯುವ ಮೊದಲು ಕೆಳಗಿನ ಎರಡು ಉದಾಹರಣೆಗಳನ್ನು ಗಮನಿಸುವ:

**Cricket Team ಮತ್ತು Whats up group**

ಕ್ರಿಕೆಟ್ ತಂಡದಲ್ಲಿರುವ ಸದಸ್ಯರೆಲ್ಲರೂ ಒಂದು ಗುರಿಗಾಗಿ ಹೋರಾಡುತ್ತಿರುತ್ತಾರೆ ಮತ್ತು ಆ ಗುರಿಯಿಂದಲೇ (ತಂಡದ ಗೆಲವು) ಬಂಧಿಸಲ್ಪಟ್ಟಿರುತ್ತಾರೆ .

**ಈಗ ಇಲ್ಲಿ ಒಂದು ಪ್ರಶ್ನೆ :**

ತಂಡ ಎಂದರೆ ಏನು? ಗುಂಪು ಎಂದರೆ ಏನು? ಮತ್ತು ತಂಡದ ಕೆಲಸವು ಏಕೆ ಅಷ್ಟೊಂದು ಪ್ರಾಮುಖ್ಯತೆಯನ್ನು ಪಡೆದಿದೆ.

ನಾವು Cricket Team ಎನ್ನುತ್ತೇವೆ. Whats up group ಎನ್ನುತ್ತೇವೆ. ಇನ್ನೊಂದು ಉದಾಹರಣೆಯಾದ Whats up group ಅನ್ನು ಗಮನಿಸಿ. Whats up group ಎನ್ನುವುದು ಸಮಾನ ಮನಸ್ಕರೆಲ್ಲಾ ಒಟ್ಟಾಗಿ ಮಾಡಿಕೊಂಡ ಒಂದು ವೇದಿಕೆ(Virtual).

**ಹಾಗಿದ್ದರೆ ತಂಡ ಮತ್ತು 'ಗುಂಪು'ಗಳ ವೆತ್ಯಾಸವೇನು?**

**ತಂಡ** : ಎಲ್ಲಿ ವ್ಯಕ್ತಿಗಳು/ ಗುಂಪು ಒಂದು ಸಂಸ್ಥೆಯ ಗುರಿಯನ್ನು ಸಾಧಿಸುವ ಸಲುವಾಗಿ ಒಬ್ಬರಿಗೊಬ್ಬರು ಅವಲಂಬಿಸಿ ಕೆಲಸವನ್ನು ಮಾಡುತ್ತಾರೊ ಅದನ್ನು ನಾವು 'ತಂಡ' ಎಂದು ಕರೆಯಬಹುದು. ತಂಡದಲ್ಲಿ ಕಾಣುವ ಎರಡು ಮುಖ್ಯವಾದ ಲಕ್ಷಣಗಳೆಂದರೆ ಒಂದು ತಂಡದ ಸದಸ್ಯರಲ್ಲಿ ಗುರಿ ಸಾಧನೆಗಾಗಿಯೆ ಇರುವ ಹೊಂದಾಣಿಕೆಯನ್ನು ಕಾಣುತ್ತೇವೆ ಮತ್ತು ಇದಕ್ಕೆ ಉತ್ತಮ ಉದಾಹರಣಗಳೆಂದರೆ Whats up group ಮತ್ತು ಕಾರ್ಪೊರೆಟಗಳಲ್ಲಿ ನೋಡುವ 'ಟೀಮಗಳು'

**ಗುಂಪು** : ಎಲ್ಲಿ ವ್ಯಕ್ತಿಗಳು ಒಂದು ಕೆಲಸವನ್ನು ಮುಗಿಸಲು ಸಾಮಾಜಿಕವಾಗಿ ಅಥವಾ ಸಂಸ್ಥೆಯ ಪರವಾಗಿ ಒಟ್ಟಾಗಿ ಕೆಲಸವನ್ನು ಮಾಡುತ್ತಾರೊ ಅದನ್ನು ನಾವು ಗುಂಪು ಎನ್ನಬಹುದು. ಗುಂಪಿನಲ್ಲಿ ಕೆಲಸವನ್ನು ನಿರ್ವಹಿಸುವವರು ಒಬ್ಬರಿಗೊಬ್ಬರು ಅವಲಂಬಿಸಿ ಕೆಲಸವನ್ನು ಮಾಡದೆ ಸ್ವತಂತ್ರವಾಗಿ ಕೆಲಸವನ್ನು ನಿರ್ವಹಿಸುತ್ತಾರೆ.

**ಈ ತಂಡದ ಕೆಲಸವೆಂದರೆ ಏನು? 'ತಂಡ' ಮತ್ತು 'ಗುಂಪು' ಗಳ ವ್ಯತ್ಯಾಸವೇನು.**

ತಂಡದ ಕೆಲಸವೇನು ಮತ್ತು ಅದರ ತಂಡದಲ್ಲಿ ನಿರ್ವಹಿಸುವ ಕೆಲಸಗಳ ಯಶಸ್ಸಿನ ದರವು ಒಬ್ಬವ್ಯಕ್ತಿಯು ನಿರ್ವಹಿಸುವ ಕೆಲಸಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿರುವುದಕ್ಕೆ ಕಾರಣಗಳೇನು? ಇದನ್ನು ಅರ್ಥ ಮಾಡಿಕೊಳ್ಳುವುದಕ್ಕಾಗಿ ಈಗ ಮತ್ತೊಮ್ಮೆ 'ಗುಂಪು' ಎಂದರೆ ಏನು ಎನ್ನುವುದನ್ನು ಮತ್ತೊಮ್ಮೆ ಸ್ವಲ್ಪ ಗಮನಿಸೋಣ. ಎಲ್ಲಿ ವ್ಯಕ್ತಿಗಳು ಒಂದು ಕೆಲಸವನ್ನು(ಗುರಿಯಲ್ಲ) ಪೂರ್ಣಗೊಳಿಸಲು ಒಟ್ಟಾಗಿ ಕೆಲಸ ಮಾಡುತ್ತಾರೊ ಅಥವಾ ಸಮಾಜಿಕವಾಗಿ (ಸಮಾನ ಮನಸ್ಕರೇ ಆಗ ಬೇಕೆಂದಿಲ್ಲ)ಬಂಧಿಯಾಗಿರುತ್ತಾರೊ ಆ ಒಂದು ಸಮೂಹವನ್ನು 'ಗುಂಪು' ಎನ್ನಬಹುದು.ಇಲ್ಲಿ ಗಮನಿಸಬೇಕಾದ ಒಂದು ಅಂಶವೆಂದರೆ 'ಗುಂಪಿನಲ್ಲಿ ಕೆಲಸಮಾಡುವವರು ಸಹಜವಾಗಿ ಒಬ್ಬರ ಮೇಲೆ ಒಬ್ಬರು ಅವಲಂಬಿತವಾಗಿರುವುದಿಲ್ಲ ಗುಂಪಿನಲ್ಲಿರುವ ಸದಸ್ಯರೆಲ್ಲರೂ ಸ್ವತಂತ್ರವಾಗಿಯೇ ಕೆಲಸವನ್ನು ನಿರ್ವಹಿಸುತ್ತಾರೆ. 'Group studies' ಎಂದು ಸಹಜವಾಗಿ ನಾವೆಲ್ಲರೂ ಒಟ್ಟಾಗಿ ಓದುವಾಗ ಬಳಸುತ್ತೇವೆ.ಇಲ್ಲಿ ಒಂದಕ್ಕಿಂತ ಹೆಚ್ಚು ಸಮಾನ ಮನಸ್ಕ ವಿದ್ಯಾರ್ಥಿಗಳು ಒಟ್ಟಾಗಿ ಅಭ್ಯಾಸ ಮಾಡುತ್ತಾರೆ. 'ಗುಂಪಿನ' ಕೆಲಸವನ್ನು ಗಮನಿಸಿ ಇಲ್ಲಿ ಸದಸ್ಯರೆಲ್ಲರೂ ತಮ್ಮ ಕೆಲಸಗಳನ್ನು ಪೂರೈಸಲು ಅಣಿಯಾಗಿರುತ್ತಾರೆ ಮತ್ತು ತಮ್ಮ ಕೆಲಸಗಳು ಮುಗಿದಾದ ಮೇಲೆ ಕೈ ತೊಳೆದುಕೊಂಡು ಬಿಡುತ್ತಾರೆ.ಆದರೆ ತಂಡದಲ್ಲಿ ನಿರ್ವಹಿಸುವ ಕೆಲಸಗಳು ಹಾಗೆ ಇರುವುದಿಲ್ಲ ತಂಡದಲ್ಲಿನ ಸದಸ್ಯರೆಲ್ಲರೂ ವಯಕ್ತಿಕ ಭಿನ್ನಾಭಿಪ್ರಾಯಗಳನ್ನೆಲ್ಲಾ ಬದಿಗಿಟ್ಟು ಸಂಸ್ಥೆಯ ಗುರಿಯನ್ನು ತಲುಪುವುದಕ್ಕಾಗಿಯೆ ಹೋರಾಡುತ್ತಿರುತ್ತಾರೆ.

**ಇನ್ನೊಂದು ಉದಾಹರಣೆಯನ್ನು ಗಮನಿಸೋಣ** : ಬಾವಿಯಿಂದ ನೀರನ್ನು ಸೇದಿ ಆ ನೀರನ್ನು ಮನೆಯಲ್ಲಿರುವ ಒಂದು ದೊಡ್ಡದೊಂದು ಹಂಡೆಯನ್ನು ತುಂಬಿಸಬೇಕಾಗಿದೆ ಎಂದು ಕೊಳ್ಳೋಣ.ಆ ಹಂಡೆ ತುಂಬಲು ಸುಮಾರು 20 ಕೊಡಗಳ ಬಾವಿ ನೀರಿನ ಅವಶ್ಯಕತೆ ಇದೆ ಎಂದರೆ ಇಬ್ಬರನ್ನು ಆ ಕೆಲಸಕ್ಕೆ ನಿರ್ವಹಿಸವುದಕ್ಕಾಗಿ ನಿಯೋಜಿಸಲಾಗಿದೆ ಎಂದುಕೊಳ್ಳೊಣ.ಆಗ ಇಬ್ಬರೂ ವಯಕ್ತಿಕ ನೆಲೆಯಲ್ಲಿ ಪ್ರತ್ಯೇಕವಾಗಿಯೆ ಕೆಲಸ ಮಾಡಿ ತಲೆಗೊಬ್ಬರು ಹತ್ತು–ಹತ್ತು ಕೊಡಗಳನ್ನು ಬಾವಿಯಿಂದ ಸೇದಿ ಹಂಡೆಯನ್ನು ತುಂಬಿಸುತ್ತಾರೆ ಎನ್ನುವುದಾದರೆ ಅಲ್ಲಿನ ಶ್ರಮ ಮತ್ತು ದಕ್ಷತೆಯ ಮೇಲೆ ಆ ಶ್ರಮದ ಪರಿಣಾಮವನ್ನು ಗಮನಿಸಿದರೆ ಅದು ಅಧಿಕ ಪ್ರಮಾಣದಲ್ಲಿಯೇ ಇರುತ್ತದೆ.

**ಬಾವಿಯಿಂದ ನೀರನ್ನು ಸೇದಿ ಹಂಡೆಯನ್ನು ತುಂಬಿಸುವ ಕೆಲಸವನ್ನು ಇನ್ನೊಂದು ವಿಧಾನದಿಂದ ಮುಗಿಸುವುದಾದರೆ.**

ಒಬ್ಬರು ಬಾವಿಯಿಂದ ನೀರನ್ನು ಸೇದುವುದು ಮತ್ತು ಅದನ್ನು ಒಂದು ಹಂತದ ತಂದು ಇನ್ನೊಬ್ಬ ಕೆಲಸಗಾರರಿಗೆ ಅನುವು ಮಾಡಿಕೊಡುವುದು.ಹೀಗೆ ಮಾಡುವುದರಿಂದ ಶ್ರಮದ ಪರಿಣಾಮವು ಖಂಡಿತ ಕಡಿಮೆಯಾಗಿರುತ್ತದೆ ಮತ್ತು ದಕ್ಷತೆಯೂ ಅಧಿಕ ಪ್ರಮಾಣದಲ್ಲಿಯೇ ಇರುತ್ತದೆ. ಇದನ್ನೆ ನಾವು 'ಟೀಮ್ ವರ್ಕ' ಎನ್ನುತ್ತೇವೆ.

**ಇದೀಷ್ಟು Team, Team work ಮತ್ತು Group!**

ವಿಶ್ವ ಪರಿಸರ ದಿನಾಚರಣೆಯ ವಿಶೇಷ ಲೇಖನ

# ವಿಶ್ವ ಪರಿಸರ ಆಚರಣೆ ವೈಶಿಷ್ಠ ಪೂರ್ಣವಾಗಿರಲಿ ಸಮಾಜಕ್ಕೆ ಸಂದೇಶ ನೀಡಲಿ

– ಶ್ರೀ ಸೂರ್ಯಕಾಂತ ರ್‍ಯಾಕಲೆ, ಕಾನೂನು ವ್ಯವಸ್ಥಾಪಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕಲಬುರಗಿ ಪ್ರಾಂತ

ಮಣ್ಣೆಂದಿತ್ತು ಕುಂಬಾರಣ್ಣನಿಗೆ ಏತಕೆ ತುಳಿವೆ ಎನ್ನ
ಮುಂದೊಂದು ದಿನ ಕಾಲಬಹುದು
ನಾ ತುಳಿವೆ ನಿನ್ನ.

– ಕಬೀರ

ಕಬೀರ ತನ್ನ ದೊಹೆಯಲ್ಲಿ ಪ್ರಕೃತಿಗೆ ನಾವು ದ್ರೋಹ ಬಗೆದರೆ ಪ್ರಕೃತಿ ಅದು ತಾಳ್ಮೆಯಿಂದ ಸಹಿಸಿಕೊಂಡು ತನ್ನ ದೈನಂದಿನ ಕಾರ್ಯವನ್ನು ನಿರ್ವಹಿಸುತ್ತದೆ ಆದರೆ ತಾಳಮೆಯ ಒಂದು ಹಂತ ತಲುಪಿದ ನಂತರ ತನ್ನ ರೌದ್ರ ಅವತಾರ ತೋರಿಸಿ ತನ್ನ ಮೇಲೆ ಆಗುತ್ತಿರುವ ದೌರ್ಜನ್ಯವನ್ನು ಹೊರಹಮ್ಮಿಹಾಕುವುದರ ಮುಖಾಂತರ ಮತ್ತೆ ಮೂಲ ಸ್ಥಿತಿಗೆ ಆಗಮಿಸಿ ಪ್ರಕೃತಿ ತನ್ನ ಪರೋಪಕಾರಿ ಕೆಲಸದಲ್ಲಿ ನಿರತವಾಗುವ ಪ್ರಕೃತಿ ಮಾತೆ ಭೂಮಿ ತಾಯಿ ಜಗತ್ತಿಗೆ ಪ್ರಕಾಶ ನೀಡುವ ಸೂರ್ಯನಿಂದ 15 ಕೋಟಿ ಕಿಲೋ ಮೀಟರನಷ್ಟು ದೂರವಿರುವ ಭೂಮಿ ಸೂರ್ಯನ ಸುತ್ತ ಸುತ್ತುತ್ತಿರುವುದು ಮಾತ್ರ ಅತ್ಯಂತ ರೋಚಕ. ಅದು ಎಷ್ಟರ ಮಟ್ಟಿಗೆ ಎಂದರೆ ಒಂದು ಸೆಂಕೆಂಡಗೆ 30 ಕಿಲೋ ಮೀಟರ ವೇಗದಲ್ಲಿ ಭೂಮಿ ಸೂರ್ಯನ ಸುತ್ತ ಸುತ್ತುತ್ತದೆ. ಇಂಥಹ ಅಗೋಚರ ಶಕ್ತಿ ಹೊಂದಿರುವ ಭೂಮಿ ಸೂರ್ಯನಿಗೆ ಅತ್ಯಂತ ಸಮಿಪವಿರುವ ಮೂರನೆ ಗ್ರಹವಾಗಿದೆ. ಈ ಭುಮಿಯು ಶೇ.71 ರಷ್ಟು ಜಲ ಮತ್ತು ಶೇ. 29 ರಷ್ಟು ಕಾಡು – ಹಾಗೂ ನೆಲವನ್ನು ಹೊಂದಿರುವ ಭೂತಾಯಿಯ ಸಿರಿ ಮತ್ತಷ್ಟು ವಿಸ್ಮಯ, ಗಿಡ–ಮರ ಬೆಟ್ಟ–ಗುಡ್ಡ, ಹೂ–ಹಣ್ಣು, ಗಾಳಿ–ಬಿರುಗಾಳಿ, ಹಗಲು–ರಾತ್ರಿ, ಹೀಗೆ ಪ್ರಾಕೃತಿಕ ಸಂಪತ್ತುಗಳನ್ನು, ಸಕಲ ಕೋಟಿ ಜೀವ, ಸಂಕುಲಕ್ಕೆ ವರದಾನವಾಗಿ ನೀಡಿದವಳು ಭೂ ಮಾತೆ, ಈ ಮಾತೆಯನ್ನು ನಾವು ಪ್ರಕೃತಿಯ ಸೃಷ್ಠಿಯೆಂದು ಕರೆಯುತ್ತೆವೆ. ಆದರೆ ಅತಿ ಹೆಚ್ಚು ಬುದ್ದಿವಂತ ಪ್ರಾಣಿಯಾದ ಮನುಷ್ಯ ಯಾಂತ್ರಿಕ ಬದುಕಿನಲ್ಲಿ ಐಷರಾಮಿ ಜೀವನ ಸಾಗಿಸಬೇಕು ಎಂಬ ಭ್ರಮೆಯಲ್ಲಿ ಮುಳಗಿ ಅಭಿವೃದ್ಧಿಯ ಭೂತದ ಬೆನ್ನು ಹತ್ತಿ, ಕೈಗಾರಿಕರಣ, ಪಟ್ಟಣ ನಗರ ನಿರ್ಮಾಣಕ್ಕಾಗಿ ಯಂತ್ರಗಳ ಬಹುಪಯೋಗಕ್ಕೆ ಬೆನ್ನು ಬಿದ್ದಿರುವ ಮನುಜ ಕುಲ ಇಂದು ಮರಗಳನ್ನು ಕಡೆದು ಕಾಡನ್ನು ನಾಶ ಮಾಡುತಿದ್ದಾನೆ. ಮನುಷ್ಯನ ಬದುಕಿಗೆ ಅವಶ್ಯಕವಾದ ಆಮ್ಲಜನಕ ನೀಡುವ ಮರಗಳು ಮನುಷ್ಯ ಹೊರಸುಸುವ ಇಂಗಾಲ ಡೈಆಕಸೈಡ ಹಿರಿಕೊಂಡು ಆಮ್ಲಜನಕ ನೀಡುವ ಮರಗಳ ಸಂಖ್ಯೆ ದಿನದಿಂದ ದಿನಕ್ಕೆ ಕ್ಷೀಣಿಸುತ್ತಿರುವುದರಿಂದ ವಾಯು ಮಾಲಿನ್ಯ ಹೆಚ್ಚಾಗುತ್ತಿದೆ.

ಅಮೇರಿಕಾ ಮೂಲದ ಅಧ್ಯಯನ ಸಂಸ್ಥೆಯೊಂದು ಇತ್ತಿಚಿಗೆ ಬಿಡುಗಡೆ ಮಾಡಿರುವ ವರದಿಯಲ್ಲಿ ಭಾರದಲ್ಲಿ ಸನ್ 2018 ರಲ್ಲಿ ವಾಯುಮಾಲಿನ್ಯದಿಂದ ಸುಮಾರು 16 ಲಕ್ಷ ಜನರು ಅಕಾಲಿಕ ಮರಣಕ್ಕೆ ತುತ್ತಾಗಿದ್ದಾರೆ. ಮರಣ ಪ್ರಮಾಣದಲ್ಲಿ ಭಾರತ ಜಗತ್ತಿನಲ್ಲಿ ಎರಡನೇ ಸ್ಥಾನದಲ್ಲಿ ಇದೆ, ವಾಯುಮಾಲಿನ್ಯದ ಪರಿಣಾಮವಾಗಿ ಹೃದ್ರೋಗಾ, ಅಸ್ತಮಾ, ಶ್ವಾಸಕೋಶದ ಕ್ಯಾನ್ಸರನಿಂದ ಭಾರತದಲ್ಲಿ ಪ್ರತಿ ನಿಮಿಷಕ್ಕೆ ಮೂವರು ಸಾವಿಗಿಡಾಗುತಿದ್ದಾರೆ.

ನಮ್ಮ ದುರಾಸೆಗಾಗಿ ಗಣಿಗಾರಿಕೆ, ಕೈಗಾರಿಕೆ, ಹೆಚ್ಚುತ್ತಿರುವ ಜನಸಂಖ್ಯೆಯಿಂದ ಹೊಸ ಹೊಸ ಪಟ್ಟಣ ನಗರಗಳ ನಿರ್ಮಾಣ ಮಾಡುವುದಕ್ಕಾಗಿ ಕಾಡುಗಳನ್ನು ಕಡಿದು, ಬೆಟ್ಟ ಗುಡ್ಡಗಳನ್ನು ಅಗೆದು ಫಲವತ್ತಾದ ಮಣ್ಣನು ಹಾಳು ಮಾಡುತಿದ್ದೆವೆ. ಅಲ್ಲದೆ ಕನಿಷ್ಠ ಸಮಯದಲ್ಲಿ ಗರಿಷ್ಠ ಇಳುವರಿ ಪಡೆಯಲು ವಿಷಾಯುಕ್ತ ರಾಸಾಯನಿಕ ಗೊಬ್ಬರ ಮತ್ತು ಔಷದಿಗಳನ್ನು ಬೆಳೆಗಳಿಗೆ ಸಿಂಪಡಿಸುವುದರಿಂದ ಮಣ್ಣಿನ ನೈಜವಾದ ನೈಸರ್ಗಿಕ ಶಕ್ತಿ ನಶಿಸುವುದರ ಜೊತೆಗೆ ಮನುಷ್ಯ ಸಹ ವಿಷಾಯುಕ್ತ ಆಹಾರ ಸೇವಿಸಿ ಹಲವಾರು ರೋಗಗಳಿಂದ ಬಳಲುತಿದ್ದಾನೆ.

ಒಟ್ಟಾರೆ ಮನುಷ್ಯನ ದುರಾಸೆಯ ದುರ್ಬಳಕೆಯಿಂದಾಗಿ ಪರಿಸರ ಸಂಪೂರ್ಣವಾಗಿ ಕುಲಷಿತಗೊಂಡು ಅವನತಿಯ ಅಂಚಿಗೆ ತಲುಪುತ್ತಿದೆ. ಕಾಡು ಪ್ರಾಣಿಗಳ ನಾಶ, ಅರಣ್ಯದ ವಿನಾಶ, ನದಿ–ಸಮುದ್ರಗಳ ಕುಲಷಿತ ಹೀಗೆ ಸರಿಮಾಡಲಾಗದಷ್ಟು ಮನುಷ್ಯ ಪ್ರಕೃತಿಯನ್ನು ಹಾಳುಗೆಡವಿದ್ದಾನೆ.

ಜಗತ್ತಿನಲ್ಲಿ ಆಗುತ್ತಿರುವ ಪ್ರಕೃತಿಯ ವಿನಾಶವನ್ನು ಕಂಡು ವಿಶ್ವಸಂಸ್ಥೆಯು ಸನ್ 1972–73ರ ಸಾಲಿನ ಮಹಾಸಭೆಯಲ್ಲಿ ಮನುಕುಲದ ಒಳಿತಿಗಾಗಿ ಪ್ರಕೃತಿಯ ವಿನಾಶವನ್ನು ತಡೆಗಟ್ಟುವುದು ಹಾಗೂ ಸರಿ ಪಡಿಸಲು ಜಗತ್ತಿನ ಎಲ್ಲಾ ದೇಶದ ಪ್ರಜೆಗಳು ಜಾಗೃತರಾಗಿ ಪ್ರಕೃತಿಯ ರಕ್ಷಣೆಗೆ ಒತ್ತು ನೀಡುವ ಉದ್ದೇಶದಿಂದ ಜೂನ್ 5ನೇ ದಿನವನ್ನು ವಿಶ್ವ ಪರಿಸರ ದಿನಾಚರಣೆಯೆಂದು ಆಚರಿಸಲು ನಿರ್ಧರಿಸಲಾಯಿತು ಅದರಂತೆ ಸನ್ 1974 ರಿಂದ ವಿಶ್ವ ಪರಿಸರ ದಿನಾಚರಣೆ ಪ್ರಾರಂಭವಾಯಿತ್ತು.

ಪ್ರತಿಯೊಬ್ಬ ಮನುಷ್ಯನಿಗೆ ದಿನನಿತ್ಯ ಕನಿಷ್ಠ 8–9 ಲೀಟರ್ ಆಮ್ಲಜನಕ ಅವಶ್ಯಕ ಸದ್ಯ ಮಾರಕಟ್ಟೆಯಲ್ಲಿ 8–9 ಲೀಟರ ಆಮ್ಲಜನಕ ಖರೀದಿಸಬೇಕಾದರೆ ರೂ. 600–700 ಪಾವತಿಸಬೇಕು ಒಂದು ವರ್ಷಕ್ಕೆ ಸುಮಾರು ಎರಡು ಲಕ್ಷ ಐವತ್ತು ಸಾವಿರ ಪಾವತಿಸಬೇಕಾಗುತ್ತದೆ. ಆದ್ದರಿಂದ ಪ್ರಕೃತಿಯ ಆಮ್ಲಜನಕ ಒಂದರಿಂದಲೆ ಪ್ರತಿ ಮನುಷ್ಯನಿಗೆ ರೂ. ಎರಡು ಲಕ್ಷ ಐವತ್ತು ಸಾವಿರ ಉಳಿಕೆ ಮಾಡಿದಂತೆ ಆದ್ದರಿಂದ ಈ ವಿಶ್ವ ಪರಿಸರ ದಿನಾಚರಣೆ ದಿನದಿಂದ ಪ್ರಕೃತಿಯನ್ನು ಸುಧಾರಿಸಲು ನಾವು ಶ್ರಮಿಸದಿದ್ದರು ಸಹ ಮುಂದೆ ಪ್ರಕೃತಿಯ ಮಾಲಿನ್ಯ ಮಾಡದಂತೆ ಪಣ ತೊಡುವುದರ ಮುಖಾಂತರ ವಿಶ್ವ ಪರಿಸರ ದಿನಾಚರಣೆ ಆಚರಿಸೋಣ.

**ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಸಹಕಾರಿಗಳು ಮಾಡಬಹುದಾದ ಕಾರ್ಯಗಳು :**

- ನಮ್ಮ ಸಹಕಾರಿಯಿಂದ ಜೂನ್ ಮಾಹೆಯಲ್ಲಿ ನಿರ್ದೇಶಕರು ಹಾಗೂ ಸಿಬ್ಬಂದಿಗಳು ಕನಿಷ್ಠ 10 ಗಿಡಗಳನ್ನು ನೆಡುವುದು.( ಸಹಕಾರಿಯಿಂದ ಕನಿಷ್ಠ 100 ಮರಗಳು)
- ನೆಟ್ಟಿರುವ ಗಿಡಗಳನ್ನು ಕನಿಷ್ಠ ಮೂರು ವರ್ಷ ಪೋಷಣೆ ಮಾಡುವುದು
- ನಾವು ಉಪಯೋಗಿಸುತ್ತಿರುವ ಯಂತ್ರೋಪಕರಣಗಳಿಂದ ಉಂಟಾಗುತ್ತಿರುವ ಪರಿಸರ ಮಾಲಿನ್ಯ ಕಡಿಮೇ ಮಾಡಲು ಅವಶ್ಯಕವಾದ ಯಂತ್ರೋಪಕರಣಗಳನ್ನು ಉಪಯೋಗಿಸೋಣ.
- ನಮ್ಮ ನಗರ ಪಟ್ಟಣದ ಸರಕಾರಿ ಒಂದು ಉದ್ಯಾನವನವನ್ನು ಅಭಿವೃದ್ಧಿ ಪಡಿಸೋಣ.
- ತಿಂಗಳಲ್ಲಿ ಒಂದು ದಿವಸ ಆಡಳಿತ ಮಂಡಳಿ, ಸಿಬ್ಬಂದಿಯವರು ಪೆಟ್ರೋಲ್ ಡಿಸೆಲ್ ರಹಿತ ವಾಹನ ಉಪಯೋಗಿಸುವುದು( ವ್ಯವಹಾರ ಮಾಡುವ ಸದಸ್ಯರಿಗೂ ಮನವಿ ಮಾಡಿಕೊಳ್ಳುವುದು)
- ಜೂನ್ ಮಾಹೆಯಲ್ಲಿ ಜಾಗ್ರತಿಗಾಗಿ ಸಹಕಾರಿಯಿಂದ ಪರಿಸರ ಕುರಿತು, ಪ್ರಬಂಧ, ಭಾಷಣ ಸ್ಪರ್ಧೆ ಏರ್ಪಡಿಸುವುದು.

# ವೃಕ್ಷೋ ರಕ್ಷತಿ ರಕ್ಷಿತಃ

## (ಮೂಲತೋ ಬ್ರಹ್ಮ ರೂಪಾಯ ಮಧ್ಯತೋ ವಿಷ್ಣು ರೂಪಿಣೆ ಅಗ್ರತೋ ಶಿವ ರೂಪಾಯ ವೃಕ್ಷ ರಾಜಾಯಾ ತೇ ನಮಃ)

– ಶ್ರೀಮತಿ ಸವಿತ ಎನ್. ಇ. ಕಿರಿಯ ವ್ಯವಸ್ಥಾಪಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.

ನಾವು ಜೀವಿಸುತ್ತಿರುವ ಈ ಭೂಮಿ ಹಲವು ಜೀವರಾಶಿಗಳನ್ನು ತನ್ನ ಮಡಿಲಿನಲ್ಲಿರಿಸಿಕೊಂಡು ಸಾಕಿ ಸಲಹುತ್ತಿದೆ. ಪ್ರತಿಯೊಂದು ಜೀವರಾಶಿಗಳಿಗೆ ಆಹಾರ, ಆಶ್ರಯ, ಗಾಳಿ ಮತ್ತು ಬೆಳಕನ್ನು ಒದಗಿಸುತ್ತಾ ಬಂದಿದೆ. ಮಾನವನ ಎಲ್ಲಾ ಅಗತ್ಯಗಳನ್ನು ಪೂರೈಸುತ್ತಲೇ ಇದೆ. ನಾವು ನಮ್ಮ ಜೀವನದಲ್ಲಿ ಪ್ರಕೃತಿಯನ್ನೇ ಸಂಪೂರ್ಣವಾಗಿ ಅವಲಂಬಿಸಿದ್ದೇವೆ. ಪರಿಸರವಿಲ್ಲದೆ ನಾವು ಈ ಗ್ರಹದಲ್ಲಿ ಜೀವನವನ್ನು ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ. ಆದರೆ ನಮ್ಮ ಹೊಸ ಹೊಸ ಆವಿಷ್ಕಾರಗಳು ಇಂದು ಹಲವು ಬದಲಾವಣೆಗಳನ್ನು ತಂದೊಡ್ಡಿದೆ. ಇದರಿಂದ ಪ್ರಕೃತಿಯ ನಾಶ ನಮ್ಮಿಂದಲೇ ಆಗುತ್ತಿದೆ. ಇಂದಿನ ದಿನಗಳಲ್ಲಿ ಪ್ರಕೃತಿಯ ಮಹತ್ವ ಹೆಚ್ಚು ಹೆಚ್ಚು ಅರ್ಥವಾಗುತ್ತಿದೆ. ಹಾಗಾಗಿ ನಾವು ಜನರಲ್ಲಿ ಇನ್ನಷ್ಟು ಜಾಗೃತಿ ಮೂಡಿಸುವ ಅಗತ್ಯವಿದೆ. ನಮ್ಮ ಮಕ್ಕಳು ಮುಂದಿನ ಪೀಳಿಗೆಗೆ ಪರಿಸರವನ್ನು ರಕ್ಷಿಸಿಕೊಳ್ಳಬೇಕಾದವರು. ಅವರಿಗೂ ಪರಿಸರದ ಕಾಳಜಿ ಅರ್ಥ ಮಾಡಿಸುವ ಅಗತ್ಯ ಹೆಚ್ಚಿದೆ.

### ವಿಶ್ವ ಪರಿಸರ ದಿನ ಇತಿಹಾಸ ಏನು?

ಬಹಳ ಸಮಯದಿಂದ, ಮಾನವರು ಪರಿಸರ ವ್ಯವಸ್ಥೆಗಳನ್ನು ದುರುಪ ಯೋಗಪಡಿಸಿಕೊಳ್ಳುತ್ತಿದ್ದಾರೆ, ಇದರಿಂದ ಪರಿಸರ ನಾಶವಾಗುತ್ತಿದೆ. ಪ್ರತಿ ಮೂರು ಸೆಕೆಂಡಿಗೆ, ನಾವು ಅರಣ್ಯವನ್ನು ಕಳೆದುಕೊಳ್ಳುತ್ತಿದ್ದೇವೆ. ಅರ್ಧದಷ್ಟು ಗದ್ದೆಗಳನ್ನು ನಾಶಪಡಿಸಿದ್ದೇವೆ. ನಾವು ತಿನ್ನುವ ಆಹಾರ, ಉಸಿರಾಡುವ ಗಾಳಿ, ಕುಡಿಯುವ ಜಲ, ಹವಾಮಾನ ಎಲ್ಲವೂ ಪರಿಸರದ ಕೊಡುಗೆ. ಆದರೆ ಈ ಕೊಡುಗೆಯನ್ನು ಜನರು ಹೇಗೆ ಬಳಸಿಕೊಳ್ಳುತ್ತಿದ್ದಾರೆ ಎಂಬುದರ ಮೇಲೆ ಎಲ್ಲವೂ ನಿರ್ಧಾರಿತವಾಗಿದೆ. ನಾವು ಪ್ರಕೃತಿಯ ಒಂದು ಭಾಗವಾಗಿದ್ದೇವೆ. ಮತ್ತು ಪ್ರಕೃತಿಯನ್ನೇ ಅವಲಂಬಿಸಿದ್ದೇವೆ. ಪ್ರಕೃತಿಯನ್ನು ರಕ್ಷಿಸುವುದು ನಮ್ಮೆಲ್ಲರ ಕರ್ತವ್ಯ ಎಂದು ಅರಿವು ಮೂಡಿಸುವ ವಿಶೇಷ ದಿನವಾಗಿದೆ. ಇತಿಹಾಸ ಪರಿಸರದ ಕುರಿತಾದ ಮೊದಲ ಪ್ರಮುಖ ಸಮ್ಮೇಳನವನ್ನು 1972 ರಲ್ಲಿ ಜೂನ್ 5 ರಿಂದ 16ರ ವರೆಗೆ ಸ್ಟಾಕ್ಹೋಮ್ (ಸ್ವೀಡನ್) ನಲ್ಲಿ ನಡೆಸಲಾಯಿತು. ಅದೇ ವರ್ಷದ ಡಿಸೆಂಬರ್ 15 ರಂದು ಸಾಮಾನ್ಯ ಸಭೆಯನ್ನು ನಡೆಸಲಾಯಿತು. ಆ ಸಭೆಯಲ್ಲಿ ಜೂನ್ 5 ಅನ್ನು ವಿಶ್ವ ಪರಿಸರ ದಿನವೆಂದು ಅಂಗೀಕರಿಸಲಾಯಿತು. ಪ್ರತಿವರ್ಷ ಜೂನ್ 5 ರಂದು ಆಚರಿಸಲಾಗುತ್ತದೆ. ಪರಿಸರವನ್ನು ರಕ್ಷಿಸುವ ಮಹತ್ವದ ಬಗ್ಗೆ ಜಾಗೃತಿ ಮೂಡಿಸಲು 1974 ರಲ್ಲಿ ಅಮೇರಿಕದ ಸ್ಪೋಕಾನೆ ನಗರದಲ್ಲಿ ಈ ದಿನವನ್ನು ಮೊದಲು ಆಚರಿಸಲಾಯಿತು.

### ಕಾಳಜಿಯ ಅಗತ್ಯ

ಪ್ರಸ್ತುತ ವರ್ಷದಿಂದ ತಮ್ಮ ಜಮೀನುಗಳಲ್ಲಿ 2ಕ್ಕಿಂತ ಹೆಚ್ಚು ಗಿಡ ಬೆಳಸಿದರೆ ಆಸ್ತಿ ತೆರಿಗೆಯಲ್ಲಿ ಶೇ.5ರಷ್ಟು ರಿಯಾಯಿತಿ ಎಂದು ಕೊಪ್ಪಳ ಜಿಲ್ಲೆಯಲ್ಲಿ ಜಿಲ್ಲಾ ಉಸ್ತುವಾರಿಯಿಂದ ಆರಂಭಿಸಿರುತ್ತಾರೆ. ಪರಿಸರ ವ್ಯವಸ್ಥೆಯನ್ನು ಪುನಃಸ್ಥಾಪಿಸುವುದು ಸಕ್ರಿಯವಾಗಿ ಮರಗಳನ್ನು ನೆಡುವುದರ ಮೂಲಕ ಅಥವಾ ಪರಿಸರ ವ್ಯವಸ್ಥೆಯನ್ನು ರಕ್ಷಿಸುವ ಮೂಲಕ ಹಾಗೂ ಹೆಚ್ಚುತ್ತಿರುವ ಮಾಲಿನ್ಯವನ್ನು ಕಡಿಮೆ ಮಾಡುವ ಮೂಲಕ ಪರಿಸರ ವ್ಯವಸ್ಥೆಯ ಮೇಲಿನ ಒತ್ತಡಗಳನ್ನು ತೆಗೆದುಹಾಕುವ ಮೂಲಕ ಪರಿಸರವನ್ನು ರಕ್ಷಿಸುಸಿಕೊಳ್ಳುವುದು. ನಾಗರಿಕರು ಪರಿಸರದ ಕುರಿತಾದ ಸಮಸ್ಯೆಗಳೆಡೆಗೆ ಗಮನವಹಿಸಲು ತೊಡಗುತ್ತಿದ್ದಾರೆ. ಪ್ರತಿ ವರ್ಷ ಈ ದಿನದಂದು ಜನರು ಸಾಮಾನ್ಯವಾಗಿ ಸಸಿಗಳನ್ನು ನೆಡುತ್ತಾರೆ. ಪರಿಸರ ದಿನಾಚರಣೆಗಾಗಿ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ. ಕೆಲವು ಕಡೆ ಕೋವಿಡ್ –19 ಇರುವ ಕಾರಣ ಜನರು ಹೊರಗೆ ಹೋಗುವ ಬದಲು ಈ ದಿನವನ್ನು ಕ್ರಿಯಾತ್ಮಕವಾಗಿ ಆನ್‌ಲೈನ್ ಮೂಲಕ ಹಲವು ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬಹುದು. ಕಾಡುಗಳಿಂದ ಕೃಷಿ ಭೂಮಿಗಳವರೆಗೆ, ಪರ್ವತಗಳ ಮೇಲ್ಭಾಗದಿಂದ ಸಮುದ್ರದ ಆಳದವರೆಗೆ ಶತಕೋಟಿ ಹೆಕ್ಟೇರ್ ಪ್ರದೇಶವನ್ನು ವಿಶ್ವಸಂಸ್ಥೆಯಿಂದ ಇನ್ನು 10 ವರ್ಷಗಳವರೆಗೆ ಪರಿಸರ ವ್ಯವಸ್ಥೆಯನ್ನು ಪುನರುಜ್ಜೀವನಗೊಳಿಸುವ ಜಾಗತಿಕ ಕಾರ್ಯಾಚರಣೆಯಾಗಿದೆ. ನಾಗರಿಕರು ಪರಿಸರವನ್ನು ಕಾಪಾಡಲು ಸಾಕಷ್ಟು ಯೋಜಿಸುತ್ತಿದ್ದಾರೆ.

ಪ್ರಕೃತಿಯ ಮೇಲಾಗುತ್ತಿರುವ ಹಾನಿಯನ್ನು ಕಡಿಮೆ ಮಾಡುವುದು ಮತ್ತು ಪರಿಸರ ಸಂರಕ್ಷಣೆಯ ಬಗ್ಗೆ ಜಾಗೃತಿ ಮೂಡಿಸುವ ಉದ್ದೇಶದಿಂದ ವಿಶ್ವಸಂಸ್ಥೆಯು ವಿಶ್ವ ಪರಿಸರ ದಿನವನ್ನು ಆಚರಿಸಲು ಮುಂದಾಯಿತು. ಪ್ರತಿ ವರ್ಷ ವಿಶ್ವ ಪರಿಸರ ದಿನವನ್ನು ನಿರ್ದಿಷ್ಟ ಉದ್ದೇಶದೊಂದಿಗೆ ಆಚರಿಸುತ್ತಾ ಬರಲಾಗಿದೆ. ಪ್ರಸ್ತುತ ಜಗತ್ತಿನಲ್ಲಿ ಆಧುನಿಕತೆ, ನಗರೀಕರಣ, ಕೈಗಾರೀಕರಣ, ವಿಜ್ಞಾನ, ತಂತ್ರಜ್ಞಾನ ಅಭಿವೃದ್ಧಿ ಎಂಬ ಹಲವು ಕಾರಣಗಳಿಂದ ಪರಿಸರದಲ್ಲಿ ಮಾಲಿನ್ಯದ ಪ್ರಮಾಣ ಹೆಚ್ಚಾಗುತ್ತಲೇ ಹೋಗುತ್ತಿದೆ. ಗಣಿಗಾರಿಕೆ, ಕೈಗಾರಿಕೀಕರಣ, ಅರಣ್ಯನಾಶ ಮೊದಲಾದ ಚಟುವಟಿಕೆಗಳಿಂದ ಪರಿಸರ ನಾಶವಾಗುತ್ತಲೇ ಇದೆ. ಇಂದು ಇಡೀ ವಿಶ್ವ ಎದುರಿಸುತ್ತಿರುವ ಅತಿದೊಡ್ಡ ಸಮಸ್ಯೆ ಎಂದರೆ ಪರಿಸರ ಮಾಲಿನ್ಯ. ಜಲ ಮಾಲಿನ್ಯ, ವಾಯು ಮಾಲಿನ್ಯ, ಶಬ್ದ ಮಾಲಿನ್ಯ ಮಣ್ಣಿನ ಮಾಲಿನ್ಯ ಹಾಗೂ ಸಮುದ್ರ ಮಾಲಿನ್ಯ. ಇವುಗಳ ಪ್ರಮಾಣ ಹಿಂದೆಂದಿಗಿಂತಲೂ ವ್ಯಾಪಕವಾಗಿದೆ. ಆದರೆ, ಅದೆಷ್ಟೋ ವರುಷಗಳು ಕಳೆದರೂ ಮನುಷ್ಯ ಪ್ರಕೃತಿಯ ಬೆಲೆಯೇನೆಂದು ತಿಳಿದುಕೊಂಡಿಲ್ಲ.

### ನಿರಂತರವಾಗಿರಲಿ ನಮ್ಮ ಹೊಣೆ

ಹಸಿರಿಲ್ಲದೆ ಉಸಿರಿಲ್ಲ. ಪರಿಸರವಿದ್ದರೆ ಮಾತ್ರ ಮಾನವನಿದ್ದಾನೆ. ಪರಿಸರವು ಜೀವರಾಶಿಗೆ ಲಭಿಸಿರುವ ಅತ್ಯಂತ ಅಮೂಲ್ಯ ಕೊಡುಗೆಯಾಗಿದೆ. ಪ್ರಕೃತಿಯಲ್ಲಿನ ಗಾಳಿ, ನೀರು, ಮಣ್ಣು, ಮರಗಳಿಲ್ಲದೆ ಮನುಷ್ಯ ಸಂಕುಲವಿಲ್ಲ. ಮಾನವನಲ್ಲಿ ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ. ಪರಿಸರ ದಿನವನ್ನು ಆಚರಿಸಲು ಆರಂಭಿಸುವುದು–ಪರಿಸರ ದಿನಾಚರಣೆಯ ಅಂಗವಾಗಿ ಪ್ರಪಂಚದಾದ್ಯಂತ ಜನರು ಗಿಡಗಳನ್ನು ನೆಡುತ್ತಾರೆ. ಗಿಡಗಳನ್ನು ನೆಡುವುದು, ನೆಟ್ಟ ಗಿಡಗಳಿಗೆ ನೀರು ಹಾಕಿ ಕಾಳಜಿ ಮಾಡುವುದು. ಜಾಗತಿಕ ತಾಪಮಾನ ಏರಿಕೆ ಜಾಗತಿಕ ಎಚ್ಚರಿಕೆ, ಭವಿಷ್ಯದಲ್ಲಿ ಉತ್ತಮ ಜೀವನಕ್ಕಾಗಿ ಈಗಿನ ಪರಿಸರವನ್ನು ಉಳಿಸಿ, ಮರಗಳು ಜೀವ–ಜೀವನ ಅವುಗಳನ್ನು ಕತ್ತರಿಸಬೇಡಿ, ಕಾಡನ್ನು ಬೆಳೆಸಿ, ನಾಡನ್ನು ಉಳಿಸಿ, ಮನೆಗೊಂದು ಮರ, ಊರಿಗೊಂದು ವನ ಎಂಬುದು ವಿಶ್ವ ಪರಿಸರ ದಿನದ ಘೋಷಣೆಗಳನ್ನು ಎಲ್ಲರಿಗೂ ತಿಳಿಸುವುದು. ಪರಿಸರ ಸ್ನೇಹಿಯಾಗಿ, ಕಡಿಮೆ ಖರ್ಚಿನಲ್ಲಿ ಜನರ ಆರೋಗ್ಯವನ್ನು ಸುಧಾರಿಸುವ ಒಂದು ಸಾಧನ. ಪ್ರತಿವರ್ಷ ವಿಶ್ವದಾದ್ಯಂತ ಜಾಗೃತಿ ಕಾರ್ಯಕ್ರಮಗಳನ್ನು ನಡೆಸಿದರೂ, ವರ್ಷ ಕಳೆದಂತೆ ಪ್ರಕೃತಿ ಮೇಲಿನ ಮಾನವ ನಡೆಸುತ್ತಿರುವ ದೌರ್ಜನ್ಯ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವುದು ಮಾತ್ರ ದುರಂತ. ಇನ್ನಾದರೂ ಮನುಷ್ಯ ಜಾಗೃತನಾಗಿ ಪರಿಸರ ಸಂರಕ್ಷಣೆಗಾಗಿ ಕ್ರಮಗಳನ್ನು ಕೈಗೊಂಡು ಹಸಿರು ಕ್ರಾಂತಿ ಮಾಡಬೇಕಿದೆ. ಪರಿಸರ ದಿನಾಚರಣೆ ಕೇವಲ ಒಂದು ದಿನಕ್ಕೆ ಮಾತ್ರ ಸೀಮಿತವಾಗದೇ ಅದು ನಿತ್ಯ ನಿರಂತರವಾಗಿರಬೇಕು. ಆಗ ಮಾತ್ರ ಪರಿಸರ ದಿನಾಚರಣೆಗೆ ನಿಜವಾದ ಅರ್ಥ ಸಿಗುತ್ತದೆ.

## ವಿಶ್ವ ಯೋಗ ದಿನಾಚರಣೆಯ ವಿಶೇಷ ಲೇಖನ

ಪ್ರೀಯ ಓದುಗರೆ,

ಸಂಯುಕ್ತ ಸಹಕಾರಿಯ ಸ್ವಾಭಿಮಾನಿ ಸಹಕಾರಿ ಮಾಸ ಪತ್ರಿಕೆಯಲ್ಲಿ ಇನ್ನೂ ಪ್ರತಿ ಮಾಹೆಯಲ್ಲೂ ಯೋಗದ ಬಗ್ಗೆ ಒಂದು ಅಂಕಣವನ್ನು ಪ್ರಕಟಿಸಲಾಗುತ್ತಿದೆ. ಓದುಗರು ಅದಕ್ಕೆ ತಮ್ಮ ಪ್ರಶ್ನೆ ಹಾಗೂ ಸಲಹೆಗಳನ್ನು ಪ್ರಕಟಣೆಗಾಗಿ ಕಳುಹಿಸಬಹುದಾಗಿದೆ.

# ಸುಸ್ಥಿರ ಆರೋಗ್ಯಕ್ಕಾಗಿ ಯೋಗ

– ಡಾ. ಧಾಕ್ಷಾಯಣಿ ಟಿ.

**ಮೂಗು ಇರುವ ತನಕ ನೆಗಡಿ ತಪ್ಪಿದಲ್ಲ, ದೇಹ ವಿರುವ ತನಕ ಕಾಯಿಲೆ ಕಸಾಲೆ ತಪ್ಪಲ್ಲ. ಹಣದಿಂದ ಎಲ್ಲವನ್ನೂ ಕೊಳ್ಳಬಹುದು, ಆದರೆ ಆರೋಗ್ಯವನ್ನಲ್ಲ, ಆದ್ದರಿಂದಲೇ ಆರೋಗ್ಯವೇ ಭಾಗ್ಯ.**

ನಾವು ಉತ್ತಮ ಆರೋಗ್ಯದಿಂದ ಇದ್ದರೆ ಮಾತ್ರ ಉತ್ತಮ ಜೀವನ ನಡೆಸಬಹುದು. ಇತ್ತೀಚಿನ ದಿನಗಳಲ್ಲಿ ನಮ್ಮ ಆಹಾರ ಪದ್ದತಿ ಕಲುಷಿತ ಗಾಳಿ, ಕಲುಷಿತ ನೀರು, ಮಾನಸಿಕ ಒತ್ತಡದ ಬದುಕು ಹೀಗೆ ಹಲವಾರು ಕಾರಣಗಳಿಂದ ನಮ್ಮ ಆರೋಗ್ಯವು ದಿನದಿಂದ ದಿನಕ್ಕೆ ಹದಗೆಟ್ಟು ಕಾಯಿಲೆಗಳ ಖಜಾನೆ ಆಗಿದೆ ಎಂದರೆ ತಪ್ಪಾಗಲಾರದು. ಹಾಗಾದರೆ ಈ ಸಮಸ್ಯೆಗೆ ಪರಿಹಾರ ಇಲ್ಲವೇ ? ಖಂಡಿತಾ ಇದೆ. ನಾವು ನಮ್ಮ ಜೀವನಶೈಲಿಯನ್ನು ಬದಲಾಯಿಸಿಕೊಳ್ಳುವುದರ ಜೊತೆಗೆ ಸೂಕ್ಷ್ಮ ವ್ಯಾಯಾಮಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಸೂಕ್ಷ್ಮ ವ್ಯಾಯಾಮ ಎಂದರೆ ಯೋಗಾಸನ ಪ್ರಾಣಾಯಾಮ ಧ್ಯಾನಗಳಾಗಿವೆ.

ಹಿಂದಿನ ಕಾಲದಲ್ಲಿ ನಮ್ಮ ಋಷಿ ಮುನಿಗಳು ತಮ್ಮ ಆತ್ಮ ದರ್ಶನಕ್ಕೆ ಕಂಡುಕೊಂಡ ಮಾರ್ಗವೇ ಯೋಗ, ಯೋಗ ಎಂದರೆ ಇಂದಿನ ರೀತಿ ಕೇವಲ ದೈಹಿಕ ಕಸರತ್ತು ಆಗಿರಲಿಲ್ಲ. ಕೇವಲ ಪ್ರಾಣಾಯಾಮ, ಧ್ಯಾನಕ್ಕೆ ಸೀಮಿತವಾಗಿರಲಿಲ್ಲ, ಅದೊಂದು ಜೀವನ ಪದ್ದತಿ ಯಾಗಿತ್ತು, ನಡೆ, ನುಡಿ, ಆಚರಣೆ ಎಲ್ಲವೂ ಯೋಗವೇ, ಯೋಗವೇ ಜೀವನ, ಜೀವನವೇ ಒಂದು ಯೋಗ ಎಂಬಂತೆ ಬಾಳಿ ಬದುಕಿದವರು ನಮ್ಮ ಪೂರ್ವಜರು, ವೇಗದ ಬದುಕಿಗೆ ಸಿಕ್ಕ ಧಾವಂತದ ಜೀನವ ನಡೆಸುತ್ತಿರುವ ನಾವು ಮಾನಸಿಕ ಒತ್ತಡ, ದೈಹಿಕ ಖಾಯಿಲೆಗಳ ಸುಳಿಗೆ ಸಿಕ್ಕ ಹೊರಬರಲೂ ಆಗದೆ, ಅಲ್ಲಿಯೂ ಇರಲಾಗದೆ ಪರಿತಪಿಸುತ್ತಿರುವುದು ಅಷ್ಟೇ ವಾಸ್ತವ, ಬಹುಶ: ಇದೆ ಕಾರಣಕ್ಕೆ ಇರಬಹುದು. ಅಂದು ಕೇಳರಿಯದೆ ಖಾಯಿಲೆಗಳಿಗೆ ಇಂದು ನಾವೆಲ್ಲರೂ ತುತ್ತಾಗುತ್ತಿದ್ದೇವೆ.

ಇನ್ನೂ ಮಕ್ಕಳ ವಿಚಾರಕ್ಕೆ ಬಂದರೆ, ಎಲ್ಲಾ ಮಕ್ಕಳಲ್ಲಿ ಬೊಜ್ಜಿನ ಸಮಸ್ಯೆ, ಮಾನಸಿಕ, ಒತ್ತಡ, ಮಂದ ದೃಷ್ಠಿ, ಹೀಗೆ ಹಲವಾರು ಸಮಸ್ಯೆಗಳು ಕಂಡು ಬರುತ್ತಿದೆ. ಇದಕ್ಕೆ ಮೂಲ ಕಾರಣಗಳನ್ನು ಹುಡುಕಿ ಹೊರಟರ, ಮಕ್ಕಳು ಸರಿಯಾದ ಸಮಯಕ್ಕೆ ಆಹಾರ ಸೇವಿಸದಿರುವುದು, ದೈಹಿಕ ಚಟುವಟಿಕೆಗಳಲ್ಲಿ ಭಾಗವಹಿಸದೇ ಇರುವುದು, ಸುಲಭವಾಗಿ ಸಿಗುವ ಫಾಸ್ಟ್ ಪುಡ್‌ಗಳಿಗೆ ಮಾರು ಹೋಗಿರುವುದು ಕಂಡು ಬರುತ್ತದೆ. ಹಾಗಾಗಿ ಇಂದಿನ ಮಕ್ಕಳಲ್ಲಿ ರೋಗ ನಿರೋಧಕ ಶಕ್ತಿಯು ಕುಂಠಿತವಾಗುತ್ತಿದೆ. ಈ ಮೇಲಿನ ಇಲ್ಲಾ ಸಮಸ್ಯೆಗಳಿಗೆ ಪರಿಹಾರವೆಂದರೆ ಮಕ್ಕಳನ್ನು ದೈಹಿಕ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಪ್ರಚೋದಿಸುವುದು. ಪೌಷ್ಟಿಕ ಆಹಾರಗಳನ್ನು ನೀಡುವುದು. ಮಕ್ಕಳಲ್ಲಿ ಏಕಾಗ್ರತೆ, ಶಿಸ್ತು, ಓದಿನಲ್ಲಿ ಆಸಕ್ತಿ, ರೋಗ ನಿರೋಧಕ ಶಕ್ತಿ, ಆತ್ಮ ವಿಶ್ವಾಸವನ್ನು ಹೆಚ್ಚಿಸಲು ಇರುವ ಮಾರ್ಗಗಳಲ್ಲಿ ಯೋಗಾಭಾಸವೂ ಒಂದು.

### ಸೂರ್ಯ ನಮಸ್ಕಾರ :

ದೈಹಿಕ, ಮಾನಸಿಕ, ಆಧ್ಯಾತ್ಮಿಕ ಆರೋಗ್ಯವನ್ನು ಸುಸ್ಥಿತಿಯಲ್ಲಿ ಇಟ್ಟುಕೊಳ್ಳಲು ನೆರವಾಗುವ ಪುರಾತನ ಭಾರತೀಯ ವ್ಯಾಯಾಮಗಳಲ್ಲಿ ಅತ್ಯಂತ ಮಹತ್ವದ ಸ್ಥಾನ ಪಡೆದಿರುವುದು ಸೂರ್ಯ ನಮಸ್ಕಾರ ಶರೀರದಲ್ಲಿನ ಕೊಬ್ಬಿನ ಅಂಶ ಕರಗಿಸಲು, ದೇಹವನ್ನು ಲವಲವಿಕೆಯಿಂದ ಇರಿಸಲು ಥೈರಾಯಿಡ್, ಪಿ.ಸಿ.ಓ.ಡಿ., ಪಿ.ಸಿ.ಓ.ಎಸ್ ಹೀಗೆ ಹತ್ತು ಹಲವಾರು ಸಮಸ್ಯೆಗಳಿಗೆ ಸೂರ್ಯನಮಸ್ಕಾರವನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ ಈ ಎಲ್ಲಾ ಸಮಸ್ಯೆಗಳಿಂದ ಮುಕ್ತಿ ಹೊಂದಬಹುದು.

### ಆಸನಗಳು :

ಆಸನಗಳು ಅಭ್ಯಾಸದಿಂದ ಮಾನಸಿಕ ಸಂಯಯ, ಏಕಾಗ್ರತೆ, ಸ್ವರಣ ಶಕ್ತಿ, ಬುದ್ಧಿ ವಿಕಾಸ ಹೆಚ್ಚಾಗುತ್ತದೆ. ಆಧಿಕ ರಕ್ತದೊತ್ತಡ, ಮಾನಸಿಕ ಒತ್ತಡ, ಮೈಗ್ರೇನ್, ಮಲಬದ್ದತೆ, ಎದೆಉರಿ, ಹೃದಯದ ಸಮಸ್ಯೆಗಳು ನಿವಾರಣೆ ಆಗುವುದು.

### ಪ್ರಾಣಾಯಾಮ :

ಇತ್ತೀಚಿನ ಆಧುನಿಕ ಜೀವನಶೈಲಿಯಿಂದ ಖಿನ್ನತೆಯ ಸಮಸ್ಯೆ ಬೃಹದಾಕಾರವಾಗಿ ಬೆಳೆಯುತ್ತಿದೆ. ನಿತ್ಯದ ಒತ್ತಡದ ಜೀವನದಲ್ಲಿ ಒಂದಿಷ್ಟು ಸಮಯವನ್ನು ಪ್ರಾಣಾಮಾಯಕ್ಕೆ ನಿಗದಿಪಡಿಸಿದಲ್ಲಿ ಖಿನ್ನತೆ, ಉದ್ವೇಗ, ದೇಹದಲ್ಲಿನ ಕಲ್ಮಶಗಳನ್ನು ದೂರ ಮಾಡಲು ಶ್ವಾಸಕೋಶಗಳನ್ನು ಬಲಗೊಳಿಸಲು, ಉಸಿರಾಟದ ಸಮಸ್ಯೆಯನ್ನು ನಿವಾರಿಸಲು ಸಹಾಯವಾಗುತ್ತದೆ.

### ಧ್ಯಾನ :

ಧ್ಯಾನದಿಂದ ಒತ್ತಡ, ಸಿಟ್ಟು, ಉದ್ವೇಗ ನಿವಾರಣೆಯಾಗುತ್ತದೆ. ಧ್ಯಾನದ ಸ್ಥಿತಿಯಲ್ಲಿದ್ದಾಗ ದೀರ್ಘವಾದ ಉಸಿರಾಟದೊಂದಿಗೆ ಶರೀರದಲ್ಲಿ ರೋಗ ನಿರೋಧಕ ಶಕ್ತಿ ಹೆಚ್ಚಾಗುತ್ತದೆ. ನಿದ್ರಾಹೀನತೆ ದೂರವಾಗುತ್ತದೆ. ಶಾಂತವಾದ ಮನಸ್ಸು ಸಧೃಡವಾದ ಶರೀರ ನಿಮ್ಮದಾಗುತ್ತದೆ. ಪ್ರತಿನಿತ್ಯ ಕನಿಷ್ಟ ಮೂವತ್ತು ನಿಮಿಷಗಳ ಕಾಲ ಧ್ಯಾನವನ್ನು ಮಾಡಬೇಕು.

ಯೋಗವು ಔಷಧಿಗಳಿಗೆ ಪರ್ಯಾಯವಲ್ಲ. ಬದಲಿಗೆ ರೋಗಗಳನ್ನು ತಡೆಗಟ್ಟುವ ಮುನ್ನೆಚ್ಚರಿಕೆ ಕ್ರಮವಾಗಿದೆ. ನಮ್ಮ ದೇಹ ಮತ್ತು ಅದರ ವ್ಯವಸ್ಥೆಗಳಲ್ಲಿ ಸಮತೋಲನವನ್ನು ಬೆಳೆಸುವ ಮೂಲಕ ನಾವು ನಮ್ಮ ಆರೋಗ್ಯ ಶಕ್ತ ಮತ್ತು ಒಟ್ಟಾರೆ ಜೀವನದ ಗುಣಮಟ್ಟವನ್ನು ಹೆಚ್ಚಿಸಿಕೊಳ್ಳಬೇಕು. ಒತ್ತಡದ ಜೀವನವು ಅನಾರೋಗ್ಯದ ಪ್ರಮುಖ ಕಾರಣಗಳಲ್ಲಿ ಒಂದಾಗಿದೆ. ನಾವು ತೀವ್ರವಾಗಿ ಒತ್ತಡಕ್ಕೊಳಗಾದಾಗ ನಮ್ಮ ಅಂಗಗಳು, ಸ್ನಾಯುಗಳು, ಮೂಳೆಗಳು ಸ್ನಾಯುರಜ್ಜುಗಳನ್ನು ಹಾನಿಗೊಳಿಸುತ್ತದೆ. ರೋಗನಿರೋಧಕ ಶಕ್ತಿ ಕಡಿಮೆಯಾದಾಗ ನಮ್ಮ ಸುತ್ತಮುತ್ತಲಿನ ಜನರು ಸೀನುವಾಗ ಮತ್ತು ಕೆಮ್ಮವಾಗ ರೋಗಾಣುಗಳು ದೇಹಕ್ಕೆ ಪ್ರವೇಶಿಸಿ ಖಾಯಿಲೆಯನ್ನು ಉಂಟುಮಾಡುತ್ತದೆ.

ವೈರಾಣುಗಳು ವಾಯುಗಾಮಿಯಾಗಿರುವುದರಿಂದ ಬೇಗನೆ (ಹತ್ತಿರ ಸಂಪರ್ಕದಲ್ಲಿರುವವರಿಗೆ) ಹರಡುತ್ತದೆ. ವೈರಾನುವು ಮೂಗು ಮತ್ತು ಗಂಟಲಿನ ಮೂಲಕ ಹಾದು ಹೋಗುತ್ತದೆ. ನಮ್ಮ ದೇಹವು ವೈರಾಣುವಿನ ಮೇಲೆ ದಾಳಿ ಮಾಡಲು ಬಿಳಿ ರಕ್ತ ಕಣಗಳನ್ನು ಗಂಟಲಿನ ಬಳಿ ಕಣಗಳನ್ನು ಗಂಟಲಿನ ಬಳಿ ಕಳುಹಿಸುತ್ತದೆ. ಈ ಪ್ರಕ್ರಿಯೆಗೆ ಯೋಗವು ಬಹಳ ಸಹಕಾರಿಯಾಗಿದೆ. ಯೋಗವು ನಮ್ಮ ದೇಹವನ್ನು ದೈಹಿಕವಾಗಿ ಮತ್ತು ಮಾನಸಿಕವಾಗಿ ಬಲಪಡಿಸುವ ಸಮಗ್ರ ಅಭ್ಯಾಸವಾಗಿದೆ. ಪರಿಣಾಮವಾಗಿ ದೇಹದ ರಕ್ಷಣಾಕಾರ್ಯ ವಿಧಾನವು ಚುರುಕಾಗಿರುತ್ತದೆ. ಆರೋಗ್ಯಕರ ಜೀವನಶೈಲಿ, ಆರೋಗ್ಯಕರ ಆಹಾರ ಆಯ್ಕೆಗಳು ಹಾಗೂ ಯೋಗ, ಪ್ರಾಣಾಯಾಮ ಮತ್ತು ಧ್ಯಾನದ ನಿಯಮಿತ ಅಭ್ಯಾಸ ಅಳವಡಿಸಿಕೊಂಡಾಗ ಆರೋಗ್ಯಕರ ಜೀವನವನ್ನು ಸುಲಭವಾಗಿ ಸಾಧಿಸಬಹುದು.



# ಸಹಕಾರಿಗಳ ಸ್ವಾಯತ್ತತೆ ಪಾರದರ್ಶಕ, ಕಳಂಕರಹಿತ ಹಾಗೂ ಅಭಿವೃದ್ಧಿ ಪರವಾಗಿರಬೇಕು - ಸಹಕಾರಿಗಳಲ್ಲಿ ಸ್ವೇಚ್ಛತೆ ಸಲ್ಲದು.

– ಶ್ರೀ ಸಿ.ಎನ್ ಪರಶಿವಮೂರ್ತಿ

ಸಹಕಾರಿ ಆಂದೋಲನಕ್ಕೆ ಪೂರಕವಾಗಿ ಅಂತರ ರಾಷ್ಟ್ರೀಯಾ ಒಕ್ಕೂಟ ಏಳು ಸಹಕಾರ ತತ್ವಗಳನ್ನು ರೂಪಿಸಿದೆ. ಅವುಗಳ ಆಧಾರದಲ್ಲಿಯೇ ಸಹಕಾರ ಸಂಸ್ಥೆಗಳು ಕಾರ್ಯನಿರ್ವಹಿಸಬೇಕು. ಕರ್ನಾಟಕ ಸೌಹಾರ್ದ ಸಹಕಾರಿ ರಚಿಸುವಾಗ ಈ ಎಳು ಸಹಕಾರಿ ತತ್ವಗಳು ಅಧ್ಯಾಯ X ರಲ್ಲಿ ಉಲ್ಲೇಖಿಸಿದೆ. ಅದರಲ್ಲಿ ಈ ಲೇಖನಕ್ಕೆ ಸಂಬಂಧಪಟ್ಟ ತತ್ವವೆಂದರೆ ಸದಸ್ಯರು ಸಹಕಾರಿಯಲ್ಲಿ ಹೂಡಿದ ಬಂಡವಾಳಕ್ಕೆ ಸೀಮಿತ ಪ್ರತಿ ಪಲಾಪೇಕ್ಷೆ ಮಾಡತಕ್ಕದ್ದು ಎಂದು ಈ ಕೆಳಕಂಡಂತೆ ಉಲ್ಲೇಖಿಸಿದೆ.

**ಕಲಂ.67(3) :**

"ಸದಸ್ಯರು ತಮ್ಮ ಸಹಕಾರಿಗೆ ನ್ಯಾಯ ಸಮ್ಮತವಾಗಿ ವಂತಿಗೆ ನೀಡುತ್ತಾರೆ ಮತ್ತು ಅದರ ಬಂಡವಾಳವನ್ನು ಪ್ರಜಾಸತ್ತಾತ್ಮಕವಾಗಿ ನಿಯಂತ್ರಿಸುತ್ತಾರೆ. ಈ ಬಂಡವಾಳದ ಮೇಲೆ ಸಾಮಾನ್ಯವಾಗಿ ಅವು ಸೀಮಿತ ಪರಿಹಾರವನ್ನು ಪಡೆಯುತ್ತಾರೆ. ಸದಸ್ಯರು, ಹೆಚ್ಚುವರಿ ಹಣವನ್ನು ಈ ಮುಂದಿನ ಯಾವುದೇ ಅಥವಾ ಎಲ್ಲಾ ಉದ್ದೇಶಗಳಿಗೆ ಹಂಚಿಕೆ ಮಾಡುತ್ತಾರೆ. ಕಡೆಯ ಪಕ್ಷ ಮೀಸಲು ನಿಧಿಯ ಒಂದು ಭಾಗ ಅವಿಭಾಜ್ಯವಾಗಿರುವಂತೆ ಅದನ್ನು ಸ್ಥಾಪಿಸುವ ಮೂಲಕ ಸಹಕಾರಿಯ ಅಭಿವೃದ್ಧಿ, ಸಹಕಾರಿಯೊಂದಿಗೆ ಸದಸ್ಯರಿಗಿರುವ ವ್ಯವಹಾರಗಳ ಪ್ರಮಾಣಕ್ಕನುಗುಣವಾಗಿ ಸದಸ್ಯರಿಗೆ ಅನುಕೂಲ ಕಲ್ಪಿಸುವುದು ಮತ್ತು ಸದಸ್ಯರಿಂದ ಅನುಮೋದನೆಯಾದ ಇತರ ಚಟುವಟಿಕೆಗಳನ್ನು ಬೆಂಬಲಿಸುವುದು."

ಈ ಮೇಲ್ಕಂಡ ಮೂರನೆ ಸಹಕಾರಿ ತತ್ವವನ್ನು ಅನುಸರಿಸಿ, ಸೌಹಾರ್ದ ಕಾಯಿದೆ ರಚನೆ ಸಂದರ್ಭದಲ್ಲಿ ಪೀಠಿಕೆಯಲ್ಲಿ ಈ ಕೆಳಕಂಡಂತೆ ಉಲ್ಲೇಖಿಸಿದೆ.

"ಸದಸ್ಯರೇ ಸಂಪೂರ್ಣ ಒಡೆತನ ಹೊಂದಿರುವ, ನಿರ್ವಹಿಸುವ ಮತ್ತು ನಿಯಂತ್ರಿಸುವ ಸ್ವಸಹಾಯ ಮತ್ತು ಪರಸ್ಪರ ನೆರವಿನ ಮೇಲೆ ಆಧಾರಿತವಾದ ಸಹಕಾರಿ ತತ್ವಗಳಿಂದ ಮಾರ್ಗದರ್ಶನ ಪಡೆದ, ಜವಾಬ್ದಾರಿಯುತ, ಸ್ವರ್ಧಾತ್ಮಕ ಸ್ವಾವಲಂಬಿ ಆರ್ಥಿಕ ಉದ್ಯಾನುಗಾದ ಸಹಕಾರಿಗಳಿಗೆ ಮಾನ್ಯತೆ ಮತ್ತು ಅವುಗಳ ಸ್ವಯಂ ರಚನೆಗೆ ಪ್ರೋತ್ಸಾಹ ನೀಡುವುದಕ್ಕೆ ಮತ್ತು ಅದಕ್ಕೆ ಸಂಬಂಧಿಸಿದ ಇತರ ವಿಷಯಗಳಿಗೆ ಉಪಬಂಧ ಕಲ್ಪಿಸುವ ಅಧಿನಿಯಮ."

ಈ ಮೇಲ್ಕಂಡ ಪೀಠಿಕೆ ಗಮನಿಸಿದ ನಂತರ ಅರ್ಥೈಸಬೇಕಾದ ವಿಷಯವೆಂದರೆ, ಸೌಹಾರ್ದ ಕಾಯಿದೆಯಲ್ಲಿ ರಚನೆಯಾದ ಪ್ರತಿಯೊಂದು ಸಹಕಾರಿ, ಸ್ವಾಯತ್ತ, ಸ್ವತಂತ್ರ ಮತ್ತು ಸ್ವಯಂ ನಿಯಂತ್ರಣ ಹೊಂದಿದ ಸಂಸ್ಥೆ ಎಂದಿದ್ದರೂ. ಅಂತಹ ಸಂಸ್ಥೆಯ ಮಂಡಳಿಗಳು ಜವಾಬ್ದಾರಿಯುತ, ಸ್ಪರ್ಧಾತ್ಮಕ, ಸ್ವಾವಲಂಬಿ, ಆರ್ಥಿಕ ಸಂಸ್ಥೆ ಎಂಬುದನ್ನು ಮರೆಯಬಾರದು. ಬಹಳಷ್ಟು ಸಹಕಾರಿಗಳು ಈ ರೀತಿ ಪ್ರಯತ್ನ ಮಾಡುತ್ತಿದ್ದರೂ, ಕೆಲವು ಸಂಸ್ಥೆಗಳು ಮಾಡುವ ಸ್ವೇಚ್ಚತೆ ಗಮನಿಸಿದಾಗ, ಮಂಡಳಿಗಳು ತಮ್ಮ ಜವಾಬ್ದಾರಿಯಿಂದ ವಿಮುಖರಾದಂತೆ ತೋರುತ್ತಿದೆ. ಇದರ ಜೊತೆಗೆ ಆಯ್ಕೆಯಾದ ಪದಾಧಿಕಾರಿಗಳು, ತನ್ನ ಪ್ರತಿಷ್ಠೆ ಎಂದು ಭಾವಿಸಿ ಮನಸೋ ಇಚ್ಛೆ ಕಾರ್ಯನಿರ್ವಹಿಸಿದರೆ, ಅದರಿಂದ ಸಹಕಾರಿ ಆಂದೋಲನದ ಬೆಳವಣಿಗೆ ಕುಂಟಿತವಾಗುವುದರ ಜೊತೆಗೆ ಸಾರ್ವಜನಿಕರಲ್ಲಿ ತಪ್ಪು ಸಂದೇಶ ಮುಟ್ಟಿಸಿ, ಬೆಳವಣಿಗೆ ಕುಂಟಿತವಾಗುತ್ತದೆ. ಆದ್ದರಿಂದ ಸಹಕಾರಿ ಮಂಡಳಿಗಳು ಜವಾಬ್ದಾರಿಯಿಂದ ಕೆಲಸ ನಿರ್ವಹಿಸಿದಾಗ ಮಾತ್ರ ಸಹಕಾರಿ ಸಂಸ್ಥೆಗಳು ಬೆಳೆಯಲು ಮತ್ತು ಸದಸ್ಯರಿಗೆ ಅಗತ್ಯವಾದ ಸೇವೆ ನೀಡಲು ಸಾಧ್ಯ.

ಈ ಲೇಖನದ ಉದ್ದೇಶ ಕೆಲವು ಸಂಸ್ಥೆಗಳು ಮಾಡುವ ತಪ್ಪು ನಿರ್ಧಾರಗಳಿಂದ ಸಹಕಾರಿ ಅಂದೋಲನಕ್ಕೆ ಧಕ್ಕೆಯಾಗುತ್ತಿದೆ ಮತ್ತು ಇದನ್ನು ಸರಿದಾರಿಗೆ ತರುವಲ್ಲಿ ಸೌಹಾರ್ದ ಕಾಯಿದೆಯಲ್ಲಿ ರೂಪಿಸಿದ ಸಂಯುಕ್ತ ಸಹಕಾರಿ ಎಂಬ ಶಾಸನಾತ್ಮಕ ಸಂಸ್ಥೆಯಿಂದ ಸಾಧ್ಯ. ಆದರೆ ಆ ಧಿಕ್ಕಿನಲ್ಲಿ ಇನ್ನು ಹೆಚ್ಚಿನ ಪ್ರಯತ್ನ ಅವಶ್ಯಕ. ಇದನ್ನು ಸಮರ್ಥಿಸಲು ಕೆಲವು ಉದಾಹರಣೆ ನೀಡುವುದು ಅವಶ್ಯಕ.

1) "ಮೈಸೂರು ಜಿಲ್ಲೆಯಲ್ಲಿ ಒಂದು ಸೌಹಾರ್ದ ಸಹಕಾರಿ ತನ್ನ ಉಪವಿಧಿಗಳಲ್ಲಿ ಸಹಕಾರಿ ಗಳಿಸಿದ ಲಾಭಾಂಶವನ್ನು ಉಪವಿಧಿ 74 ರಲ್ಲಿ ಈ ಕೆಳಕಂಡಂತೆ ಅಳವಡಿಸಿಕ್ಕೊಂಡಿದೆ.

**ಅಧ್ಯಾಯ 11** – ನಿವ್ವಳ ಲಾಭವಿನಿಯೋಗ 74 :– ನಿವ್ವಳ ಲಾಭದಲ್ಲಿ ಮುಕ್ತವಾಗಿ ಈ ಮುಂದಿನವುಗಳ ಬಗ್ಗೆ ಹಣ ವಿನಿಯೋಗ.

ಅ) ಸಹಕಾರ ರಚಿಸುವ ಮೀಸಲು ನಿಧಿಗೆ ಶೇ.25

ಆ) ಸಂಯುಕ್ತ ಸಹಕಾರಿ ಶಿಕ್ಷಣ ನಿಧಿಗೆ ಶೇ.2

ಇ) ಅನಿರೀಕ್ಷಿತ ನಡ್ಡೆಗಳ ಅಥವಾ ಸಾದಿಲ್ವಾರು ವೆಚ್ಚಗಳನ್ನು ಭರಿಸಲು ಕಾರ್ಯಚರಣಾ ಮೀಸಲು ನಿಧಿಗೆ ಶೇ.20

ಈ) ಸಾಮಾನ್ಯ ಸಭೆಯು ಅನುಮೋದಿಸಿರುವ ಉದ್ದೇಶಕ್ಕಾಗಿ ಸಾಮಾನ್ಯ ಕ್ಷೇಮ ನಿಧಿಗೆ ಶೇ.5

ಉ) ನೌಕರರಿಗೆ ಸಂದಾಯ ಮಾಡಬೇಕಾದ 2 ತಿಂಗಳ ವೇತನವನ್ನು ಮೀರದಂತೆ ಬೋನಸ್ಸು.

ಊ) ಸದಸ್ಯರಿಗೆ ಲಾಭಾಂಶ

ಋ) ಸಾಮಾನ್ಯ ಸಭೆಯು ಉಪವಿಧಿ 22 ರನ್ವಯ ರಚಿಸುವ ವಿಶೇಷ ನಿಧಿಗಳಿಗೆ

ಎ) ಎಲ್ಲಾ ಹಂಚಿಕೆ ನಂತರ ಉಳಿದ ಯಾವುದೇ ಲಾಭಾಂಶವನ್ನು ಮೀಸಲು ನಿಧಿಗೆ ವರ್ಗಾಯಿಸತಕ್ಕದ್ದು.

ಏ) ನಿವ್ವಳ ಲಾಭ ಹಂಚಿಕೆಯನ್ನು ನೇರ ಕ್ರಮದಲ್ಲಿ ಮಾಡತಕ್ಕದ್ದು."

ಈ ಮೇಲ್ಕಂಡ ಅವಕಾಶದಂತೆ, ಈ ಸಹಕಾರಿ ತನ್ನ 2019, 2020, 2021 ರ ಸಾಮಾನ್ಯ ಸಭೆಯಲ್ಲಿ ಸದಸ್ಯರು ಹೂಡಿದ ಪಾಲು ಬಂಡವಾಳದ

Swabhimani Sahakari, Kannada, English Monthly, Publishing Date 5th, Posting Day 8th
posted at Bangalore PSO, Mysore Road, Bangalore-560026
Registered No. KA/BGW/1744/2020-2022 RNI NO. KARBIL-2004/18001/Pages 36
Licensed to post without Prepayment License No. PMG BG/WPP-384/2020-2022.

ಮೇಲೆ ಶೇ.100 ರಷ್ಟು ಡಿವಿಡೆಂಡ್ ನೀಡಲು ತೀರ್ಮಾನಿಸಿ ಅದು ತೆಗೆದುಕೊಂಡ ತೀರ್ಮಾನ (24.09.2019) ಈ ಕೆಳಕಂಡಂತೆ ಇದೆ.

"ಲಾಭಾಂಶ 2018–19ರ ಆಹ್ವಾನ ಪತ್ರಿಕೆಯ ಪುಟ ನಂ.15 ರಂತೆ ಸೌಹಾರ್ದ ಫೆಡರಲ್‌ರದರ ಮಾರ್ಗದರ್ಶನದಂತೆ ಆಂತರಿಕ ಲೆಕ್ಕ ಪರಿಶೋಧಕರು ಲಾಭ ಹಂಚಿಕೆಯ ತಃಖ್ತೆಯನ್ನು ತಯಾರಿಸಿದ್ದು. ಲಾಭಗಳನ್ನು ಫಂಡ್‌ಗಳಿಗೆ ಹಂಚಿಕೆ ಮಾಡಲಾಗಿದ್ದು ಉಳಿದ ಲಾಭಾಂಶದಲ್ಲಿ ಸಹಕಾರಿಯ ಸದಸ್ಯರಿಗೆ ಶೇ.100 ರಂತೆ ಡಿವಿಡೆಂಡ್ ಬಿಡುಗಡೆಗೆ ನಿರ್ದೇಶಕರು ಸಭೆಯ ಅನುಮತಿ ಕೋರಲಾಗಿ ಮಹಾಸಭೆಯ ಮೇಲ್ಕಂಡ ಅಂಶಗಳನ್ನು ಚರ್ಚಿಸಿ ಸರ್ವಾನುಮತದಿಂದ ಒಪ್ಪಿಗೆ ನೀಡಿತು."

ಈ ಮೇಲ್ಕಂಡ ತೀರ್ಮಾನದಂತೆ 25.12.2020 ಮತ್ತು 24.12.2021ರ ಸಾಮಾನ್ಯ ಸಭೆಯಲ್ಲಿಯೂ ಒಪ್ಪಿಗೆ ಪಡೆದು ಶೇ.100 ರಷ್ಟು ಪಾಲು ಬಂಡವಾಳದ ಮೇಲೆ ಡಿವಿಡೆಂಡ್ ಪಾವತಿ ಮಾಡಲು ತೀರ್ಮಾನಿಸಿದೆ.

ಮೂರನೇ ಸಹಕಾರ ತತ್ವದಲ್ಲಿ ಸ್ಪಷ್ಟವಾಗಿ ನಮೂದಿಸಿರುವುದು ಬಂಡವಾಳದ ಮೇಲೆ ಸೀಮಿತ ಲಾಭಾಂಶ/ ಭಾಗವನ್ನು ಪಡೆಯತಕ್ಕದ್ದು ಎಂದಿದ್ದರೂ. ಹೂಡಿಕೆಯನ್ನು ಲಾಭಾಂಶವೆಂದು ಘೋಷಿಸಿದಾಗ ಇದನ್ನು ಸ್ವೇಚ್ಚತೆ ಎಂದೇ ತೀರ್ಮಾನಿಸಬೇಕು. ಲಾಭಾಂಶ ಹಂಚಿಕೆ ಮಾಡುವಾಗ ಸದಸ್ಯರು ಹೂಡಿದ ಪಾಲು ಬಂಡವಾಳವೇ ಸಹಕಾರಿಯ ಮೂಲ ನಿಧಿ ಈ ನಿಧಿಯ ಮೇಲೆ ಲಾಭಾಂಶ ನಿಗದಿ ಪಡಿಸುವಾಗ ಗಮನಿಸಬೇಕಾದ ಪ್ರಮುಖ ಅಂಶಗಳೆಂದರೆ, ಅಷ್ಟು ಹಣವನ್ನು ಬೇರೆ ಸಂಸ್ಥೆಗಳು, ಅಂದರೆ ವಾಣಿಜ್ಯ ಸಹಕಾರಿ, ಸಹಕಾರಿ ಬ್ಯಾಂಕನ್ನು ಹೂಡಿದರೆ, ಅದರಿಂದ ಪಡೆಯುವ ಗರಿಷ್ಟ ಪ್ರಮಾಣದ ಡಿವಿಡೆಂಡ್ ಪಾವತಿಸುವುದು ನೀತಿ. ಇದಕ್ಕೆ ಪೂರಕವಾಗಿ 1959 ಸಹಕಾರಿ ಸಂಘಗಳ ನಿಯಮ 22(3) ರಲ್ಲಿ ಶೇ.25 ನ್ನು ಮೀರಿದ ಲಾಭಾಂಶವನ್ನು ಸಂದಾಯ ಮಾಡತಕ್ಕದ್ದಲ್ಲ ಎಂದು ನಿಗದಿ ಪಡಿಸಿದೆ. ಅದನ್ನು ಸೌಹಾರ್ದ ಕಾಯಿದೆಯಲ್ಲಿ ಸೇರಿಸಿಲ್ಲವೇಕೆಂದರೆ, ಸೌಹಾರ್ದ ಕಾಯಿದೆಯಲ್ಲಿ ಸೂಚಿಸಿದ ನೀತಿಯಂತೆ, ಸಹಕಾರಿ ಮಂಡಳಿ/ಸದಸ್ಯರು ಜವಾಬ್ದಾರಿಯುತ, ಸ್ವಯಂ ನಿಯಂತ್ರಿಸುವ ಶಕ್ತಿ ಹೊಂದಿದ್ದಾರೆಂದು. ಆದರೆ ಈ ಮೇಲ್ಕಂಡ ಉದಾಹರಣೆ ಗಮನಿಸಿದರೆ, ಸ್ವಾಯತ್ತತೆ, ಸ್ವಯಂ ನಿಯಂತ್ರಣವನ್ನು ಸ್ವೇಚ್ಚತೆ ಎಂದು ಅರ್ಥೈಸಿಕ್ಕೊಂಡರೆ, ಸಹಕಾರಿ ಬೆಳವಣಿಗೆಗೆ ತೊಡಕ್ಕಾಗುತ್ತದೆ ಎಂಬ ಅಂಶ ಆಡಳಿತ ಮಂಡಳಿ ಗಮನಿಸುವುದೇ ಇಲ್ಲ. ಇದನ್ನು ಸ್ವೇಚ್ಚತೆ ಎಂದು ತಿಳಿಯಬೇಕಲ್ಲವೇ?

ಈ ಮೇಲ್ಕಂಡ ಉದಾಹರಣೆಯಲ್ಲಿ ಸಾಮಾನ್ಯ ಸಭೆ ತೆಗೆದುಕೊಂಡ ತೀರ್ಮಾನದಲ್ಲಿ ಸ್ಪಷ್ಟವಾಗಿ ನಮೂದಾಗಿರುವ ಪ್ರಮುಖ ವಿಷಯವೆಂದರೆ ಸಂಯುಕ್ತ ಸಹಕಾರಿಯ ಮಾರ್ಗದರ್ಶನದಂತೆ ಶೇ.100 ರ ಡಿವಿಡೆಂಡ್ ಹಂಚಲಾಗಿದೆ ಎಂದು ನಮೂದಾಗಿರುವುದು. ಈ ಬಗ್ಗೆ ಸಂಯುಕ್ತ ಸಹಕಾರಿಯೂ ಕ್ಷೇತ್ರ ಸಿಬ್ಬಂದಿಯಿಂದ ವರದಿ ಪಡೆದು, ಅಂತ ಮಾರ್ಗದರ್ಶನ ನೀಡಿದ ಸಂಯುಕ್ತ ಸಹಕಾರಿಯ ಅಧಿಕಾರಿ ಮೇಲೆ ಜರುಗಿಸಬೇಕು.

ಇದಕ್ಕೆ ಪೂರಕವಾಗಿ ಮತ್ತೊಂದು ಉದಾಹರಣೆ ನೀಡುವುದೆಂದರೆ, ಉತ್ತರ ಕರ್ನಾಟಕದ ಒಂದು ಜಿಲ್ಲೆಯಲ್ಲಿ ಒಂದು ಸಕ್ಕರೆ ಕಾರ್ಖಾನೆ ಪ್ರಯೋಜಿಸಿದ ಸಹಕಾರಿಯ ಉಪವಿಧಿಗಳಲ್ಲಿ ಸಹಕಾರಿಯ ದುಡಿಯುವ ಬಂಡವಾಳದ ಶೇ.3ಕ್ಕೆ ಮಿರದಂತೆ ಮಂಡಳಿ ಸದಸ್ಯರಿಗೆ ಭತ್ಯೆಗಳನ್ನು ನೀಡಲು ಉಪವಿಧಿ ರಚಿಸಿ ಜಾರಿಗೆ ತಂದಿದೆ. ಆ ಸಹಕಾರಿ ತನ್ನ ಮಂಡಳಿ ಸದಸ್ಯರಿಗೆ ಸಭಾ ಭತ್ಯೆ ದರವನ್ನು ನಿಗದಿ ಪಡಿಸಿದೆ. ಅದು ಪ್ರತಿ ಮಂಡಳಿ ಸದಸ್ಯರಿಗೆ ಸಭಾ ಭತ್ಯೆ ಎಂದು ರೂ.25,000/– ಜಾರಿ ಮಾಡಿದೆ. ಇದರ ದುಡಿಯುವ ಬಂಡವಾಳ ಸುಮಾರು 450 ಕೋಟಿ ಇದ್ದರೆ ಶೇ.3 ರಷ್ಟು ಅಂದರೆ ಅದು ರೂ.15 ಕೋಟಿಯಾಗುತ್ತಿದೆ. ಇದನ್ನು ಸ್ವೇಚ್ಚತೆ ಎಂದು, ಮಂಡಳಿ ಸದಸ್ಯರಿಗೆ ತಿಳಿಯುತ್ತಿಲ್ಲವೇಕೆ. ಇದರ ಜೊತೆಗೆ ಮಂಡಳಿ ಸದಸ್ಯರು ಮೂಲ ಸಹಕಾರಿ ನೀತಿಯಂತೆ ಉಚಿತ ಸೇವೆ ಸಲ್ಲಿಸಬೇಕು. ಅಥವಾ ಆ ಸಭೆಗೆ ಹಾಜರಾಗಲು ತಗಲುವ ವೆಚ್ಚವನ್ನು ಭರಿಸುವಂತಿರಬೇಕು. ಉಚ್ಚನ್ಯಾಯಾಲಯ ಭತ್ಯೆಗಳನ್ನು ನೀಡುವಾಗ ಅವುಗಳಿಂದ ಲಾಭಗಳಿಸುವಂತಿರಬಾರದು ಎಂದು ಸೂಚಿಸಿದೆ.

ಇದರ ಜೊತೆಗೆ ಸಹಕಾರಿ ಮಂಡಳಿಗಳು ಗಮನಿಸಬೇಕಾದ ಮತ್ತೊಂದು ಪ್ರಮುಖ ಅಂಶವೆಂದರೆ, ಸಹಕಾರಿಯಿಂದ ಹಣ ಪಾವತಿ ಮಾಡುವಾಗ, ಅದು ಸಾಲ ಇರಬಹುದು ಅಥವಾ ದೇಣಿಗೆ ಇರಬಹುದು, ಮಂಡಳಿ ಸದಸ್ಯರೇ ವ್ಯಕ್ತಿಗತವಾಗಿ ಪಾವತಿ ಮಾಡಬೇಕಿದ್ದರೆ ಮಾಡುತ್ತಾರೆಯೇ ಎಂಬುದನ್ನು ಗಮನಿಸಿ ಒಪ್ಪಿಗೆ ನೀಡಬೇಕು. ಅಂದರೆ ಭದ್ರತೆ ಇಲ್ಲದ ಸಾಲಗಳು ತಾವೇ ಹಣ ವ್ಯಯಕ್ತಿಕವಾಗಿ ಸಾಲ ನೀಡಿದರೆ, ಕೊಡುತ್ತಾರೆಯೇ ಎಂಬುದನ್ನು ಗಮನಿಸಬೇಕು. ಸಹಕಾರಿ ಆಸ್ತಿಯನ್ನು ಬೇರೆಯವರ ಆಸ್ತಿ ಎಂದು ತಿಳಿಯದೆ, ತಾವು ಮಂಡಳಿ ಸದಸ್ಯರಿರುವಾಗ, ಜವಾಬ್ದಾರಿಯಿಂದ ಕಾರ್ಯನಿರ್ವಹಿಸಬೇಕಲ್ಲವೇ? ಆದರೆ ಸಹಕಾರಿಯ ಪದಾಧಿಕಾರಿ ಎಂಬ ಬಿರುದು ಪಡೆದು, ಸಹಕಾರಿಯ ಸ್ಥಾನವನ್ನು ಸ್ವಾರ್ಥಕ್ಕೆ ಅಥವಾ ಸ್ವಜನ ಪಕ್ಷಪಾತೆಯಾಗಿ ನಿರ್ವಹಿಸಬಾರದೆಂಬ ಭಾವನೆ ಏಕೆ ಬೆಳೆಸಿಕೊಳ್ಳಬೇಕು.

ಕೇಂದ್ರ ಕಛೇರಿ : "ಸೌಹಾರ್ದ ಸಹಕಾರಿ ಸೌಧ" ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055 ದೂ : 080–23378375–80, 23474408, 23573291
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು ದೂ: 080–23449933/34
ಇ–ಸ್ಟಾಂಪಿಂಗ್ ವಿಭಾಗ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇ–ಸ್ಟಾಂಪಿಂಗ ವಿಭಾಗ, ನೆಲ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055
ಬೆಂಗಳೂರು ಪ್ರಾಂತೀಯ ಕಛೇರಿ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ, ನೆಲ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055 ದೂ: 080–23525546.
ಮೈಸೂರು ಪ್ರಾಂತೀಯ ಕಛೇರಿ : ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು–570004, ದೂ: 0821–2332299
ಬೆಳಗಾವಿ ಪ್ರಾಂತೀಯ ಕಛೇರಿ : 1119/ಬಿ, ಕಣಬರ್ಗಿ ಇಂಡಸ್ಟ್ರಿಯಲ್ ಏರಿಯಾ, ರೂರಲ್ ಆಯುರ್ವೇದಿಕ ಕಾಲೇಜ ಹತ್ತಿರ, ಆಟೋ ನಗರ, ಬೆಳಗಾವಿ–590015 ದೂರವಾಣಿ: 0831–2401551.
ಕಲಬುರಗಿ ಪ್ರಾಂತೀಯ ಕಛೇರಿ : ಶಿವಶರಣ ನಿಲಯ, ದೇವತಾ ಆಸ್ಪತ್ರೆ ಎದುರುಗಡೆ, ಖೂಬಾ ಪ್ಲಾಟ್, ಕಲಬುರಗಿ – 585102 ದೂ: 08472–270222

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., Nirman Bhavan complex, Dr. Rajkumar Road, 1st Black, Rajajinagar, Bengaluru-560 010